
ಜನಶಕ್ತಿ



ಕನ್ನಡ ವಾರಪತ್ರಿಕೆ
Blog : janashakthi.wordpress.com e-mail : js_weekly@yahoo.com
ಸಂಪುಟ 7 ಸಂಚಿಕೆ 25
ಜೂನ್ 23, 2013 ಪುಟ 16 ರೂ. 10/-




- ಅದ್ವಾನಿ ಪ್ರತಿಭಟನೆ
- ಮೋದಿಯ ಬೆನ್ನು ಕಟ್ಟಿದ ಆರೆಸ್ಸೆಸ್


ನಾಯಕತ್ವದ ಪಲ್ಲಟದಲ್ಲಿ ಬಿಜೆಪಿ

ಮರಣ ದಂಡನೆ ಶಿಕ್ಷೆ: ಎಷ್ಟು ಸರಿ?





ರಾಜ್ಯಪಾಲರ ಭಾಷಣ : ಸಿಹಿ ಲೇಪಿತ ವಿಷ




ಕದನ ಪೂರ್ವಸಿದ್ಧತೆಯಲ್ಲಿ ಪೇಜಾವರರು



ಆಹಾರ, ಮನೆ ನಿವೇಶನ, ಉದ್ಯೋಗ ಖಾತ್ರಿ...

ಜೀವನಾಧಾರದ ಅಗತ್ಯಗಳಿಗಾಗಿ ಚಳುವಳಿ



ಕಾಣೆಯಾಗುತ್ತಿದ್ದಾರೆ ರೈತರು !

ದಿನನಿತ್ಯದ ಅಗತ್ಯತೆಗಳು–ಆರೋಗ್ಯ ನಿರ್ಧರಿಸುವ ಸಾಮಾಜಿಕ ಅಂಶಗಳು

ಮಾನವನ ದಿನನಿತ್ಯದ ಅಗತ್ಯಗಳೆಂದರೆ ಸ್ವಚ್ಛ ಕುಡಿಯುವ ನೀರು, ಪೌಷ್ಟಿಕ ಆಹಾರ, ಶಿಕ್ಷಣ, ನೈರ್ಮಲ್ಯ, ಉದ್ಯೋಗ, ಬದುಕಲು ಯೋಗ್ಯವಾದ ವಸತಿ ಗೃಹ. ಇವುಗಳ ಪೂರೈಕೆಯಿಂದ ಮಾತ್ರ ಜನರ ಜೀವನಮಟ್ಟ ಸುಧಾರಣೆಯಾಗಲು ಸಾಧ್ಯ ಹಾಗೂ ಆರೋಗ್ಯ ಸುಧಾರಣೆ ಸಾಧ್ಯ.

ಆರೋಗ್ಯ ಸುಧಾರಣೆಗೆ ಕೇವಲ ಔಷಧಿ ಹಾಗೂ ಆಸ್ಪತ್ರೆಗಳಿಗೆ ಗಮನಹರಿಸಿದರೆ ಸಾಲದು. ವಿಶ್ವ ಆರೋಗ್ಯ ಸಂಸ್ಥೆ ಸ್ವಚ್ಛ ಕುಡಿಯುವ ನೀರು, ಪೌಷ್ಟಿಕ ಆಹಾರ, ಶಿಕ್ಷಣ, ನೈರ್ಮಲ್ಯ, ಉದ್ಯೋಗ, ಒಳ್ಳೆಯ ಮನೆ ಸಾಮಾಜಿಕ ನಿರ್ಧಾರಗಳನ್ನೂ ಜನರಿಗೆ ಒದಗಿಸಲು ಹಾಗೂ ಆದ್ಯತೆ ನೀಡಲು ಸರಕಾರಗಳ ಮೇಲೆ ಒತ್ತಡ ತರುತ್ತಿದೆ. ಆರೋಗ್ಯ ನಿರ್ಧಾರತೆಗಳ ಮೇಲೆ ಹಣ ಹೂಡಿಕೆ ಎಂದರೆ ವೆಚ್ಚವಲ್ಲ, ಅದು ಆರ್ಥಿಕ ಹಾಗೂ ಸಾಮಾಜಿಕ ಸಮೃದ್ಧಿಯಲ್ಲಿ ಹಣ ಹೂಡಿಕೆ. ಈ ಎಲ್ಲವುಗಳನ್ನು ದೊರಕಿಸಿ ಕೊಡುವುದು ಕಷ್ಟದ ಮಾತಲ್ಲ ಹಾಗೂ ಪ್ರಜಾಪ್ರಭುತ್ವದಲ್ಲಿ ಸರ್ಕಾರದ ಕರ್ತವ್ಯ ಕೂಡ.



ಕುಡಿಯುವ ನೀರು

ಬೇಸಿಗೆ ಬಂದರೆ ಮಾತ್ರ ನಾವು ನೀರಿನ ಬಗ್ಗೆ ಪತ್ರಿಕೆಗಳಲ್ಲಿ ಹೇಳಿಕೆಗಳನ್ನು ನೋಡುತ್ತೇವೆ. "ನೀರು ಸರಬರಾಜು ಮಾಡಲು 50 ಕೋಟಿ ರೂ. ಮಂಜೂರಿ" ಸರಕಾರ ಜನರಿಗೆ ಈ ಹೇಳಿಕೆ ನೀಡಿ ಹೆಸರು ಗಿಟ್ಟಿಸಲು ಪ್ರಯತ್ನ ಮಾಡುತ್ತದೆಯಷ್ಟೆ. ಇನ್ನು ಕೆಲವು ಸ್ಥಳಗಳಲ್ಲಿ ಸ್ಥಳೀಯ ಕೌನ್ಸಿಲರ್ ಹಾಗೂ ಎಂಎಲ್ಎ ಗಳು "ಉಚಿತ ಕುಡಿಯುವ ನೀರು" ಸರಬರಾಜು ಮಾಡುತ್ತಾ ಚುನಾವಣೆಗೆ ತಯಾರಿ ನಡೆಸುತ್ತಾರೆ. ಕುಡಿಯುವ ನೀರಿನ ಬಗ್ಗೆ ಸರಕಾರ ನಿರ್ಲಕ್ಷೆ ತೋರಿಸಿದೆ. ಇಂದಿಗೂ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಅಗತ್ಯವಾದ ನೀರನ್ನು ದೊರಕಿಸಿಕೊಡದೇ ಇರುವುದು ಒಪ್ಪಲಾಗದ ಮಾತು. ಒಂದು ಅಧ್ಯಯನದ ಪ್ರಕಾರ (NCEAR) 52% ಜನರು ಅಸುರಕ್ಷಿತ ನೀರನ್ನು ಉಪಯೋಗಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ 48% ಜನರು ಹಾಗೂ ಪಟ್ಟಣಗಳಲ್ಲಿ 71.2% ಜನರು (ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ) ಕೊಳಾಯಿ ನೀರನ್ನು ಉಪಯೋಗಿಸುತ್ತಿದ್ದಾರೆ. ಕುಡಿಯುವ ನೀರಿನ ಬಗ್ಗೆ ಆರ್ಥಿಕ ತಜ್ಞರು ತಲೆ ಕೆಡಿಸಿಕೊಂಡಿಲ್ಲವೆಂಬುದು ಸತ್ಯ.

ಈಗ ನೀರಿನ ಸಮಸ್ಯೆ ಇನ್ನೊಂದು ಹಂತ ತಲುಪಿದೆ. ನೀರು ಸರಬರಾಜನ್ನು ಖಾಸಗೀಕರಿಸುವ ಪ್ರಯತ್ನ ಮಾಡಲಾಗುತ್ತಿದೆ. ಅಂದರೆ ಕುಡಿಯುವ ನೀರಿಗೆ ಹಣ ಕೊಡಬೇಕಾಗುತ್ತದೆ. ಬಾಟಲಿ ನೀರಿನ ಉದ್ಯಮ ಹೆಚ್ಚುತ್ತಿದೆ. ಬೇಸಿಗೆ ಕಾಲದಲ್ಲಿ ನೀರಿನಿಂದ ಉಂಟಾಗುವ ರೋಗಗಳನ್ನು ತಡೆಗಟ್ಟಲು ಸಾಧ್ಯವಾಗುವುದಿಲ್ಲ. ಶಾಶ್ವತ ನೀರಾವರಿ ಯೋಜನೆಯನ್ನು ಸರಕಾರ ಕೈಗೆತ್ತಿಕೊಳ್ಳುತ್ತಿಲ್ಲವೆಂಬುದು ಸತ್ಯ.

ನೈರ್ಮಲ್ಯ ಸಾಧನೆ :


ಗಾಂಧೀಜಿಯವರು ನೈರ್ಮಲ್ಯ ಸಾಧನೆಗೆ ಒತ್ತು ಕೊಟ್ಟಿದ್ದರೆಂಬುದನ್ನು ಮರೆಯಲಾಗುವುದಿಲ್ಲ. ಆರೋಗ್ಯ ಸಾಧನೆಗೆ ನೈರ್ಮಲ್ಯ ಅತ್ಯಗತ್ಯ. ನೈರ್ಮಲ್ಯ ಸಾಧಿಸಲು ಶೌಚಾಲಯದ ಬಳಕೆ ಕಡ್ಡಾಯವೆನಿಸುತ್ತದೆ. ಭಾರತದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕೇವಲ 21.9% ಜನರು ಶೌಚಾಲಯ ಬಳಸಿದರೆ ಪಟ್ಟಣಗಳಲ್ಲಿ 82.7% ಜನರು ಶೌಚಾಲಯ ಬಳಸುತ್ತಾರೆ. ಈ ಸಾಧನೆಯಲ್ಲಿ ನಾವು ಜಗತ್ತಿನ ಬಡದೇಶಗಳಿಗಿಂತ ಹಿಂದೆ ಬಿದ್ದಿದ್ದೇವೆ. ಉದಾ: ಕೀನ್ಯಾದಲ್ಲಿ ಒಟ್ಟಾರೆ 81% ಜನ ಶೌಚಾಲಯ ಬಳಸುತ್ತಾರೆ. ಟಾಂಝಾನಿಯಾ 86%, ನೈಜೀರಿಯಾ 41%, ಉಗಾಂಡಾ 57%, ಶ್ರೀಲಂಕಾ 63%, ಪಾಕಿಸ್ತಾನ 56%. ಇದಕ್ಕೆ ಮುಖ್ಯ ಕಾರಣ ಭಾರತದಲ್ಲಿ ಜನರು ಶೌಚಾಲಯ ಬಳಸಲು ಮುಂದಾಗುತ್ತಿಲ್ಲ ಹಾಗೂ ಸರಕಾರ ಜನರಿಗೆ ಅಗತ್ಯ ಮಾಹಿತಿ ನೀಡಿ ನಡವಳಿಕೆ ಬದಲಿಸಲು ಪ್ರಯತ್ನಿಸುತ್ತಿಲ್ಲ. ನೈರ್ಮಲ್ಯ ಸಾಧನೆಗೆ ಖಾಸಗಿ ಕ್ಷೇತ್ರವು ಮುಂದೆ ಬರುತ್ತಿಲ್ಲ! ಇದರ ಪರಿಣಾಮವಾಗಿ ನಮ್ಮ ದೇಶದಲ್ಲಿ ಸೊಳ್ಳೆ ಹತೋಟಿ ಸಾಧನಗಳ ಬಹುಕೋಟಿ ಉದ್ಯಮ ತಲೆ ಎತ್ತಿ ನಿಂತಿದೆ!! ಇಂದಿನ ದಿನದ ಕಸವಿಲೇವಾರಿ ಸಮಸ್ಯೆ ಯಾರಿಗೆ ಗೊತ್ತಿಲ್ಲ?

ಶಿಕ್ಷಣ:

ಶಾಲೆ ಇದ್ದ ಸಮಾಜದಲ್ಲಿ ಆರೋಗ್ಯದ ಸೂಚ್ಯಾಂಕಗಳು ಶಾಲೆ ಇರದ ಅನಕ್ಷರಸ್ತರು ಹೆಚ್ಚಿರುವ ಸಮಾಜಕ್ಕಿಂತ ಹೆಚ್ಚು ಉತ್ತಮವಾಗಿದೆಯೆಂದು ಅಧ್ಯಯನಗಳು ತಿಳಿಸುತ್ತವೆ. ಯಾವುದೇ ಸರಕಾರದ ಕನಿಷ್ಠ ಗುರಿ ಪ್ರಾಥಮಿಕ ಶಿಕ್ಷಣವನ್ನು ದೊರಕಿಸಿ ಕೊಡುವುದಾಗಬೇಕು. ಈ ಐದು ದಶಕಗಳಲ್ಲಿ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಶಾಲೆ ಇಲ್ಲದ ಹಳ್ಳಿಗಳ ಸಂಖ್ಯೆ ಕಡಿಮೆಯಾಗಿದೆ ನಿಜ. ಆದರೆ, ಪ್ರಾಥಮಿಕ ಶಿಕ್ಷಣವನ್ನು ನಾವು ಸಾಧಿಸಲಾಗಿಲ್ಲ. ಇದಕ್ಕೆ ಕಾರಣ ಮಕ್ಕಳು ಶಾಲೆಗಳಿಂದ ಹೊರಬರುವುದು(DROPOUT). ಈ ಸಮಸ್ಯೆ ಭಾರತಕ್ಕೆ ವಿಶೇಷವಾದದ್ದು. ಶಾಲೆಗೆ ಸೇರಿದ ಮಕ್ಕಳು ಪ್ರಾರಂಭದ ಹಂತದಲ್ಲಿಯೇ ಶಾಲೆ ಬಿಡುತ್ತಾರೆ. ಇದಕ್ಕೆ ಹಲವಾರು ಕಾರಣಗಳಿವೆ. 1. ಮಕ್ಕಳನ್ನು ಕೆಲಸಕ್ಕೆ ಕಳಿಸಿದಾಗಲೇ ಮನೆಯಲ್ಲಿ ಎಲ್ಲರೂ ಬದುಕಲು ಸಾಧ್ಯ. 2. ಶಾಲೆಗೆ ಕಳುಹಿಸಿದರೆ ಕೆಲಸ ಸಿಗುತ್ತದೆಯೆಂಬ ಭರವಸೆ ಇಲ್ಲದಿರುವುದು. 3. ಶಾಲೆ ಸೇರಿ ಮುಂದುವರೆಯಲು ಹಣದ ಅಗತ್ಯವಿರುತ್ತದೆ. ಸಂವಿಧಾನ ಮಕ್ಕಳಿಗೆ 14 ವರ್ಷದವರೆಗೆ ಉಚಿತ ಶಿಕ್ಷಣ ಎಂದು ಹೇಳಿದರೂ ಅದು ಸಾಧ್ಯವಾಗುತ್ತಿಲ್ಲ. ಶಾಲೆಗಳಿದ್ದರೂ ಸೌಕರ್ಯ ಸರಿಯಾಗಿ ಇರದೇ ಇರುವುದು, ಗುಣಮಟ್ಟದ ಶಿಕ್ಷಣ ಇಲ್ಲದೇ ಇರುವುದು ಕಂಡು ಬರುತ್ತದೆ.



ಉದಾರೀಕರಣ ನೀತಿಯಿಂದಾಗಿ ಶಿಕ್ಷಣಕ್ಕೆ ಕಡಿಮೆ ಹಣಕಾಸು ದೊರಕುತ್ತದೆ. ಶಾಲೆಗಳಲ್ಲಿ ಖಾಸಗೀ ಶಾಲೆಗಳಿಗೆ ಮಹತ್ವ ಉಂಟಾಗುತ್ತಿದೆ. 1998ರಲ್ಲಿ ಭಾರತ, ಶಿಕ್ಷಣಕ್ಕೆ ಒಟ್ಟು ಆದಾಯದ ಪ್ರತಿಶತ 3 ರಷ್ಟು ಖರ್ಚು ಮಾಡುತಿತ್ತು. ಆದರೆ ಕೊಠಾರಿ ಸಮಿತಿ ವರದಿ ಒಟ್ಟು ಆದಾಯದ ಪ್ರತಿಶತ 6ರಷ್ಟು ಶಿಕ್ಷಣಕ್ಕೆ ಖರ್ಚು ಮಾಡಲು ಶಿಫಾರಸ್ಸು ಮಾಡುತ್ತದೆ. ಇದೇ ಸಮಯದಲ್ಲಿ ವಿಶ್ವಬ್ಯಾಂಕ್ ಸುರಕ್ಷಾ ಜಾಲ ನಿರ್ಮಿಸಲು ಡಿಪಿಇಪಿ ಕಾರ್ಯಕ್ರಮಕ್ಕೆ ಸಾಲಕೊಟ್ಟಿತು. ಅದನ್ನು ಭಾರತ ಸರಕಾರ



1992ರಲ್ಲಿ ಸ್ವೀಕರಿಸಿತು. ಈ ಕಾರ್ಯಕ್ರಮ ಶಿಕ್ಷಣ ಕ್ಷೇತ್ರವನ್ನು ನಿಯಂತ್ರಿಸುವಂತಾಗಿದೆ. ಈಗ ಸರ್ವಶಿಕ್ಷಣ ಅಭಿಯಾನ ಅದರ ಬದಲು ಜಾರಿಯಲ್ಲಿದೆ. ಮೂಲಭೂತ ಶಿಕ್ಷಣ ಎಲ್ಲರ ಹಕ್ಕು. ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಬೇಕು. ಬಾಲಕಾರ್ಮಿಕ ಪದ್ಧತಿ ನಿವಾರಣೆಯಾಗಬೇಕು. ಶಾಲೆಗಳಲ್ಲಿ ಸೌಲಭ್ಯಗಳು ಉತ್ತಮಗೊಳ್ಳಬೇಕು. ಮಧ್ಯಾಹ್ನದ ಊಟ, ಉಚಿತ ಪುಸ್ತಕ ದೊರಕಬೇಕು. ಆಗಲೇ ಶಿಕ್ಷಣ ಕ್ಷೇತ್ರ ಉತ್ತಮಗೊಂಡಂತೆ.

ಉದ್ಯೋಗ

ಉದ್ಯೋಗ, ದುಡಿಮೆ ವ್ಯಕ್ತಿ ಹಾಗು ಕುಟುಂಬದ ಸುರಕ್ಷತೆ[illegible] ಸಹಾಯವಾಗುತ್ತದೆ. ಈಗಿನ ದಿನಗಳಲ್ಲಿ ಉದ್ಯೋಗಗಳ[illegible] ಹೆಚ್ಚುವುದರ ಬದಲ[illegible] ಕಡಿಮೆಯಾಗುತ್ತವೆ. ಅಸಂಘಟಿತ ಕ್ಷೇತ್ರ ಹೆಚ್ಚುತ್ತಲಿದೆ. ಇದು ಜನಜೀವನದ ಮೇಲೆ ನೇರ ಪ್ರಭಾವ ಬೀರಲಿದೆ. ಇದೇ ಸಮಯದಲ್ಲಿ ಬೆಲೆ ಏರಿಕೆ, ಜನಜೀವನದ ಮೇಲೆ ಪ್ರಭಾವ ಬೀರಿದೆ. ಪರಿಸರನಾಶದಿಂದ ಜನರ ಜೀವನ ಅಸ್ತವ್ಯಸ್ತಗೊಂಡಿದೆ. ಒಂದು ಅಧ್ಯಯನದ ಪ್ರಕಾರ ದುಡಿಮೆಯ [illegible] 1.44 (1991) ರಿಂದ 0.67% (1997)ಗೆ ಇಳಿದಿದೆ. ಇತ್ತೀಚಿನ ದಿನಗಳಲ್ಲಿ ಅಸಂಘಟಿತ ಕ್ಷೇತ್ರ ಬೆಳೆಯುತ್ತಿದೆ ಹಾಗೂ ಉದ್ಯೋಗ ಅಸುರಕ್ಷಿತವಾಗಿದೆ.

ಅಸಂಘಟಿತ ಕ್ಷೇತ್ರದಲ್ಲಿ ಭವಿಷ್ಯನಿಧಿ (ಪ್ರಾವಿಡೆಂಟ್ ಫಂಡ್) ಪ್ರಸೂತಿ ರಜೆ, ವೈದ್ಯಕೀಯ ರಜೆ ಮುಂತಾದವುಗಳು ದೊರಕುತ್ತಿಲ್ಲ, ಭಾರತದಲ್ಲಿ ಪ್ರತಿಶತ 90 ರಷ್ಟು ಜನ ಅಸಂಘಟಿತ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ.

ಉದ್ಯೋಗದಲ್ಲಿ ಶೇಕಡಾವಾರು ಕಡಿತ 61.4% (1992) ರಿಂದ 54.8% (1994)ಕ್ಕೆ. ಅಸಂಘಟಿತ ಕ್ಷೇತ್ರದಲ್ಲಿ ಉದ್ಯೋಗದ ಹೆಚ್ಚಳ 23.2% (1972) 32% (1994). ಇದಲ್ಲದೆ ಉದ್ಯೋಗದ ಸಾಂದರ್ಭೀಕರಣ ಹೆಚ್ಚುತ್ತಿದೆ. ಅದೂ ಮಹಿಳೆಯರಲ್ಲಿ ಹೆ[illegible] ಈಗ ಪ್ರತಿಶತ 60 ರಷ್ಟು ಮಹಿಳೆಯರು ಸಾಂದರ್ಭಿಕ ಉದ್ಯೋಗದಲ್ಲಿ ಕೆಲಸ ಮಾಡುತ್ತಾರೆ. ಸಾಂದರ್ಭಿಕ ಉದ್ಯೋಗದಲ್ಲಿ ಕಡಿಮೆ ದುಡಿಮೆ ಇರುತ್ತದೆ ಖಾಸಗೀಕರಣದಿಂದ ಸಾಂದರ್ಭಿಕ ಉದ್ಯೋಗಗಳು ಹೆಚ್ಚುತ್ತಲಿದೆ.

ಭಾರತದಲ್ಲಿ 6 ಕೋಟಿ ಜನರು (ಜನಸಂಖ್ಯೆಯ ಸು. 6%) ದಿನಕ್ಕೆ ಕೇವಲ 3[illegible] ರೂ. ಮೇಲೆ ಜೀವಿಸುತ್ತಿದ್ದಾರೆ (ಮೊದಲನೇ ಮಾನವ ಬೆಳವಣಿಗೆ ಸೂಚ್ಯಾಂಕ ವರದಿ.)

ಜನಾರೋಗ್ಯ ಸುಧಾರಣೆಯಾಗಬೇಕಾದರೆ, ಈ ಕೆಲವು ಮುಖ್ಯ ವಿಷಯಗಳ ಬಗ್ಗೆ ಸರಕಾರ ಗಮನ ಹರಿಸಬೇಕು. ಇವುಗಳಿಲ್ಲದೆ ಆರೋಗ್ಯ ಸುಧಾರಿಸುವುದಿಲ್ಲ. ಹಾಗ[illegible] ಇವುಗಳ ಕೊರತೆ ಇದ್ದಲ್ಲಿ ಜನರು ಸರ್ಕಾ[illegible] ಮೇಲೆ ಒತ್ತಡ ತರಬೇಕು.

ಸಂಪಾದಕೀಯ

ರೈತರು ಕಾಣೆಯಾಗುತ್ತಿದ್ದಾರೆ!

ಕರ್ನಾಟಕ ಜನಸಂಖ್ಯಾ ನಿರ್ದೇಶನಾಲಯವೂ ಕೊನೆಗೂ 2011 ರ ಜನಗಣತಿಯ ಅಂತಿಮ ಅಂಕಿಸಂಖ್ಯೆಗಳನ್ನು ಇತ್ತೀಚೆಗೆ ಬಿಡುಗಡೆ ಮಾಡಿದೆ. 2011 ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ಈಗ 6,11,30,704 ಜನರಿದ್ದಾರೆ. 2001 ರಲ್ಲಿ 5,27,33,958 ಜನರಿದ್ದರು. ನಮ್ಮ ರಾಜ್ಯದ ಜನಸಂಖ್ಯೆಯ ವಾರ್ಷಿಕ ಬೆಳವಣಿಗೆಯ ಪ್ರಮಾಣ 1991–2001 ರ ಅವಧಿಯಲ್ಲಿ ಶೇ. 1.75 ರಷ್ಟಿತ್ತು. ಇದು 2001–2011 ರ ಅವಧಿಯಲ್ಲಿ ಶೇ. 1.56 ಕ್ಕೆ ಇಳಿದಿದೆ. ಒಟ್ಟು ಮೊತ್ತದಲ್ಲಿ ಜನಸಂಖ್ಯೆ ಏರಿಕೆಯಾಗಿದೆ. ಆದರೆ ಏರಿಕೆಯ ಗತಿಯು ಇಳಿಮುಖವಾಗಿದೆ. ಇದೊಂದು ಸ್ವಾಗತಾರ್ಹ ವಿದ್ಯಮಾನ ಎಂದೇ ಹೇಳಬಹುದು.

ಆದರೆ ಜನ ಗಣತಿಯ ಅಂಕಿಅಂಶಗಳನ್ನು ವಿಶ್ಲೇಷಿಸುವಾಗ ಕೆಲವೊಂದು ಆಘಾತಕಾರಿ ಅಂಶಗಳ ಸಹ ಎದುರಾಗುತ್ತಿವೆ. ಉದಾಹರಣೆಗೆ, ರಾಜ್ಯದಲ್ಲಿ ಭೂ ಹಿಡುವಳಿದಾರರ (ರೈತರು) ಸಂಖ್ಯೆ ಇಳಿಮುಖವಾಗಿದೆ. 2001 ರಲ್ಲಿ 68.83 ಲಕ್ಷದಷ್ಟಿದ್ದ ಭೂಹಿಡುವಳಿದಾರರ ಸಂಖ್ಯೆ 2011 ರಲ್ಲಿ 65.80 ಲಕ್ಷಕ್ಕೆ ಇಳಿದಿದೆ. ಅಂದರೆ ಕಳೆದ ಒಂದು ದಶಕದಲ್ಲಿ ರೈತರ ಸಂಖ್ಯೆ 3.03 ಲಕ್ಷದಷ್ಟು ಕಡಿಮೆಯಾಗಿದೆ.

ಅದೇ ಸಂದರ್ಭದಲ್ಲಿ ಭೂರಹಿತ ಕೃಷಿ ಕೂಲಿಕಾರರ ಸಂಖ್ಯೆ 2001 ರಲ್ಲಿ 62.26 ಲಕ್ಷದಷ್ಟಿದ್ದದು 2011 ರಲ್ಲಿ 71.56 ಲಕ್ಷದಷ್ಟಾಗಿದೆ. ಅಂದರೆ ಕಳೆದ 10 ವರ್ಷಗಳಲ್ಲಿ ಭೂರಹಿತ ಕೃಷಿ ಕೂಲಿಕಾರರ ಸಂಖ್ಯೆ 9.30 ಲಕ್ಷದಷ್ಟು ಹೆಚ್ಚಾಗಿದೆ. ಇದರ ಅಥವೇನು?

ಇದರ ಅರ್ಥ, ನಮ್ಮ ರಾಜ್ಯದಲ್ಲಿದ್ದ ಸಣ್ಣ ಮತ್ತು ಅತಿ ಸಣ್ಣ ರೈತರು ವ್ಯವಸಾಯವನ್ನು ನಿಭಾಯಿಸಲು ಸಾಧ್ಯವಾಗದೆ ಆ ವೃತ್ತಿಯನ್ನೇ ತೊರೆದು ಕೂಲಿಕಾರರಾಗುತ್ತಿದ್ದಾರೆ ಅಥವ ನಗರ ಪ್ರದೇಶಗಳಲ್ಲಿ ಅಸಂಘಟಿತ ವಲಯದ ದುಡಿಮೆಗಾರರಾಗುತ್ತಿದ್ದಾರೆ. ಇದರ ಅರ್ಥ ವ್ಯವಸಾಯ ಎನ್ನುವುದು ಬಿಕ್ಕಟ್ಟುಗ್ರಸ್ತ ವೃತ್ತಿಯಾಗಿದೆ. ಅದೊಂದು ಲಾಭದಾಯಕ ವೃತ್ತಿಯಾಗಿ ಉಳಿದಿಲ್ಲ. ಒಬ್ಬ ಸಣ್ಣ ರೈತ ತನ್ನ ತುಂಡು ಭೂಮಿಯಲ್ಲಿ ದುಬಾರಿ ಬೀಜ ತಂದು ಬಿತ್ತಿ, ದುಬಾರಿ ಗೊಬ್ಬರ ತಂದು ಹಾಕಿ, ದುಬಾರಿ ಕ್ರಿಮಿನಾಶಕಗಳನ್ನು ಸಿಂಪಡಿಸಿ ಬೆಳೆ ಬೆಳೆಯಲು ಸಾಲ ಮಾಡಲೇಬೇಕು. ಕಷ್ಟಪಟ್ಟು, ಸಾಲ ಮಾಡಿ ಬೆಳೆದ ಫಸಲು ಸರಿಯಾಗಿ ಕೈಗೆ ಬಂದರೂ ಯೋಗ್ಯ ಬೆಲೆ ಸಿಗದೆ ರೈತ ನಷ್ಟಕ್ಕೀಡಾಗುತ್ತಾನೆ. ಬೆಳೆದದೆಲ್ಲವೂ ಸಾಲ ಮರುಪಾವತಿಗೆ ಸಲ್ಲುತ್ತದೆ. ಮತ್ತೆ ಕುಟುಂಬ ನಿರ್ವಹಣೆಗೆ ಸಾಲ ಮಾಡಬೇಕಾಗುತ್ತದೆ. ಈ ಸಾಲದ ವಿಷವರ್ತುಲದಿಂದ ಹೊರಬರಲಾಗದೆ ಕೆಲವು ರೈತರು ಆತ್ಮಹತ್ಯೆ ಮಾಡಿಕೊಳ್ಳುವುದರಲ್ಲಿ ಪರಿಹಾರ ಕಂಡುಕೊಳ್ಳುತ್ತಾರೆ. ಬಹಳಷ್ಟು ರೈತರು ವ್ಯವಸಾಯ ವೃತ್ತಿಯನ್ನೇ ಬಿಟ್ಟು, ಇರುವ ತುಂಡು ಭೂಮಿಯನ್ನು ಸಿಕ್ಕಷ್ಟು ಬೆಲೆಗೆ ಮಾರಾಟ ಮಾಡಿ ದಿನಗೂಲಿ ದುಡಿಮೆಗಾರರಾಗುತ್ತಾರೆ. ಇದರಿಂದಾಗಿಯೇ, ರೈತರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಇದು ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾದ ವಿದ್ಯಮಾನವಲ್ಲ. ಇಡೀ ದೇಶದಲ್ಲಿ ಕೃಷಿಕರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಇಳಿಮುಖವಾಗುತ್ತಿದೆ. ಒಂದು ಅಧ್ಯಯನದ ಪ್ರಕಾರ, ದೇಶದಲ್ಲಿ, ಕಳೆದ ಎರಡು ದಶಕಗಳಲ್ಲಿ 80 ಲಕ್ಷಕ್ಕೂ ಹೆಚ್ಚು ರೈತರು ವ್ಯವಸಾಯವನ್ನು ತೊರೆದಿದ್ದಾರೆ.


ರೈತರ ಈ ದುಸ್ಥಿತಿಗೆ ಅವರ ಹಣೆ ಬರಹ ಕಾರಣವಲ್ಲ. ಯಾವ ದುಷ್ಟ ಶಕ್ತಿಯ ಶಾಪವೂ ಕಾರಣವಲ್ಲ. ರೈತರು ತಮ್ಮ ಭೂಮಿಯನ್ನು ಕಳೆದುಕೊಂಡು ನಿರ್ಗತಿಕರಾಗುತ್ತಿರುವುದಕ್ಕೆ ನಮ್ಮ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಳೆದ ಎರಡು ದಶಕಗಳಿಂದ ಅನುಸರಿಸುತ್ತಿರುವ ಹಾಳಿಕೋರ ಉದಾರೀಕರಣದ ನೀತಿಗಳೇ ಕಾರಣ. ಈ ನೀತಿಗಳ ಪರಿಣಾಮವಾಗಿ ರೈತರಿಗೆ ಪ್ರೋತ್ಸಾಹದಾಯಕ ಸಬ್ಸಿಡಿಗಳು ಸಿಗುವುದಿಲ್ಲ. ಅಗ್ಗದ ದರಗಳ ಸಾಂಸ್ಥಿಕ ಸಾಲ ದೊರೆಯವುದಿಲ್ಲ. ಬೆಳೆದ ಫಸಲಿಗೆ ಲಾಭದಾಯಕ ಬೆಲೆ ದೊರಕಿಸಲಾಗುತ್ತಿಲ್ಲ. ವ್ಯವಸಾಯ ಮಾಡಿ ನಷ್ಟಕ್ಕೊಳಗಾಗುವುದು ಖಚಿತವಾಗಿರುವುದರಿಂದ ರೈತರು ಗ್ರಾಮಗಳನ್ನು ತೊರೆದು ನಗರಗಳಿಗೆ ಬಂದು ಸೇರಿಕೊಳ್ಳುತ್ತಿದ್ದಾರೆ.

ಅತ್ಯಂತ ಆಘಾತದ ವಿಷಯವೇನೆಂದರೆ, ಸರ್ಕಾರಗಳು ಇದನ್ನೇ ಬಯಸುತ್ತಿವೆ. ಹಿಂದಿನ ಬಿಜೆಪಿ ರಾಜ್ಯ ಸರ್ಕಾರದ ದೂರದೃಷ್ಟಿ–2020 ಎಂಬ ಯೋಜನೆಯಲ್ಲಿ ಇದನ್ನೇ ಪ್ರತಿಪಾದಿಸಲಾಗಿದೆ. 2022 ರ ವೇಳೆಗೆ ರಾಜ್ಯದಲ್ಲಿ ವ್ಯವಸಾಯ ನಿರತ ದುಡಿಯುವ ಜನಗಳನ್ನು ಇಂದಿನ ಶೇ.61ರಿಂದ ಶೇ.35–40ಕ್ಕೆ ಇಳಿಸುವುದು ಬಿಜೆಪಿ ಸರ್ಕಾರದ ದೂರದೃಷ್ಟಿಯಾಗಿತ್ತು. ಅಂದರೆ ಪ್ರತಿವರ್ಷ ಸುಮಾರು 4ರಿಂದ 5ಲಕ್ಷ ರೈತ–ಕೃಷಿಕೂಲಿಕಾರರನ್ನು ವ್ಯವಸಾಯದಿಂದ ಬಿಡಿಸಿ ಕೃಷಿಯೇತರ ಕೆಲಸಗಳಲ್ಲಿ ತೊಡಗಿಸುವುದು. ರೈತರನ್ನು ಬಲವಂತವಾಗಿ ವ್ಯವಸಾಯ ವೃತ್ತಿಯಿಂದ ಬಿಡಿಸಲು ಪಯತ್ನಿಸುವ ಬದಲು ರೈತರನ್ನು ದಿವಾಳಿಗೆಬ್ಬಿಸಿ, ಅವರಾಗಿಯೇ ತಮ್ಮ ಭೂಮಿಯನ್ನು ಕಳೆದುಕೊಂಡು, ನಿರ್ಗತಿಕರಾಗಿ ನಗರ ಪ್ರದೇಶಗಳಿಗೆ ಬಂದು ಅಸಂಘಟಿತ ದುಡಿಮೆಗಾರರಾಗಿ ಲಭ್ಯವಾಗಬೇಕೆಂಬುದೇ ಅದರ ಉದ್ದೇಶವಾಗಿದೆ.

ಇದು ಬಿಜೆಪಿ ರಾಜ್ಯ ಸರ್ಕಾರದ ನೀತಿ ಮಾತ್ರ ಅಲ್ಲ. ಅದು ಮೂಲತಃ ಕೇಂದ್ರ ಕಾಂಗ್ರೆಸ್ ಸರ್ಕಾರದ ನೀತಿಯಾಗಿದೆ. ಭಾರತ– ಅಮೇರಿಕಾ ಕೃಷಿ ಒಪ್ಪಂದಕ್ಕೆ ಸಹಿ ಹಾಕಿ ಮಾನ್ಸಾಂಟೊ, ಕಾರ್ಗಿಲ್, ಬೇಯರ್, ಪೆಪ್ಸಿಕೋ ಮುಂತಾದ ದೈತ್ಯ ಬಹುರಾಷ್ಟ್ರೀಯ ಕಂಪನಿಗಳಿಗೆ ಕೃಷಿಯಲ್ಲಿ ವ್ಯಾಪಾರ ಮಾಡಲು ಅನುಮತಿ ನೀಡಲಾಗುತ್ತಿದೆ. ರೈತರ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿ ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡುವ ಮೂಲಕ ದೇಶದಲ್ಲಿ ಕಂಪನಿ ಕೃಷಿಯನ್ನು ಆರಂಭಿಸುವ ಹುನ್ನಾರಗಳು ನಡೆದಿವೆ. ರೈತ ತನ್ನ ಸ್ವಂತ ಭೂಮಿಯಲ್ಲೇ ಕೂಲಿಕಾರನಾಗಿ ಬದುಕು ಸವೆಸುವ ದಿನಗಳು ದೂರವಿಲ್ಲ. ರೈತರ ಭೂಮಿಯನ್ನು ಬಲವಂತವಾಗಿ ಸ್ವಾಧೀನಪಡಿಸಿ

ಪುಟ 4 ಕ್ಕೆ


ಕದನದ ಪೂರ್ವ ಸಿದ್ಧತೆಯಲ್ಲಿ ಪೇಜಾವರರು



ಮೊನ್ನೆ ಮಂಗಳವಾರ (ಜೂನ್ 11, 2013) ಉಡುಪಿಯ ಪೇಜಾವರ ವಿಶ್ವೇಶ್ವರತೀರ್ಥಸ್ವಾಮೀಜಿಯವರು ನಡೆಸಿದ ಮಾಧ್ಯಮಗೋಷ್ಟಿ ಒಂದು ರೀತಿಯಲ್ಲಿ ಕದನಕ್ಕೆ ನಡೆಸಿದ ಪೂರ್ವಸಿದ್ಧತೆಯಂತಿದೆ. ಅದು ಉಡುಪಿಯ ಶ್ರೀಕೃಷ್ಣ ದೇವಾಲಯವನ್ನು ಸರಕಾರ ಅಂದರೆ ಮುಜರಾಯಿ ಇಲಾಖೆ ಸುಪರ್ದಿಗೆ ವಹಿಸಿಕೊಳ್ಳಲಾಗುವುದು ಎಂಬ ಬಗ್ಗೆ ಅಂತಹ ಯೋಚನೆ ಈಗ ಇಲ್ಲವೆಂದು ಮುಖ್ಯಮಂತ್ರಿ ಹಾಗೂ ಮುಜರಾಯಿ ಮಂತ್ರಿಗಳು ಸ್ಪಷ್ಟನೆ ನೀಡಿದಾಗ ಪೇಜಾವರರೇನೋ ಅವರಿಗೆ ಅಭಿನಂದಿಸಿದರಾದರೂ ವಾಸ್ತವದಲ್ಲಿ ಅವರಿಗೆ ಸಮಾಧಾನವಾಗಲೀ, ವಿಶ್ವಾಸವಾಗಲೀ ಇದ್ದಂತೆ ಕಾಣಲಿಲ್ಲ. ಆದ್ದರಿಂದಲೇ ಸ್ಪಷ್ಟನೆಯ ಕಾರಣಕ್ಕೆ ಈ ಗೋಷ್ಠಿಯೆಂದೇಳಿದರೂ ಮುಂದಿನ ಗುದ್ದಾಟಕ್ಕೆ ಮಿತ್ರರನ್ನು ಗುರುತಿಸುವ, ಅವರನ್ನು ಎಚ್ಚರಿಸಿ ಹೇಗಾದರೂ ತಮ್ಮ ನೆರವಿಗೆ ಒಟ್ಟುಗೂಡಿಸುವ ರಾಜಕೀಯ ತಂತ್ರಕ್ಕೇ ಹೆಚ್ಚು ಒತ್ತು ನೀಡಿದರು.

ಹಲವು ಪ್ರಶ್ನೆಗಳು

ಇಲ್ಲವಾದರೆ ಅವರು 1951 ರ ಸುಪ್ರಿಂ ಕೋರ್ಟ್‌ನ ತೀರ್ಪನ್ನು ಭಾಗಶಃ ಮಾತ್ರ ಪ್ರಸ್ತಾಪಿಸಿದರೇಕೆ? ಈ ದೇವಾಲಯವನ್ನು ತನ್ನ ವ್ಯಾಪ್ತಿಗೆ ತೆಗೆದುಕೊಂಡ 1997ರ ಮುಜರಾಯಿ ಇಲಾಖೆಗೆ ಸಂಬಂಧಿಸಿದ ಧಾರ್ಮಿಕ ಮತ್ತು ದತ್ತಿ ಕಾಯ್ದೆಗೆ ತಂದ ತಿದ್ದುಪಡಿಗಳನ್ನು, ಆದೇಶವನ್ನು ಮರೆಮಾಚಿದರೇಕೆ? 2011ರ ಡೀ–ನೋಟಿಫಿಕೇಷನ್ (ಅ) ವ್ಯವಹಾರಗಳನ್ನು ತಿರುಚಿದರೇಕೆ? ಅನಗತ್ಯವಾಗಿ ಮಡೆಸ್ನಾನ ಮತ್ತು ಮುಖ್ಯವಾಗಿ ಅಲ್ಲಿನ ಜಾತಿ ತಾರತಮ್ಯದ ಸಂವಿಧಾನ ವಿರೋಧಿ ಪಂಕ್ತಿಭೇಧದ ಪದ್ದತಿಯನ್ನು ಸಮರ್ಥಿಸಿಕೊಂಡದ್ದೇಕೆ?



ಮತ್ತು ಅದಕ್ಕೆ ಬಸವಣ್ಣನವರ ಬೆಂಬಲವನ್ನು 'ಮೋಸ'ದಿಂದ ಯಾಚಿಸಿದರೇಕೆ? ಹೀಗೆ ಹಲವು ಪ್ರಶ್ನೆಗಳಿವೆ.

ಕಾಂಗ್ರೆಸ್ ಸರಕಾರದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಹೊಸ್ತಿಲಿನಲ್ಲೇ ಉದ್ದೇಶವಿಟ್ಟೇ ಕೇಳಿದ (ಒಬ್ಬೊಬ್ಬರಿಗೂ ಒಂದೊಂದು ಚಿಂತೆಯೆಂಬಂತೆ) ಮಾಧ್ಯಮದವರ ಪ್ರಶ್ನೆಗೆ ಸಿದ್ಧರಾಮಯ್ಯನವರು ನೀಡಿದ ಉತ್ತರ ಅರೆ ಬರೆ ಎನ್ನುವುದರಲ್ಲಿ ಅನುಮಾನವಿಲ್ಲ. ಹಿಂದೆ 1997ರಲ್ಲಿ ಜನತಾದಳದ ಜೆ.ಹೆಚ್.ಪಟೇಲ್ ಸಿ.ಎಂ. ಆಗಿರುವಾಗ ಈ ದೇವಾಲಯವನ್ನು ಸರಕಾರದ ಸುಪರ್ದಿಗೆ ತೆಗೆದುಕೊಳ್ಳುವ ಆದೇಶ ಹೊರಟಿರುವಾಗ ಸಿದ್ಧರಾಮಯ್ಯ ಮಂತ್ರಿಯಾಗಿದ್ದವರು. ಇದನ್ನೂ ಒಳಗೊಂಡು ಅಷ್ಟ ಮಠಾಧೀಶರು ಐತಿಹಾಸಿಕ ಕನಕಗೋಪುರ ಕೆಡವಿ ಹಾಕಿ ಹೊಸತು ಕಟ್ಟಿಸುವಾಗ ಹುಟ್ಟಿದ ವಿವಾದದಲ್ಲಿ ಕಾಣಿಸಿಕೊಂಡವರು. ಇತ್ತೀಚೆಗೆ ಜನವರಿ 9, 2012 ರಂದು ವಿರೋದ–ಪಕ್ಷದ ನಾಯಕನಾಗಿದ್ದ ಸಿದ್ಧರಾಮಯ್ಯನವರು ಉಡುಪಿಯಲ್ಲಿ ಕೃಷ್ಣದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಲೇಬೇಕು. ಇದು ಸುಪ್ರಿಂ ಕೋರ್ಟ್‌ನ ಆದೇಶಕ್ಕೆ ಅನುಗುಣವಾಗಿದೆಯೆಂದು ವಾದಿಸಿದ್ದರು. ಆದರೆ ಈ ವಿಷಯ ಹಳತಾದರೂ ಬಿಜೆಪಿ ಅಧಿಕಾರಾವಧಿಯ ಅನಾಹುತಗಳ ಎದುರಿನಲ್ಲಿ ಇಂದಿನ ಸನ್ನಿವೇಶ ಪರಿಗಣಿಸಿ ಪೂರ್ಣ ಪ್ರಮಾಣದಲ್ಲಿಯೇ ಅವರು ಪ್ರತಿಕ್ರಿಯಿಸಬೇಕಿತ್ತು, ಗಂಭೀರ ಕ್ರಮ ವಹಿಸಬೇಕಿತ್ತು. ಮೇಲಾಗಿ ಕಾಂಗ್ರೆಸ್ ಪಕ್ಷದೊಳಗೆ ಒಂದು ಒಮ್ಮತ ಅಭಿಪ್ರಾಯ ರೂಪಿಸಿಕೊಳ್ಳಬೇಕಿತ್ತು. ಇದಿಲ್ಲವಾದ್ದರಿಂದಲೇ ಜನಾರ್ಧನ ಪೂಜಾರಿಯಂತಹವರು ತದ್ವಿರುದ್ಧ (ವಿಷಯ ದುರುಪಯೋಗವಾಗುವ ಭಯವೂ ಸೇರಿ) ಹೇಳಿಕೆಯನ್ನು ನೀಡುತ್ತಿರಲಿಲ್ಲ. ಬಿಜೆಪಿ ಸೋಲುತ್ತಿರುವಂತೆಯೇ, ಕಾಂಗ್ರೆಸ್ ಅದರಲ್ಲೂ 'ಅಹಿಂದ'ದ ಸಿದ್ಧರಾಮಯ್ಯ ಸಿ.ಎಂ. ಆಗುತ್ತಿರುವಂತೆಯೇ ಪೇಜಾವರ ಮತ್ತವರ ಬಳಗ ಆತಂಕ ಪಡಲು ಇಂತಹ ಹಲವು ಕಾರಣಗಳಿವೆ.

ನ್ಯಾಯಾಲಯದ ಆದೇಶಗಳು

ಉಡುಪಿಯ ಕೃಷ್ಣ ದೇವಾಲಯ ಮುಜರಾಯಿ ಇಲಾಖೆಗೆ ಸೇರಿದ್ದು, ಸೇರಬೇಕಾದ್ದು ಎಂಬ ಬಗೆಗಿನ ಗುದ್ದಾಟ ತೀರಾ ಹಳೆಯದು. ಮಠದವರು ಹೇಳುವಂತಹ 800 ವರುಷಗಳ ಉದ್ದದ ಇತಿಹಾಸಕ್ಕೆ ಹೋಗುವುದು ಅನಗತ್ಯವೀಗ. ಸ್ವಾತಂತ್ರ್ಯ ನಂತರದಲ್ಲಿ ಈ ದೇವಸ್ಥಾನದೊಳಗೆ ಎಲ್ಲಾ ನಾಗರೀಕರಿಗೂ ಪ್ರವೇಶವಿರಬೇಕೋ ಇಲ್ಲವೋ, ಇದು ಖಾಸಗಿಯದ್ದೋ ಅಥವಾ ಸಾರ್ವಜನಿಕವೋ ಎಂಬ ಪ್ರಶ್ನೆಯನ್ನು 1951 ರಲ್ಲಿ ಮದ್ರಾಸ್ ಪ್ರಾಂತ್ಯ ಸರಕಾರದ ಅಂದಿನ ಕಾನೂನಿನಂತೆ ನ್ಯಾಯಾಲಯ ಇತ್ಯರ್ಥಗೊಳಿಸಿದೆ. ಈ ಆದೇಶವನ್ನು ಪ್ರಶ್ನಿಸಿ ಸರಕಾರದ ವಿರುದ್ಧ ಸರ್ವೋಚ್ಚ ನ್ಯಾಯಾಯಾಲಯಕ್ಕೆ ಸೋದೆ ಮಠಾಧೀಶರು (ವಿಶ್ವೋತಮ ವಿರುದ್ಧ

ಪುಟ 4 ಕ್ಕೆ

ಈ ವಾರ ....

ಪುಟ 3 ರಿಂದ

ಮದ್ರಾಸ್ ಸರ್ಕಾರ 17ನೇ ಆಗಸ್ಟ್ 1954ರ ಮನವಿ) ಹೋದಾಗಲೂ 1961ರ ಡಿಸೆಂಬರ್ 18ರಂದಿನ ತೀರ್ಪಿನಲ್ಲಿ ಇದು ಮಠಾಧೀಶರ-ಅಷ್ಟಮಠಗಳ ಸುಪರ್ದಿನಲ್ಲಿದ್ದರೂ ಅಂದಿನ ಕಾಯ್ದೆಯಂತೆ ಅದು ಸಾರ್ವಜನಿಕ ದೇವಾಲಯವಾಗಿದೆಯೆಂದು ಇಲ್ಲಿಗೆ ಎಲ್ಲಾ ನಾಗರೀಕ ಭಕ್ತರ ಪ್ರವೇಶ ಅಭಾಧಿತವೆಂದು ಸಾರಿ ಮೇಲ್‌ಮನವಿಯನ್ನು ತಿರಸ್ಕರಿಸಿದೆ. ಈ ಮೂಲಕ ಅದು ಕೆಳ ನ್ಯಾಯಾಲಯದ ತೀರ್ಪು ಸರಿಯಾಗಿದೆ ಎಂದೂ ಹೇಳಿದೆ. ಅಂದರೆ ಪರಿಶಿಷ್ಟ ಜಾತಿಗಳ ಜನರಿಗೂ ಪ್ರವೇಶ ನೀಡಬೇಕೆಂಬುದನ್ನು ಖಾತ್ರಿ ಪಡಿಸಿರುವುದು ಮುಖ್ಯವಾದ ಅಂಶಗಳಲ್ಲೊಂದು. ಇದು ಅಲ್ಲಿಗೆ ನಿಲ್ಲದೇ ಅಂಧಶ್ರದ್ಧೆ, ಮೂಢನಂಬಿಕೆ, ಅಸಮಾನತೆ ತಾರತಮ್ಯಗಳು ಮುಂದುವರಿದು ಅದೇ ಹಿಡಿತ ಸಾಧಿಸಲು ಪ್ರತಿಗಾಮಿ, ಪಾಳೇಗಾರೀ ಶಕ್ತಿಗಳಿಂದ ಹಲವು ಸುತ್ತಿನ ಹಣಾಹಣಿಗಳು ನಡೆದಿವೆ.

ಪ್ರತಿಗಾಮಿ ಒತ್ತಡಗಳು

ಮುಖ್ಯವಾಗಿ ಜನತಾದಳದ ಸರಕಾರ 1997 ರಲ್ಲಿ ತಂದ ಕಾಯ್ದೆಯು ವಿಶಾಲವಾಗಿ ನಾಗರೀಕರ ಧಾರ್ಮಿಕ ಹಕ್ಕುಗಳನ್ನು ರಕ್ಷಿಸುವ ಜಾತ್ಯಾತೀತ ಸ್ವರೂಪವನ್ನು ಹೊಂದಿತ್ತಲ್ಲದೇ ಮಠಗಳ ನಿಯಂತ್ರಣದಲ್ಲಿದ್ದ ದೇವಸ್ಥಾನಗಳಲ್ಲಿ ಮಠಾಧೀಶರ ನಿರ್ವಹಣೆ, ಆಡಳಿತದಲ್ಲಿ ಪಾತ್ರ ಕಲ್ಪಿಸುವಾಗಲೇ ಸರಕಾರದ ಉಸ್ತುವಾರಿಗೂ ಸೇರುತ್ತಿದ್ದವು. ಇದನ್ನೇ ಪೇಜಾವರರಂತಹವರು ಮತ್ತು ಸಂಘಪರಿವಾರ ನಿರಂತವಾಗಿ ವಿರೋಧಿಸುತ್ತಾ ಬಂದಿದೆ. ಕೃಷ್ಣ ದೇವಾಲಯವನ್ನು ಈ ಕಾಯ್ದೆ ವ್ಯಾಪ್ತಿಯೊಳಗೆ ತಂದ ಜೆ.ಹೆಚ್.ಪಟೇಲ್ ನಂತರ ಬಂದ ಎಸ್.ಎಂ.ಕೃಷ್ಣ, ಧರ್ಮಸಿಂಗ್ ಮತ್ತು ಬಿಜೆಪಿ ಭಾಗಿಯಾಗಿದ್ದ ಕುಮಾರಸ್ವಾಮಿಯವರ ಆಡಳಿತದ ಅವಧಿಯಲ್ಲಿಯೂ ಅದನ್ನು ಮುಜರಾಯಿ ಪಟ್ಟಿಯಿಂದ ರದ್ದು ಪಡಿಸುವಂತೆ ಒತ್ತಡಗಳನ್ನು ಸತತವಾಗಿ ಸೃಷ್ಟಿಸಲಾಗಿದೆ.

ಕೇವಲ ಉಡುಪಿ ಕೃಷ್ಣ ದೇವಸ್ಥಾನ ಮಾತ್ರವಲ್ಲ ಇನ್ನೂ ಹತ್ತಾರು ದೇವಸ್ಥಾನಗಳನ್ನು ಪಟ್ಟಿ ಮಾಡಿ ವಿಶ್ವ ಹಿಂದೂ ಪರಿಷತ್ ಮತ್ತಿತರ ಸಂಘ ಪರಿವಾರದ ಸಂಘಟನೆಗಳೂ ಸೇರಿ 'ಮುಜರಾಯಿ ಇಲಾಖೆಯಿಂದ ಹಿಂದೂ ದೇವಸ್ಥಾನಗಳನ್ನು ಮುಕ್ತಿಗೊಳಿಸಿ' ಎಂದು ರಾಜ್ಯಾದ್ಯಂತ ಪ್ರತಿಭಟನೆ ಮಾಡಿ ಸರಕಾರಗಳ ಮೇಲೆ ಒತ್ತಡ ಸೃಷ್ಟಿಸಿದವು. 2008ರಲ್ಲಿ ಬಿಜೆಪಿಯೇ ಅಧಿಕಾರಕ್ಕೆ ಬಂದಾಗ 2011 ರಲ್ಲಿ ಡೀ-ನೋಟಿಫಿಕೇಷನ್ ಮಾಡಿಸಿ ಮೆರೆದವು. ಅದರಲ್ಲಿ ಗೋಕರ್ಣದ ದೇವಸ್ಥಾನವನ್ನು ಸಂಘಪರಿವಾರದ ರಾಮಚಂದ್ರಾಪುರ ಮಠಕ್ಕೆ ನೀಡಿದ್ದು ಹಾಡು ಹಗಲೇ ನಡೆದ ಘೋರ ಅನ್ಯಾಯಗಳಲ್ಲಿ ಒಂದು. ಈ ಎಲ್ಲಾ ಕಾರಣಗಳಿಗೇ ಯಡಿಯೂರಪ್ಪನವರನ್ನು ಪೇಜಾವರರು ಅಷ್ಟು ಹೊಗಳುತ್ತಿರುವುದು, ಆಗಿದ್ದ ಪ್ರಮಾದವನ್ನು ಸರಿಪಡಿಸಲಾಯಿತೆಂದು ತಿಪ್ಪೆ ಸಾರಿಸಲು ಯತ್ನಿಸುತ್ತಿರುವುದು.

ಅವರೇನೋ ಇಂತಹ ಷಡ್ಯಂತ್ರಗಳ ಮೂಲಕ ಕಾರ್ಯ ಸಾಧಿಸಿಕೊಂಡರು. ಆದರೆ ಈ ಹಿಂದೆ 1997ರಲ್ಲಿ ನೋಟಿಫೀಕೇಷನ್ ಆದದ್ದು ಅಧಿಕಾರಿಯೊಬ್ಬ ಕೇಳಿದ 50000ರೂ.ಗಳ ಲಂಚ ನೀಡಲು ನಿರಾಕರಿಸಿದ್ದು ಕಾರಣ ಎಂದು ಸನ್ಯಾಸಿಗಳಾದ ಪೇಜಾವರರು ಈಗ ಹೇಳುತ್ತಿರುವುದು ಅಪ್ಪಟ ಸುಳ್ಳು ಮಾತ್ರವಲ್ಲ ಜನರನ್ನು ಹಾದಿ ತಪ್ಪಿಸುವ ವಂಚನೆಯ ಕ್ರಮವಾಗಿದೆ.

ಯಾಕೀ ಆಸಕ್ತಿ? ಏನೀ ಹಿತಾಸಕ್ತಿ?

ಇಹಲೋಕದಲ್ಲಿದ್ದು ಪರಲೋಕದ ದಾರಿಯನ್ನು ತೋರಿಸುವ, ಭೌತಿಕವಾದ ಸುಖಗಳನ್ನು ಅನುಭೋಗಿಸುತ್ತಾ ಜೀವನವೇ ನಶ್ವರವೆಂದು ಭೋಧಿಸುವ ಈ ಯತಿಗಳು,



ಇಂತಹ ಧಾರ್ಮಿಕ ಪುರುಷರು ದೇವಸ್ಥಾನಗಳ ಬಗ್ಗೆ ನಿರ್ಲಿಪ್ತವಾಗಿ ಇರಬೇಕಿತಲ್ಲಾ!. ಇವು ಯಾರ ಆಡಳಿತಕ್ಕೊಳಪಟ್ಟರೆ ಇವರಿಗೇನು ತೊಂದರೆ, ಆರಾಧನೆ, ಭೋಧನೆ, ಭೋಜನ ಸುಸೂತ್ರವಾಗಿ ನಡೆಯಬಹುದಲ್ಲಾ ಎಂದು ಯಾರಾದರೂ ಕೇಳಬಹುದು.! ಆದರೆ ಇಲ್ಲಿ ದೇವರ ಆರಾಧನೆ, ಧರ್ಮ ಭೋಧನೆಗಿಂತ ಇಲ್ಲಿಗೆ ಬರುವ, ತರುವ ಅಪಾರ ಆದಾಯಗಳೇ ಯತಿಗಳ ಆರಾಧನೆಗಿಂತ ಹೆಚ್ಚಾಗಿರುವ ಆಕರ್ಷಣೆ!. ಪರ್ಯಾಯ, ಜಾತ್ರೆ, ಹಬ್ಬಗಳು ಮುಂ. ಹೆಸರಿನಲ್ಲಿ ಸಂಗ್ರಹವಾಗುವ ನೂರಾರು ಕೋಟಿ ರೂಪಾಯಿಗಳು, ಧಾರ್ಮಿಕರು ಎಂಬ ಕಾರಣಕ್ಕೆ ಸಿಗುವ ಪುಕ್ಕಟೆ ಸ್ಥಾನ-ಮಾನಗಳು, ಸವಲತ್ತುಗಳು ಯಾರಿಗುಂಟು ಯಾರಿಗಿಲ್ಲ?.

ಇಲ್ಲಿ ಆಸ್ತಿಯೇ ಪ್ರಮುಖ ಆಕರ್ಷಣೆ. ಇದಿಲ್ಲವಾದರೆ ನಿಜಕ್ಕೂ ಅವರ ಜೀವನ ನಶ್ವರ! ಈ ಕಾರಣದಿಂದಲೇ ಏನೇ ಆದರೂ ತಲೆತಲಾಂತರ ಖಾಸಗಿ ಆಸ್ತಿಗಳಾಗಿ ಅವುಗಳನ್ನು ದಕ್ಕಿಸಿಕೊಳ್ಳಬೇಕೆಂದು ಖಡಾಮುಡಿ ಹೋರಾಟ ನಡೆಸುತ್ತಿರುವುದು. ಆದ್ದರಿಂದಲೇ ತಾವು ಸರಕಾರಿ ಸಂಬಳ ಪಡೆಯುವ ನೌಕರರಾಗಲಾರೆವೆಂದು ಹೇಳುವುದು, ಆಧುನಿಕ ಯುಗದಲ್ಲಿಯೂ ತಾವು ಭಾರತೀಯ ಸಂವಿಧಾನ, ನೆಲದ ಕಾನೂನುಗಳಿಗಿಂತ ದೊಡ್ಡವರೆಂಬ ಭ್ರಮೆಯಲ್ಲಿ ಬದುಕುತ್ತಿರುವುದು!

ಎತ್ತಿ ಕಟ್ಟುವ ತಂತ್ರಗಳು

ಈ ಎಲ್ಲಾ ಹಿನ್ನೆಲೆಯಲ್ಲಿ ನೈಜ ಧಾರ್ಮಿಕ ಹಿತಾಸಕ್ತಿಗಳಿಗಿಂತ ಆಸ್ತಿ, ಅಂತಸ್ತು, ಸಂವಿಧಾನೇತರ, ಅಧಿಕಾರ ಕೇಂದ್ರಿತವಾದ ಇಂತಹ ಯತಿಗಳಿಗೆ-ಮಠಗಳಿಗೆ ಸರಕಾರದ ನಡೆ ಇಂದು ನಾಳೆ ಹೇಗೂ ಇರಬಹುದು ಎಂದು ಆತಂಕವಾಗಿದೆ. ಮೇಲಾಗಿ ಇಲ್ಲಿನ ಅಮಾನವೀಯ ಜಾತಿ ತಾರತಮ್ಯಗಳ ಆಚರಣೆಗಳು, ನಡೆವ ವ್ಯವಹಾರಗಳ ಬಗ್ಗೆ ಬೆಳೆಯುತ್ತಿರುವ ಜನತೆಯ ಎಚ್ಚರ, ಪ್ರತಿಭಟನೆ ಆಗ್ರಹಗಳು ಅವರಲ್ಲಿ ಆತಂಕವನ್ನು ಇನ್ನಷ್ಟೂ ಹೆಚ್ಚಿಸಿವೆ. ಈಗಲೂ ಆರಂಭದಲ್ಲೇ ಒಂದು ಗುಟುರು ಹಾಕಿ ಸರಕಾರ ತಮ್ಮ ತಂಟೆಗೆ ಬರದಂತೆ ತಡೆಯಬೇಕೆಂಬುದು ಸನ್ಯಾಸಿ ರಾಜಕಾರಣಿಯಾದ ಪೇಜಾವರರ ತಂತ್ರ. ಆದ್ದರಿಂದಲೇ ಬೇಕೆಂದೇ ಸಂವಿಧಾನ ವಿರೋಧಿ, ಅಮಾನವೀಯ ಪಂಕ್ತಿಭೇಧ, ಮಡೆಸ್ನಾನ ಪದ್ಧತಿಗಳನ್ನು ಅಸಹ್ಯಕರವಾಗಿ ಸಮರ್ಥಿಸಿಕೊಳ್ಳುತ್ತಾ, ಆಹಾರದಲ್ಲೇ ಮೇಲು ಕೀಳಿನ ಜಾತಿ ಭೇಧಗಳ ವೈದಿಕ ಕತ್ತಿಗಳಿಂದ ವಿಭಜಿಸುತ್ತಾ ಧರ್ಮಸ್ಥಳ, ಕುಕ್ಕೆ ಸುಭ್ರಹ್ಮಣ್ಯ, ಶೃಂಗೇರಿ ದೇವಸ್ಥಾನ ಮುಂತಾದ ಕಡೆಗಳ 'ಸ್ಥಾನಾಧಿಪತಿ'ಗಳನ್ನೂ ಪ್ರಚೋದಿಸಿ ತಮ್ಮ ಬೆಂಬಲಕ್ಕೆ ಬಲ ಕ್ರೋಢೀಕರಿಸಲು ಯತ್ನಿಸುತ್ತಿದ್ದಾರೆ. ಕನಿಷ್ಠ ಅವರ ಮೌನ ಬೆಂಬಲವಾದರೂ ಇರಲೆಂದು ನಿರೀಕ್ಷಿಸುತ್ತಿದ್ದಾರೆ. ಎಲ್ಲಾ ಬ್ರಾಹ್ಮಣರನ್ನು ಸಮಾನವಾಗಿ ಕಾಣದ ಅವರು 'ಸರಕಾರ ಚರ್ಚುಗಳನ್ನು ಮೊದಲು ಸ್ವಾಧೀನ ಪಡಿಸಿಕೊಳ್ಳಲಿ' ಎಂಬಂತಹ ಮಾತನ್ನಾಡಿ ಹಿಂದುಗಳೇ ಸತತ ಅನಾಯ್ಯಕ್ಕೀಡಾಗುವರೆಂಬ ಸಂಘದ ಗೋಬೆಲ್ಸ್ ಸುಳ್ಳಿನ ವಾದವನ್ನು ಪುನರುಚ್ಚರಿಸಿ ಹಿಂದೂಗಳನ್ನು ಅನ್ಯಧರ್ಮೀಯರ ವಿರುದ್ಧ ಎತ್ತಿ ಕಟ್ಟಲು ಯತ್ನಿಸಿದ್ದಾರೆ.

ಹಾಗೇ ಮಡೆಸ್ನಾನ, ಪಂಕ್ತಿಬೇಧಗಳ ವಿರುದ್ಧ ಧ್ವನಿಯೆತ್ತಿರುವ ಧಾರ್ಮಿಕ ಕ್ಷೇತ್ರದ ಪ್ರಮುಖರಲ್ಲಿ ವೀರಶೈವ ಮಠಾಧೀಶರು ಮುಂಚೂಣಿಯಲ್ಲಿರುವುದು ಅವರಿಗೆ ನುಂಗಲಾರದ ತುತ್ತಾಗಿರುವುದರಿಂದಲೇ ಬಸವಣ್ಣನವರ, ಶರಣರ ವಚನಗಳನ್ನು ವಿಕೃತಗೊಳಿಸಿ ವ್ಯಾಖ್ಯಾನಿಸುತ್ತಿದ್ದಾರೆ. ಹೀಗೆ ಪೇಜಾವವರರು ಶರಣ ಪರಂಪರೆಗೆ ಅಪಮಾನ ಮಾಡುತ್ತಿದ್ದಾರೆ. ಮಾತ್ರವಲ್ಲ, ಅನುಕಂಪ ಗಿಟ್ಟಿಸಲು ತಾವು ಮಾಧ್ವ ಮತಸ್ಥ ಅಲ್ಪಸಂಖ್ಯಾತರೆಂದೂ ತಮ್ಮನ್ನೇ ಯಾಕೆ ಗುರಿಯಾಗಿಸುವಿರೆಂದೂ ಗೋಗೆರೆಯುತ್ತಿದ್ದಾರೆ ವಿಶ್ವ ಮಾನವರು!

ರಾಜಕೀಯ ಹುನ್ನಾರಗಳು

ಜೊತೆಯಲ್ಲೇ ಅದನ್ನು ಒಂದು ರಾಜಕೀಯ ಪ್ರಶ್ನೆಯಾಗಿಸುವ ಹುನ್ನಾರವೂ ಇಲ್ಲದಿಲ್ಲ. ಅಖಿಲ ಬಾರತ ಮಟ್ಟದಲ್ಲಿ ಅಧಿಕಾರ ದಾಹದಲ್ಲಿ ವಿಭಜಿತವಾಗಿ, ರಾಜ್ಯದಲ್ಲಿ ಸೋತು ಆದರೂ ದೆಹಲಿ ಗದ್ದುಗೆಯ ಕನಸು ಕಾಣುತ್ತಿರುವ ಬಿಜೆಪಿ ಹೇಗಾದರೂ ಮುಂದಿನ ಪಾರ್ಲಿಮೆಂಟ್ ಚುನಾವಣೆ ಹೊತ್ತಿಗೆ ಮತ್ತೆ ಚೇತರಿಕೆ ಪಡೆಯಲು ಕಾಯುತ್ತಿದೆ. ಅದರಲ್ಲೂ ಕರಾವಳಿಯಲ್ಲಿ ಸೋತು ಕಂಗಾಲಾಗಿದೆ. ಇಲ್ಲಿ ಜನರ ಜೀವನದ ಪ್ರಶ್ನೆಗಳಿಗಿಂತ ಧಾರ್ಮಿಕತೆಯ ಸೋಗಿನಲ್ಲಿ ಕೋಮುವಾದದ ವಿಷಯಗಳಂತಹ ಭಾವನಾತ್ಮಕ ಪ್ರಶ್ನೆಗಳನ್ನು ಕೆರಳಿಸಿ ಸುಲಭವಾಗಿ ಲಾಭ ಹೊಡೆಯುಲು ಉತ್ಸುಕವಾಗಿದೆ. ದೇವಸ್ಥಾನದ ಪ್ರಶ್ನೆಯಲ್ಲಿ ಅಂತಹ ಅವಕಾಶ ಸಿಕ್ಕರೆ ಇಡೀ ಸಂಘಪರಿವಾರ ಹಿಂದಿನಂತೆ ಕಾರ್ಯಾಚರಣೆಗೆ ಇಳಿಯಲಿದೆ. ಈ ಕಾರ್ಯದಲ್ಲಿ ಪೇಜಾವರರಿಗೆ ಆರೆಸ್ಸೆಸ್‌ನ ಸರ್ವ ಬಲವೂ ಸಿಗಲಿರುವುದರಿಂದ ಅವರೂ ಈ ರಾಜಕೀಯ ಆಟದಲ್ಲಿ ಧುಮುಖಲಿದ್ದಾರೆ.

ಬೇಕೀಗ ಸೂಕ್ತ ಪ್ರತಿಕ್ರಿಯೆ

ಇಂತಹ ಸನ್ನಿವೇಶದಲ್ಲಿ ಕಾಂಗ್ರೆಸ್ ಪಕ್ಷ ದೃಢವಾಗಿ ವರ್ತಿಸುವುದೇ? ಉಳಿದಂತೆ ಎಡ ಪಕ್ಷಗಳು ಮತ್ತು ಪ್ರಗತಿಪರರನ್ನು ಹೊರತುಪಡಿಸಿದರೆ ಇತರೆ ಪಕ್ಷಗಳ ಪ್ರತಿಕ್ರಿಯೆಯನ್ನೂ ಆ ಸಂದರ್ಭದಲ್ಲೇ ನೋಡಬೇಕಷ್ಟೇ. ಆದ್ದರಿಂದ ಪ್ರತಿಗಾಮಿಗಳು ಕದನದ ಪೂರ್ವಭಾವಿ ಸಿದ್ಧತೆಯಲ್ಲಿರುವ ಈ ಸನ್ನಿವೇಶದಲ್ಲಿಯೇ ಎಲ್ಲಾ ಎಡ ಮತ್ತು ಪ್ರಗತಿಪರ ಶಕ್ತಿಗಳು ಜನ ಜಾಗೃತಿಗೊಳಿಸುವ ಸೂಕ್ತವಾದ ಪ್ರತಿಕ್ರಿಯೆನ್ನು ನೀಡಬೇಕು. ಮತ್ತು ಸರ್ಕಾರ ಕನಿಷ್ಠ 1997ರ ಕಾಯ್ದೆಯನ್ನು ದೇವಸ್ಥಾನದ ವಿಷಯದಲ್ಲಿ ಜಾರಿಗೆ ತರಬೇಕು ಮತ್ತು ಈಗಿನ ಡೀ- ನೋಟಿಫಿಕೇಷನ್ನನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಬೇಕು. ಭಾರತದ ಸಂವಿಧಾನ, ಸಮಾನತೆಯ ಮೌಲ್ಯಗಳನ್ನು ಧಿಕ್ಕರಿಸಿ ಬೆದರಿಕೆ ಒಡ್ಡುವವರಿಗೆ ತಕ್ಕ ಉತ್ತರ ಹೇಳಬಾರದೇ?

ರೈತರು....

ಪುಟ 3 ರಿಂದ


ಕಂಪನಿಗಳಿಗೆ ಹಾಗೂ ಭೂಮಾಫಿಯಾಗಳಿಗೆ ನೀಡುವ ಬದಲು, ರೈತರು ತಾವಾಗಿಯೇ ತಮ್ಮ ಭೂಮಿಯನ್ನು ಕೈಗೆ ಸಿಕ್ಕ ಬೆಲೆಗೆ ಮಾರಾಟ ಮಾಡಿ, ಗ್ರಾಮಗಳನ್ನು ತೊರೆದು ಬರುವಂತೆ ಮಾಡುವುದೇ ಸೂಕ್ತ ಎಂಬ ಕರಾಳ ತೀರ್ಮಾನಕ್ಕೆ ಕೇಂದ್ರ\ರಾಜ್ಯ ಸರ್ಕಾರಗಳು ಬಂದಿವೆ.

ಪಾಶ್ಚಾತ್ಯ ದೇಶಗಳ ಕಂಪನಿಗಳಿಗೆ ನಮ್ಮ ದೇಶದ ಫಲವತ್ತಾದ ಭೂಮಿಯ ಮೇಲೆ ಕಣ್ಣು ಬಿದ್ದಿದೆ. ಪಾಶ್ಚಾತ್ಯ ದೇಶಗಳಲ್ಲಿ, ವರ್ಷದಲ್ಲಿ 8-10 ತಿಂಗಳು ಅವರ ಭೂಮಿ ಹಿಮದಿಂದ ಮುಚ್ಚಿರುತ್ತದೆ. ಹಾಗಾಗಿ, ಅಲ್ಲಿ ಜನರಿಗೆ ಬೇಕಾಗುವ ಆಹಾರ ಧಾನ್ಯಗಳನ್ನು, ತರಕಾರಿ ಮತ್ತು ಹಣ್ಣು ಹಂಪಲುಗಳನ್ನು ಬೆಳೆಯಲು ಆಗುತ್ತಿಲ್ಲ. ಭಾರತದಲ್ಲಾದರೆ, ವೈವಿಧ್ಯಮಯವಾದ ಮಣ್ಣು ಲಭ್ಯವಿದೆ. ನೀರನ್ನು ಒದಗಿಸಲು ಸಾಧ್ಯವಾದರೆ ಇಲ್ಲಿ ವರ್ಷದ ಹನ್ನೆರಡು ತಿಂಗಳೂ ಎಲ್ಲಾ ರೀತಿಯ ಬೆಳೆಗಳನ್ನು ಬೆಳೆಯಬಹುದು. ಭಾರತದ ಭೂಮಿಯನ್ನು ಬೃಹತ್ ಫಾರ್ಮುಗಳಾಗಿ ಅಭಿವೃದ್ಧಿ ಪಡಿಸಿ ವಿಶ್ವದ ಮಾರುಕಟ್ಟೆಗೆ ಬೇಕಾದುದೆಲ್ಲವನ್ನು ಇಲ್ಲಿ ಬೆಳೆದು ಲಾಭ ಮಾಡಿಕೊಳ್ಳಬಹುದು ಎಂದು ಈ ಕಂಪನಿಗಳು ಭಾರತದ ಕೃಷಿ ರಂಗವನ್ನು ಪ್ರವೇಶಿಸಲು ತುದಿಗಾಲ ಮೇಲೆ ನಿಂತಿವೆ. ಕೃಷಿಯಲ್ಲಿ ವ್ಯಾಪಾರದ ಹೆಸರಿನಲ್ಲಿ ಪ್ರವೇಶ ಪಡೆಯಲು ಯತ್ನಿಸುತ್ತಿರುವ ಈ ಕಂಪನಿಗಳು ಕ್ರಮೇಣ ಭಾರತದ ಎಲ್ಲ ಕೃಷಿ ಭೂಮಿಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಲು ಹೊಂಚು ಹಾಕುತ್ತಿವೆ. ಈ ಆಘಾತಕಾರಿ ವಿಧ್ಯಾಮಾನ ಈಸ್ಟ್ ಇಂಡಿಯಾ ಕಂಪನಿ ಹೂಡಿದ ಸಂಚನ್ನು ನೆನಪಿಸದೆ ಇರಲಾರದು.

ಕಾಂಗ್ರೆಸ್ ಸರ್ಕಾರದ ನೀತಿಗಳು ಹಾಗೂ ರಾಜ್ಯಪಾಲರ ಭಾಷಣದ ಘೋಷಣೆಗಳು

ಸಿದ್ಧರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ದಿನದಿಂದಲೇ ಅನೇಕ ನೀತಿಗಳನ್ನು ಘೋಷಣೆ ಮಾಡಲಾಗುತ್ತಿದೆ. ಈ ಘೋಷಣೆಗಳು ರಾಜ್ಯದ ಜನರಲ್ಲಿ ಅನೇಕ ನಿರೀಕ್ಷೆಗಳನ್ನು ಹುಟ್ಟಿಸಿವೆ. ರಾಜ್ಯಪಾಲರ ಭಾಷಣದಲ್ಲಿ ಕಾಂಗ್ರೆಸ್ ಸರ್ಕಾರ ತನ್ನ ನೀತಿಯನ್ನು ಸಮಗ್ರವಾಗಿ ಮಂಡಿಸುವ ಅನಿವಾರ್ಯತೆಯನ್ನು ತಂದೊಡ್ಡಿತು. ಆ ಮೂಲಕ ,ರಾಜ್ಯ ಕಾಂಗ್ರೆಸ್ ಸರ್ಕಾರದ ನೀತಿಗಳು ಕೆಲವು ತಕ್ಷಣದ ಪರಿಹಾರಗಳ ಸಿಹಿಯನ್ನು ಇತರ ಸರ್ಕಾರಗಳಿಗಿಂತಲೂ ಸ್ವಲ್ಪ ಹೆಚ್ಚಾಗಿಯೇ ಸವರಿ ಅದೇ ಖಾಸಗೀಕರಣ, ಉದಾರೀಕರಣ, ಜಾಗತೀಕರಣಗಳ ಜನವಿರೋಧೀ ವಿನಾಶಕಾರೀ ನೀತಿಗಳ ಅನುಸರಿಸಲು ಹೊರಟಿರುವುದು ಬಟಾಬಯಲಾಗಿದೆ

ಅಗ್ಗದ ದರದಲ್ಲಿ ಅಕ್ಕಿಯ ವಿತರಣೆಗೆ ಸಂಬಂಧಿಸಿ ಬಹಿರಂಗವಾಗಿ ನಡೆದಿರುವ ಜನಪರ ವರ್ಸಸ್ ಜನವಿರೋಧೀ ನೀತಿಗಳ ತಿಕ್ಕಾಟವೇ ಎಲ್ಲ ರಂಗಗಳ ನೀತಿಗಳ ವಿಷಯದಲ್ಲಿಯೂ ಅಂತರಂಗದಲ್ಲಿ ನಡೆದಿದೆ, ನಡೆದೇ ನಡೆಯುತ್ತದೆ ಎಂಬ ಸೂಚನೆಯನ್ನು ರಾಜ್ಯಪಾಲರ ಭಾಷಣದ ಮೂಲಕ ಸರ್ಕಾರ ಮಾಡಿರುವ ನೀತಿ ನಿರೂಪಣೆ ಸ್ಪಷ್ಟವಾಗಿ ಹೇಳಿದೆ. ಅಕ್ಕಿ ವಿತರಣೆಯ ವಿಷಯದಲ್ಲಿ ರಾಜ್ಯದ ಮಾಧ್ಯಮಗಳಲ್ಲಿ ಹಲವಾರು ವಾದಗಳು ಹೂಡಲ್ಪಟ್ಟಿವೆ. ಮುಖ್ಯವಾಗಿ ಇದು ಜನರನ್ನು ಸೋಮಾರಿಗಳನ್ನಾಗಿ ಮಾಡುತ್ತದೆ, ವಿಪರೀತ ಹಣ ಪೋಲಾಗುತ್ತದೆ ಇತ್ಯಾದಿ. ಈ ವಾದಗಳು ಬಡಜನರ ಬಗ್ಗೆ ಇರುವ ಪೂರ್ವಾಗ್ರಹಗಳ ಪ್ರತಿಬಿಂಬಗಳು ಎಂದು ಸಿಪಿಐ (ಎಂ) ಭಾವಿಸುತ್ತದೆ. ಆದರೆ ಅದೇ ಸಮಯದಲ್ಲಿ ನಿರಂತರವಾಗಿ ಎಲ್ಲ ಆಹಾರ ವಸ್ತುಗಳ ಬೆಲೆಯನ್ನು ಗಗನಕ್ಕೇರಿಸುವ ಜೂಜುಕೋರ ಮುಂಗಡ ವ್ಯಾಪಾರ, ಮುಕ್ತ ಆಮದು ನೀತಿ, ಅಹಾರ ಮತ್ತು ಕೃಷಿ ಉತ್ಪನ್ನಗಳ ವ್ಯಾಪಾರದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶ ಮೊದಲಾದ ನೀತಿಗಳನ್ನು ಕಿತ್ತುಹಾಕದೇ ಜನತೆಗೆ ನಿಜ ಪರಿಹಾರ ದೊರಕುವುದಿಲ್ಲ. ಜೊತೆಗೆ ಸಾಮಾನ್ಯ ಜನರಿಗೆ ನೀಡುವ ಸಹಾಯ ಧನಗಳನ್ನು ಕಡಿತಗೊಳಿಸುವ ಹಾಗೂ ಬೃಹತ್ ಕಂಪನಿಗಳಿಗೆ ತೆರಿಗೆ ವಿನಾಯತಿಯನ್ನು ಉದಾರವಾಗಿ ನೀಡುವ ಬಂಡವಾಳಶಾಹಿ ನೀತಿಯನ್ನು ಕೈ ಬಿಡದೆ ಆಹಾರ ಹಕ್ಕಿನ ನೀತಿಯೂ ಕೈಗೂಡುವುದಿಲ್ಲ. ಬಡವರೆಲ್ಲರಿಗೂ ಸಮರ್ಪಕವಾಗಿ ಬಿಪಿಎಲ್ ಪಡಿತರ ಚೀಟಿಗಳ ವಿತರಣೆಯನ್ನು ತಕ್ಷಣವೇ ಮಾಡಬೇಕೆಂದು ಸಿಪಿಐ (ಎಂ) ಒತ್ತಾಯಿಸುತ್ತಲೇ ಎಪಿಎಲ್ ಬಿಪಿಎಲ್ ಎಂಬ ಬೇಧವನ್ನು ತೆಗೆದುಹಾಕುವ ಸಾರ್ವತ್ರಿಕ ಪಡಿತರ ಪದ್ಧತಿಯೇ ಆಹಾರ ಸಮಸ್ಯೆಗೆ ನಿಜವಾದ ಪರಿಹಾರ ಎಂದು ಒತ್ತಾಯಿಸುತ್ತದೆ.



ಬಜೆಟ್‌ನ ಬಹು ಭಾಗವನ್ನು ಬೇಡುವ ತಕ್ಷಣದ ಪರಿಹಾರ ಕ್ರಮಗಳು, ಸರ್ಕಾರಿ ನೇಮಕಾತಿಗಳನ್ನು ಘೋಷಿಸುವ ಈ ಸರ್ಕಾರ ಅದೇ ಸಮಯದಲ್ಲಿ ವಿಶ್ವ ಬ್ಯಾಂಕ್ ನಿರ್ದೇಶನದ ವಿತ್ತೀಯ ಹೊಣೆಗಾರಿಕೆ ಕಾಯಿದೆಯನ್ನು ಕಟ್ಟುನಿಟ್ಟಾಗಿ ಪಾಲಿಸುವ ಮಾತನ್ನಾಡಿದೆ. ಆದರೆ ರಾಜ್ಯದ ಸಂಪನ್ಮೂಲಗಳನ್ನು ದೊಡ್ಡ ಪ್ರಮಾಣದಲ್ಲಿ ಬಳಸುವ ಮಾಹಿತಿ ತಂತ್ರ ಜ್ಞಾನ, ಜೈವಿಕ ತಂತ್ರಜ್ಞಾನ, ಗಣಿಗಾರಿಕೆ, ಖಾಸಗಿ ಶಿಕ್ಷಣ, ಆರೋಗ್ಯ ಉದ್ಯಮಗಳ ಮೇಲೆ ತೆರಿಗೆ ಹಾಕುವ ಯಾವುದೇ ಮಾತಿಲ್ಲ. ಇದರಿಂದ ಈ ಘೋಷಣೆಗಳು ಎಷ್ಟರ ಮಟ್ಟಿಗೆ ವಾಸ್ತವವಾಗುತ್ತವೆ ಎಂಬ ಸಂಶಯ ಮೂಡಿದೆ.

ಖಾಸಗೀಕರಣದ ತೀವ್ರ ದುಷ್ಪರಿಣಾಮಗಳಿಂದ ಜನರು ನಿರಂತರವಾಗಿ ಪೀಡನೆಗೊಳಗಾಗಿರುವಾಗಲೇ ಸಾರ್ವಜನಿಕ-ಖಾಸಗಿ ಸಹಭಾಗಿತ್ವವೇ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಮಾತ್ರವಲ್ಲ, ಸರ್ಕಾರ ಒದಗಿಸುವ ಆರೋಗ್ಯ ಸೇವೆ, ಉದ್ಯೋಗ ಶಿಕ್ಷಣ, ಕೃಷಿ ವಿಸ್ತರಣೆಯೆಂಬ ರೈತರಿಗೆ ವೈಜ್ಞಾನಿಕ ಕೃಷಿಯನ್ನು ಕಲಿಸಲೂ ಕೂಡ ಸರ್ಕಾರ ಅವಲಂಭಿಸುವ ದಾರಿ ಎನ್ನುವುದನ್ನು ರಾಜ್ಯಪಾಲರ ಭಾಷಣ ಸ್ಪಷ್ಟಪಡಿಸಿದೆ. ಜಾಗತಿಕ ಬಂಡವಾಳಗಾರರ ಸಮಾವೇಶ, ಅವರಿಗೆ ಭೂಮಿ, ವಿದ್ಯುತ್, ನೀರು ಒದಗಿಸುವ ಬಗ್ಗೆ ಆತುರ ತೋರಿಸುವ ಸರ್ಕಾರ, ವಿವಿಧ ಪಾರ್ಕಗಳನ್ನು ಸ್ಥಾಪಿಸಲು ಮುನ್ನುಗ್ಗುವ ಸರ್ಕಾರ ಸರ್ಕಾರಿ ಭೂಮಿಯನ್ನು ಹಲವು ದಶಕಗಳಿಂದ ಉಳುಮೆ ಮಾಡುತ್ತಿರುವ ಬಡ ರೈತರಿಗೆ ಪಟ್ಟಾ ನೀಡುವ, ಅರಣ್ಯ ಭೂಮಿಯನ್ನು ಉಳುಮೆ ಮಾಡುತ್ತಿರುವ ಗಿರಿಜನರಿಗೆ ಮತ್ತು ಇತರ ರೈತರಿಗೆ, ದಲಿತರಿಗೆ ಭೂಮಿ ಹಕ್ಕು ನೀಡುವ ಬಗ್ಗೆ ಚಕಾರ ಎತ್ತಿಲ್ಲ. ಅರೆ ಬರೆ ನಡೆದ ಭೂಸುಧಾರಣೆಯನ್ನು ಇಂದು ಕೂಡ ಮತ್ತೆ ತೀವ್ರಗೊಳಿಸದೆ ಯಾವ ಸಾಮಾಜಿಕ ನ್ಯಾಯದ ಕ್ರಮವೂ ಊರ್ಜಿತವಾಗುವುದಿಲ್ಲ. ಹೈದರಾಬಾದ್ ಕರ್ನಾಟಕದ ಹಿಂದುಳಿಯುವಿಕೆಯನ್ನು ತೊಡೆಯಲು ಕೂಡ ಸಾಧ್ಯವಾಗುವುದಿಲ್ಲ ಎಂಬ ಅರಿವು ಈ ನೀತಿ ನಿರೂಪಣೆಯ ಭಾಗವಾಗಿಲ್ಲ. ಗುಡಿಸಲು ಮುಕ್ತ ನೀತಿಯನ್ನು ಸಾರುವ ಈ ನೀತಿ ಗ್ರಾಮಗಳಲ್ಲಿ, ನಗರಗಳಲ್ಲಿ ಮನೆಯಿಲ್ಲದವರಿಗೆ ಮುಖ್ಯ ತೊಂದರೆಯೇ ನಿವೇಶನವಿಲ್ಲದಿರುವುದು, ಭೂ ದಂಧೆಯಿಂದಾಗಿ ಅವುಗಳ ಬೆಲೆ ವಿಪರೀತ ಏರಿರುವುದು ಎಂಬುದಕ್ಕೆ ಉತ್ತರ ನೀಡಿಲ್ಲ. ಭೂ ಮಾಫಿಯಾಕ್ಕೆ ಕಡಿವಾಣ ಹಾಕುವ ಯಾವುದೇ ನೀತಿಯಿಲ್ಲ. ಇದರಿಂದಾಗಿ ಏಕ ಕಾಲಕ್ಕೆ ರೈತರ ಶೋಷಣೆ ಹಾಗೂ ನಿವೇಶನ ಕೊಳ್ಳ ಬಯಸುವವರ ಶೋಷಣೆ, ನಿವೇಶನವಿಲ್ಲದಿರುವ ಸಮಸ್ಯೆ ತೀವ್ರಗೊಳ್ಳುತ್ತದೆ.

ಇನ್ನು ಪಶ್ಚಿಮ ಘಟ್ಟಗಳ ನೀರು ತಿರುವಿನ ಸಮಗ್ರ ಯೋಜನೆಯ ಬದಲಾಗಿ ಕೇವಲ ಎತ್ತಿನ ಹೊಳೆ ಯೋಜನೆಯನ್ನು ಮಾತ್ರ ಜಾರಿಗೊಳಿಸುವುದು, ಕಾವೇರಿ ಐತೀರ್ಪಿನ ಬಗ್ಗೆ ಸುಪ್ರೀಂ ಕೋರ್ಟಿನ ಮುಂದಿರುವ ಕಟ್ಟೆಯಲ್ಲಿ ರಾಜ್ಯಕ್ಕೆ ಹೆಚ್ಚಿನ ನೀರು ಪಡೆಯುವ ಮೊದಲೇ ಅದನ್ನು ಒಪ್ಪಿಕೊಂಡು ಜಾರಿ ಮಾಡುವ ಮಾತು, ಉದ್ದಿಮೆಗಳಿಗೆ ನೀರು ಒದಗಿಸುವುದರಲ್ಲಿ ಉತ್ಸಾಹ ಇವು ರಾಜ್ಯದ ಜನತೆಗೆ, ರೈತರಿಗೆ ನೀರೊದಗಿಸುವುದರಲ್ಲಿ ಸರ್ಕಾರಕ್ಕೆ ಇರುವ ಸಮಗ್ರ ದೃಷ್ಟಿ ಕೋನದ ಕೊರತೆಯನ್ನು ತೋರಿಸುತ್ತದೆ. ವಿದ್ಯುತ್ ಯೋಜನೆಗಳ ಬಗ್ಗೆ ಕೇವಲ ಸರ್ವೇ ಸಾಮಾನ್ಯ ಹೇಳಿಕೆಗೆ ಭಾಷಣ ಸೀಮಿತವಾಗಿದೆ.


ಇನ್ನು ಕೋಮುವಾದಿಗಳು ಕರಾವಳಿಯಲ್ಲಿ, ಇತರೆಡೆಗಳಲ್ಲಿ ನಡೆಸಿದ ಅವಾಂತರಗಳ ಬಗ್ಗೆ ಕಾರಣಗಳನ್ನು ಹುಡುಕಿ, ಹೊಣೆಗಾರರನ್ನು ಗುರುತಿಸಿ ದೋಷಾರೋಪ ಮಾಡುವ ಬದಲು ಅವರ ಮೇಲೆ ಇದ್ದ ಅನೇಕ ಮೊಕದ್ದಮೆಗಳನ್ನು ವಜಾ ಮಾಡಿದ ಬಿಜೆಪಿ ಸರ್ಕಾರದ ನೀತಿಯನ್ನೇ ಮುಂದುವರೆಸುತ್ತಿದೆ. ಜನರ ಮೇಲೆ ಹಲ್ಲೆ, ಆಸ್ತಿ ಪಾಸ್ತಿಗಳ ನಾಶಗಳನ್ನು, ಅನೇಕ ಕ್ರಿಮಿನಲ್ ಕೃತ್ಯಗಳನ್ನು ಎಸಗಿದ ಸಂಘ ಪರಿವಾರಕ್ಕೆ ಕಾನೂನು ವಿರೋಧವಾಗಿ ಮಾಫಿ ನೀಡುವ ನೀತಿಯಾಗಿದೆ. ಅದೇ ರೀತಿ ಅಪರಿಮಿತ ಭ್ರಷ್ಟಾಚಾರದ ಹಗರಣಗಳ ಬಗ್ಗೆ ಕ್ರಮ ಕೈಗೊಳ್ಳುವ, ಗಣಿ ಬಗೆಗಿನ ಲೋಕಾಯುಕ್ತರ ವರದಿಗಳನ್ನು ಅಂಗೀಕಾರ ಮಾಡುವ ಬಗ್ಗೆ ಮಾತೇ ಇಲ್ಲ. ಪಂಚಾಯತ್, ಪೌರ ಸಂಸ್ಥೆಗಳು, ಕಾರ್ಪೋರೇಷನುಗಳ, ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿನ ಭಷ್ಟಾಚಾರವನ್ನು ತೊಡೆದು ಹಾಕುವ ಕುರಿತು ಮಾತೇ ಇಲ್ಲವಾಗಿದೆ.

ಹೀಗೆ ಇಲ್ಲಿಯವರೆಗೆ ಸರ್ಕಾರ ಘೋಷಿಸಿದ ಕ್ರಮಗಳನ್ನು ರಾಜ್ಯಪಾಲರ ಭಾಷಣ ನಿರರ್ಥಕಗೊಳಿಸುತ್ತದೆ. ಕಾಂಗ್ರೆಸ್ ಪಕ್ಷ ಹಿಡಿದಿರುವ ದಾರಿ ಅದರ ವಿನಾಶಕಾರಿ ನೀತಿಯ ಅವಿಭಾಜ್ಯ ಅಂಗವಾಗಿದೆ.


ನವೀನ್ ಸೂರಿಂಜೆ ಮೇಲಿನ ಪ್ರಕರಣಗಳ ವಾಪಸಾತಿ

'ಜನಶಕ್ತಿ' ಸ್ವಾಗತ

'ಹೋಂ ಸ್ಟೇ' ಮೇಲಿನ ನೈತಿಕ ಪೋಲೀಸರ ದಾಳಿ ಪ್ರಕರಣದ ವರದಿ ಮಾಡಿದ ಪತ್ರಕರ್ತ ನವೀನ್ ಸೂರಿಂಜೆ ಬಿಜೆಪಿ ಸರ್ಕಾರದ ದ್ವೇಷಪೂರಿತ ಪ್ರತಿಕಾರ ಕ್ರಮದಿಂದಾಗಿ ದಾಳಿಕೋರರ ಮೇಲೆ ಹೂಡಲಾದ ಪ್ರಕರಣಗಳ ಅಡಿಯಲ್ಲಿಯೇ ಜೈಲುಪಾಲಾಗಿದ್ದು ರಾಜ್ಯಕ್ಕೆ ತಿಳಿದಿರುವ ಸಂಗತಿ. ಜನಚಳುವಳಿಗಳು ಈ ದೌರ್ಜನ್ಯವನ್ನು ತೀವ್ರವಾಗಿ ಖಂಡಿಸಿ ಹೋರಾಟ ನಡೆಸಿದ್ದು, ಒತ್ತಡಕ್ಕೆ ಮಣಿದು ಬಿಜೆಪಿ ಸರ್ಕಾರ ಪ್ರಕರಣ ವಾಪಸ್ ಪಡೆಯುವುದಾಗಿ ಘೋಷಿಸಿದ್ದು ಎಲ್ಲವೂ ಹಳೆಯ ಸುದ್ದಿ. ಆದರೆ ಬಿಜೆಪಿ ಸರ್ಕಾರ ಪ್ರಕರಣ ವಾಪಸ್ ಪಡೆದಿರಲಿಲ್ಲ. ಈಗಿನ ಕಾಂಗ್ರೆಸ್ ಸರ್ಕಾರದ ಸಚಿವ ಸಂಪುಟವು ನವೀನ್ ಸೂರಿಂಜೆ ಮೇಲಿನ ಸುಳ್ಳು



ಪ್ರಕರಣಗಳನ್ನು ವಾಪಸ್ ಪಡೆದಿದೆ. 'ಜನಶಕ್ತಿ'ಯು ಸರ್ಕಾರದ ಈ ಕ್ರಮವನ್ನು ಸ್ವಾಗತಿಸಿದೆ.



ವಾ.ಉ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮರ್ಪಕವಾಗಿ ಜಾರಿಯಾಗದ ಶಿಕ್ಷಣ ಹಕ್ಕು ಕಾಯಿದೆ

ಡಿವೈಎಫ್ಐ ಮತ್ತು ಎಸ್‌ಎಫ್‌ಐ ದ.ಕ.ಜಿಲ್ಲಾ ಸಮಿತಿಗಳ ಆಶ್ರಯದಲ್ಲಿ ಶಿಕ್ಷಣ ಹಕ್ಕು ಕಾಯಿದೆ ಸಮರ್ಪಕವಾಗಿ ಅನುಷ್ಠಾನಗೊಂಡಿದೆಯೇ ಎಂಬ ಬಗ್ಗೆ ಸಮಾಲೋಚನಾ ಸಭೆಯೊಂದು ಜೂನ್ 7 ರಂದು ಜರಗಿತು. ಶಿಕ್ಷಕರೂ, ಶಿಕ್ಷಣ ತಜ್ಞರೂ, ಸಾಹಿತಿಗಳು ಮತ್ತು ಆಸಕ್ತರು ಭಾಗಿಯಾದ ಈ ಸಭೆಯು ಶಿಕ್ಷಣ ರಂಗದ ಅನೇಕ ವಾಸ್ತವಿಕ ಸಂಗತಿಗಳ ವಿಶ್ಲೇಷಣೆ ನಡೆಸಿತು.

ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ 25% ಸೀಟುಗಳನ್ನು ಕಡ್ಡಾಯಗೊಳಿಸುವ ಕಾಯ್ದೆಯ ಸೌಲಭ್ಯದ ಬಗ್ಗೆ ಚರ್ಚೆಯಲ್ಲಿ ವಿಶೇಷ ಒತ್ತು ನೀಡಲಾಯಿತು. ದ.ಕ.ಜಿಲ್ಲೆ ಸೇರಿದಂತೆ ರಾಜ್ಯದಲ್ಲಿ ಈ ಕಾಯ್ದೆ ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿಲ್ಲ ಎಂಬ ಆರೋಪ ಸಾರ್ವತ್ರಿಕವಾಗಿ ಕೇಳಿ ಬರುತ್ತಿದೆ. ದ.ಕ. ಜಿಲ್ಲೆಯಲ್ಲಿ ಕಳೆದ ಶೈಕ್ಷಣಿಕ ವರ್ಷದಲ್ಲಿ 1645 ಸೀಟುಗಳಲ್ಲಿ 45% ಸೀಟುಗಳು ಭರ್ತಿಯಾಗಿದ್ದರೆ, ಈ ವರ್ಷ 65% ದಷ್ಟು ಸೀಟುಗಳು ಭರ್ತಿಯಾಗಿವೆ. ಕಳೆದ ವರ್ಷ ಕಾಯಿದೆ ಹೊಸತು ಎಂಬ ಸಬೂಬು ಇತ್ತು. ಈ ವರ್ಷ ಆಗದಿರುವುದೇ ಕಾರಣ ಏನು?

ಕಾಯ್ದೆಯಲ್ಲಿ ಹಲವಾರು ದೋಷಗಳಿವೆ, ಕಾಯ್ದೆ ಪರಿಪೂರ್ಣವಾಗಿಲ್ಲ ಎಂಬ ಆಕ್ಷೇಪಗಳು ಒಂದೆಡೆ ಕೇಳಿ ಬಂದ-ರೆ, ಜಾರಿಗೊಳಿಸಬೇಕಾದ ಅಧಿಕಾರಿಗಳ ಬೇಜವಾಬ್ದಾರಿ, ರಂಗೋಲಿ ಕೆಳಗೆ ನುಸುಳುವ ಸಂಸ್ಥೆಗಳು, ಬಡ ಪೋಷಕರಿಗೆ ಮಾಹಿತಿ ಕೊರತೆ, ಆಡಳಿತ ಮಂಡಳಿಗಳಿಂದ ಬಡ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಆಗುವ ಅವಮಾನ ಮುಂತಾದ ವಿದ್ಯಮಾನಗಳಿಂದಾಗಿ ಕಾಯ್ದೆಯ ಲಾಭ ಬಡ ವಿದ್ಯಾರ್ಥಿಗಳಿಗೆ ದೊರಕುತ್ತಿಲ್ಲ. ಸಿಬಿಎಸ್‌ಸಿ ಪಠ್ಯ ಕ್ರಮದ ಶಾಲೆಗಳು ಮತ್ತು ಅಲ್ಪಸಂಖ್ಯಾತರ ಮಾಲಕತ್ವದ ಶಾಲೆಗಳು ಈ ಕಾಯ್ದೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಯಶಸ್ವಿಯಾಗುತ್ತಿವೆ. ಇಂಥ ಶಾಲೆಗಳು ದ.ಕ.ಜಿಲ್ಲೆಯಲ್ಲಿ ಬೇರೆ ಜಿಲ್ಲೆಗಳಲ್ಲಿ ಇರುವುದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಇರುವುದು ಈ ಜಿಲ್ಲೆಯಲ್ಲಿ ಬಡ ಕುಟುಂಬದ ಮಕ್ಕಳು ಗುಣಮಟ್ಟದ ಶಾಲೆಗಳಲ್ಲಿ ಪ್ರವೇಶಾವಕಾಶ ವಂಚಿತರಾಗಲು ಕಾರಣವಾಗಿವೆ.

ದೇಶದ ಎಲ್ಲಾ ಮಕ್ಕಳಿಗೂ ಶಿಕ್ಷಣ ಸಿಗುವ ಬಗ್ಗೆ ಮತ್ತು ಆ ಶಿಕ್ಷಣ ಗುಣಮಟ್ಟದ್ದಾಗಿರುವ ಬಗ್ಗೆ ಶಿಕ್ಷಣದ ಹಕ್ಕು ಕಾಯ್ದೆ ಪ್ರಾಧ್ಯಾನ್ಯತೆ ಕೊಟ್ಟಿದ್ದರೆ, ಇವತ್ತು ನಾವು 25% ಖಾಸಗಿ ಸಂಸ್ಥೆಗಳಲ್ಲಿ ಮೀಸಲಾತಿ ಬಗ್ಗೆ ಚರ್ಚಿಸುವ ಪರಿಸ್ಥಿತಿ ಬಂದಿರುವುದರ ಬಗ್ಗೆ ಎಸ್‌ಎಫ್‌ಐ ರಾಜ್ಯಾಧ್ಯಕ್ಷ ಅನಂತ ನಾಯಕ್ ಕಳವಳ ವ್ಯಕ್ತಪಡಿಸಿದರು. ಮಕ್ಕಳು ಸಾಕಷ್ಟಿಲ್ಲ ಎಂಬ ಕಾರಣಕ್ಕಾಗಿ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು 10 ಸಾವಿರ ಸಂಖ್ಯೆಯಲ್ಲಿ ಮುಚ್ಚಿಸಲಾಗುತ್ತಿದೆ; ಇನ್ನೊಂದೆಡೆ ಖಾಸಗಿ ಶಾಲೆಗಳಲ್ಲಿ ಕಾಯ್ದೆ ಅನ್ವಯ ಪ್ರವೇಶ ಪಡೆದ ಮಕ್ಕಳಿಂದ ದೇಣಿಗೆ ಕೊರತೆ ಅನುಭವಿಸಿದ ಶಾಲೆಗಳಿಗೆ ವಾರ್ಷಿಕ ತಲಾ ರೂ.11,000 ಹಣ ನೀಡಲಾಗುತ್ತಿದೆ; ಯಾವ ರಾಜ್ಯವೂ ಇಷ್ಟೊಂದು ದೊಡ್ಡ ಮೊಬಲಗನ್ನು ಆರ್‌ಟಿಇ ಕಾಯ್ದೆ ಅನುಷ್ಠಾನಕ್ಕಾಗಿ ನೀಡುತ್ತಿಲ್ಲ ಎಂದು ಅವರು ವಿವರಿಸಿದರು. ಕಾಯ್ದೆ ಅನುಷ್ಠಾನ ಸದ್ಯಕ್ಕೆ ಸಾಧ್ಯವಿಲ್ಲ ಎಂದು ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ 'ಕುಸ್ಮಾ' 6 ದಿನ ಶಿಕ್ಷಣ ಸಂಸ್ಥೆಗಳನ್ನೇ ಬಂದ್ ಮಾಡಿತ್ತು. ಈಗಲೂ ರಾಜ್ಯದ ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳ ಧೋರಣೆ ಅದೇ ಆಗಿದೆ. ಅಂಥವರ ಮೇಲೆ ಕ್ರಮ ಕೈಗೊಳ್ಳುವ ಬದಲು ಸರ್ಕಾರ ಅವುಗಳಿಗೆ ರಕ್ಷಣೆ ಕೊಡುತ್ತಿದೆ. 4000 ಅನಧಿಕೃತ ಶಾಲೆಗಳು ನಡೆಯುತ್ತಿದ್ದರೂ ಇದು ಶಿಕ್ಷಣ ಹಕ್ಕುಗಳ ಉಲ್ಲಂಘನೆಯಾಗಿದ್ದರೂ ಸರ್ಕಾರ ಯಾವ ಕ್ರಮವನ್ನೂ ಕೈಗೊಳ್ಳುತ್ತಿಲ್ಲ ಎಂದು ದೂಷಿಸಿದರು.



ಶಿಕ್ಷಣ ಹಕ್ಕು ಕಾಯಿದೆ ಅಷ್ಟೇನೂ ಕ್ರಾಂತಿಕಾರಕ ಕಾಯಿದೆ ಅಲ್ಲ. ಆದ-ರೆ ಸಮಾನತೆಯ ಶಿಕ್ಷಣದಲ್ಲಿ ಆಸಕ್ತರು ಇರುವ ಕಾನೂನು ಅವಕಾಶಗಳನ್ನು ಬಳಸಿಕೊಳ್ಳಬೇಕು. ಸಿಬಿಎಸ್‌ಸಿ, ಐಎಸ್‌ಸಿಇ, ಪಾಶ್ಚಾತ್ಯ ಮಾದರಿ ಶಾಲೆಗಳು ಸಮಾನತೆಗೆ ವಿರೋಧಿಯಾಗಿವೆ. ಸಮಾನ ಶಿಕ್ಷಣಕ್ಕಾಗಿ ಖಾಸಗಿ ಸಂಸ್ಥೆಗಳ ಮೇಲೆ ಸರ್ಕಾರ ನಿಯಂತ್ರಣ ಇಟ್ಟುಕೊಳ್ಳಲು ಸಾರ್ವಜನಿಕರು ಸರ್ಕಾರವನ್ನು ಒತ್ತಾಯಿಸಬೇಕು ಎಂದು ಅನಂತ ನಾಯಕ್ ಆಗ್ರಹಿಸಿದರು.

ಬಾಲ ಕಾರ್ಮಿಕತೆ ವಿರುದ್ಧ ಆಂದೋಲನ (ಸಿಎಸಿಎಲ್) ಸಂಸ್ಥೆಯ ರೆನ್ನಿ ಡಿಸೋಜ ಮೂಲ ಕಾಯಿದೆಯಲ್ಲಿಯೇ ವ್ಯಾಪಕವಾದ ಸಾರ್ವತ್ರಿಕ ಶಿಕ್ಷಣಕ್ಕೆ ಅವಕಾಶವಿಲ್ಲದಿರುವ ಅಂಶವನ್ನು ಗಮನಕ್ಕೆ ತಂದರು. ಶಿಕ್ಷಕರ ಪರಿಸ್ಥಿತಿಯ ಬಗ್ಗೆ ಮಾತನಾಡದೆ, ಕಳಪೆ ಗುಣಮಟ್ಟಕ್ಕಾಗಿ ಅವರನ್ನು ಸುಮ್ಮನೆ ದೂರಲಾಗುತ್ತಿದೆ. ಅಧಿಕಾರಿಗಳು ವರದಿ ಮಾಡುವುದಕ್ಕಿಂತ ಹೆಚ್ಚಿಗೆ ಮಕ್ಕಳು ಶಾಲೆಯ ಹೊರಗೆ ಇರುವುದನ್ನು ಕಾಣಬಹುದಾಗಿದೆ. ಆರ್‌ಟಿಇ ಕಾಯ್ದೆಯನ್ನು ಉಲ್ಲಂಘಿಸುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಶಿಕ್ಷಣ ಕ್ಷೇತ್ರದ ಅಧಿಕಾರಿಗಳು ತಮ್ಮ ಅಧಿಕಾರ ಬಳಸಿ ಕ್ರಮ ಜರಗಿಸುತ್ತಿಲ್ಲ ಎಂದು ಅವರು ತಿಳಿಸಿದರು.

ಶಿಕ್ಷಣ ತಜ್ಞ ಸಿ.ಎಚ್. ಕೃಷ್ಣಶಾಸ್ತ್ರಿ ಬಾಳಿಲ ಅವರು ಗುಣಮಟ್ಟ ಎಂಬ ಪರಿಕಲ್ಪನೆಯನ್ನೇ ಪ್ರಶ್ನಿಸಿ ಮಾತನಾಡಿದರು. ನಮಗೆ ಬೇಕಿರುವುದು ಮೇಲು ಕೀಳಿಗೆ ಅವಕಾಶವಿಲ್ಲದ ಸರ್ವಸಮಾನತೆಯ ಶಿಕ್ಷಣ. ಶಿಕ್ಷಣವು ಸರಕಾರದ ಅನುದಾನದಿಂದಲೇ ಮತ್ತು ಸರ್ಕಾರದ ನಿಯಂತ್ರಣದಲ್ಲೇ ನಡೆಯಬೇಕು; ಈಗಾಗಲೇ ಮುಚ್ಚಿದ ಶಾಲೆಗಳ ಮಕ್ಕಳಿಗೆ ಸೂಕ್ತ ಪರ್ಯಾಯ ಒದಗಿಸಬೇಕೆಂದು ಅವರು ಆಗ್ರಹಿಸಿದರು.

ಪ್ರಾಧ್ಯಪಕಿ ಡಾ।ಸಬೀಹಾ ಭೂಮೇಗೌಡ ಅವರು ಮುಂದುವರಿದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಬಡವರ ಶಿಕ್ಷಣಕ್ಕೆ ಇಷ್ಟೊಂದು ತೊಡಕುಗಳಿರುವ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದರು. ಸಾಮಾನ್ಯ ಸಾರ್ವತ್ರಿಕ ಶಿಕ್ಷಣದಲ್ಲಿ ಆಸಕ್ತರಾದ ವಿವಿಧ ಸಮಿತಿಗಳನ್ನು ರಚಿಸಿ, ದ.ಕ.ಜಿಲ್ಲೆಯಲ್ಲಿ ಕಾರ್ಯೋನ್ಮುಖರಾಗಲು ಕೆಲವು ಪ್ರಾಯೋಗಿಕ ಸೂಚನೆಗಳನ್ನು ನೀಡಿದರು.

ಸಮಾಲೋಚನಾ ಸಭೆಯಲ್ಲಿ ಬರಹಗಾರರಾದ ಸಾರಾ ಅಬೂಬಕರ್, ಜ್ಯೋತಿ ಚೇಳ್ಯಾರು, ವಾಸುದೇವ ಉಚ್ಚಿಲ, ಸಾಮಾಜಿಕ ಕಾರ್ಯಕರ್ತರಾದ ಎಂ.ದೇವದಾಸ್ (ಡಿಎಸ್ಸೆಸ್), ಲಿಂಗಪ್ಪ ನಂತೂರು (ದಲಿತ ಹಕ್ಕುಗಳ ಸಮಿತಿ), ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ದಯಾನಂದ ಶೆಟ್ಟಿ, ಎಸ್‌ಎಫ್‌ಐನ ಜಿಲ್ಲಾಧ್ಯಕ್ಷ ನಿತಿನ್ ಕುತ್ತಾರ್, ಕಾರ್ಯದರ್ಶಿ ರಜಾಕ್ ಮೊಂಟೆಪದವು ಮೊದಲಾದವರು ಭಾಗವಹಿಸಿದ್ದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಡಿವೈಎಫ್ಐ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ತಮ್ಮ ಪ್ರಸ್ತಾವನೆಯಲ್ಲಿ ದ.ಕ.ಜಿಲ್ಲೆಯಲ್ಲಿ ಆರ್‌ಟಿಇ ಕಾಯ್ದೆಯ ಅನುಷ್ಠಾನದಲ್ಲಿ ಇರುವ ಕೊರತೆಗಳನ್ನು, ಬಡ ಪೋಷಕರ ಆತಂಕಗಳನ್ನು ವಿವರಿಸಿದರು. ಎಸ್‌ಎಫ್‌ಐ ಜಿಲ್ಲಾ ಸಮಿತಿ ಅಂಕೆ ಸಂಖ್ಯಾ ಮಾಹಿತಿ ಒಳಗೊಂಡ ಒಂದು ಟಿಪ್ಪಣಿಯನ್ನು ಚರ್ಚೆಗಾಗಿ ಒದಗಿಸಿತ್ತು.

ಎಸ್‌ಎಫ್‌ಐ ರಾಜ್ಯ ಸಮಿತಿಯ ಜೀವನ್‌ರಾಜ್ ಕುತ್ತಾರ್ ಸ್ವಾಗತಿಸಿದರು. ನಿತಿನ್ ಕುತ್ತಾರ್ ವಂದಿಸಿದರು.

ನೀವು 'ಜನಶಕ್ತಿ'ಯ ಚಂದಾದಾರರೇ? ಏಜೆನ್ಸಿದಾರರೇ? ದಯವಿಟ್ಟು ಗಮನಿಸಿ

'ಜನಶಕ್ತಿ ಕನ್ನಡ ವಾರ ಪತ್ರಿಕೆ'ಯ ಆಡಳಿತ ಮತ್ತು ಪ್ರಸಾರ ನಿರ್ವಹಣೆಯ ಜವಾಬ್ದಾರಿ ಬದಲಾವಣೆಯಾಗಿರುವುದನ್ನು ಈಗಾಗಲೇ ಗಮನಿಸಿದ್ದೀರಿ ಎಂದು ಭಾವಿಸುತ್ತೇವೆ. ಹೊಸ ಚಂದಾಗಳ ನೀಡಿಕೆ, ವಿಳಾಸ ಬದಲಾವಣೆ, ಪತ್ರಿಕೆ ತಲುಪದಿರುವ ಬಗೆಗಿನ ದೂರುಗಳು, ಏಜೆನ್ಸಿದಾರರ ಪತ್ರಿಕೆಗಳ ಹೆಚ್ಚಳ, ಬಾಕಿ ವಿಚಾರಣೆ, ಹಣ ಪಾವತಿ, ದೂರುಗಳು ಹಾಗೂ ಜಾಹಿರಾತುಗಳಿಗೆ ಸಂಬಂಧಿಸಿದ ಎಲ್ಲ ವ್ಯವಹಾರ, ವಿಚಾರಣೆ ಇತ್ಯಾದಿಗಳನ್ನು ಇನ್ನು ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡುವುದು. ಕಚೇರಿಯ ನೇರ ಸಂಪರ್ಕವು ಕಛೇರಿ ಕಾರ್ಯ ನಿರ್ವಹಿಸುವ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ ಎಂಬುದನ್ನು ಗಮನಿಸ ತಕ್ಕದ್ದು.

ವಿಳಾಸ : 'ಜನಶಕ್ತಿ' ಆಡಳಿತ ಕಚೇರಿ,
c/o. ಕ್ರಿಯಾ ಪ್ರಕಾಶನ, ಸೂರಿ ಭವನ, # 40/5, 2ನೇ 'ಬಿ' ಮೈನ್, 16ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು-560027
email : janashakthi13.admn@gmail.com
Phone : 22234369
ಹೆಚ್.ಆರ್.ಸವಿತ ರಾಣಿ : 9483966467,
ಜಿ.ಚಂದ್ರಶೇಖರ್ : 9448578021
(ಕಾರ್ಯಾಲಯದ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆವರೆಗೆ)

ಜನಶಕ್ತಿ
ಕನ್ನಡ ವಾರಪತ್ರಿಕೆ

ಆಹಾರ, ಮನೆ ನಿವೇಶನ, ಉದ್ಯೋಗ ಖಾತ್ರಿ...

ಜೀವನಾಧಾರ ಅಗತ್ಯಗಳಿಗಾಗಿ ರಾಷ್ಟ್ರವ್ಯಾಪಿ ಚಳುವಳಿ

ಕುಟುಂಬಕ್ಕೆ 2 ರೂ ಮೀರದ ಬೆಲೆಯಲ್ಲಿ 35 ಕೆ.ಜಿ. ಆಹಾರ ಧಾನ್ಯ, ಬಿಪಿಎಲ್, ಎಪಿಎಲ್ ಎನ್ನದೇ ಈ ಪಡಿತರ ವ್ಯವಸ್ಥೆಯ ಸಾರ್ವತ್ರೀಕರಣ, ಬೆಲೆ ಏರಿಕೆ ತಡೆಗೆ ಕ್ರಮ, ವಸತಿ ಇಲ್ಲದ ಬಡವರಿಗೆ ಮನೆ ನಿವೇಶನ, ಸಾಮಾಜಿಕ ನ್ಯಾಯದ ರಕ್ಷಣೆ, ನಿರುದ್ಯೋಗ ನಿವಾರಣೆ ಕ್ರಮ, ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿ, ಶಿಕ್ಷಣ ಮತ್ತು ಆರೋಗ್ಯದ ಹಕ್ಕು ಜಾರಿ, ವ್ಯಾಪಾರದಲ್ಲಿ ವಿದೇಶೀ ನೇರ ಬಂಡವಾಳಕ್ಕೆ ತಡೆ, ಭ್ರಷ್ಟಾಚಾರದ ವಿರುದ್ಧ ಕಠಿಣ ಕ್ರಮ ಇತ್ಯಾದಿ ಬೇಡಿಕೆಗಳ ಆಧಾರದಲ್ಲಿ ರಾಷ್ಟ್ರವ್ಯಾಪಿಯಾದ ಚಳುವಳಿ ನಡೆಸಲು ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿ ಕರೆ ನೀಡಿದ ಬಗೆಗೆ ಪತ್ರಿಕೆಯಲ್ಲಿ ಓದಿದ್ದೀರಿ. ಮೇ ತಿಂಗಳ ಕೊನೆಯಲ್ಲಿ ನಡೆದಿರುವ ಈ ಚಳುವಳಿಯ ಕುರಿತ ಸಂಕ್ಷಿಪ್ತ ವರದಿ ಇಲ್ಲಿದೆ.

ರಾಷ್ಟ್ರವ್ಯಾಪಿ ಸಂಚರಿಸಿದ ಸಿಪಿಐ(ಎಂ) ನೇತೃತ್ವದ ಜನ ಸಂಘರ್ಷ ಜಾಥಾದ ಸಮಾರೋಪದ ಸಂದರ್ಭದಲ್ಲಿಯೇ ಈ ಚಳುವಳಿಯ ಕುರಿತು ತೀರ್ಮಾನ ಘೋಷಿಸಲಾಗಿತ್ತು. ಈ ಬೇಡಿಕೆಗಳು ಜನರ ಬದುಕಿನ ಜ್ವಲಂತ ಪ್ರಶ್ನೆಗಳಿಗೆ ಸಂಬಂಧಿಸಿದ ಬೇಡಿಕೆಗಳು. ಕರ್ನಾಟಕ ರಾಜ್ಯದಲ್ಲಿ ವಿಧಾನ ಸಭಾ ಚುನಾವಣೆಗಳು ಇದ್ದ ಕಾರಣದಿಂದ ಈ ಚಳುವಳಿಯನ್ನು ಆ ಹಂತದಲ್ಲಿ ನಡೆಸಲಾಗಿಲ್ಲ. ಆದರೆ ದೇಶದ ವಿವಿಧ ಭಾಗಗಳಲ್ಲಿ ಈ ಚಳುವಳಿಯ ಕರೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ತ್ರಿಪುರ-ದಾಖಲೆ ಬಂಧನ

ತ್ರಿಪುರ ರಾಜ್ಯದಲ್ಲಿ ಈ ಪ್ರಶ್ನೆಗಳ ಆಧಾರದಲ್ಲಿ ಮೇ 15 ರಿಂದ 28 ರವರೆಗೆ ರಾಜ್ಯವ್ಯಾಪಿಯಾದ ತೀವ್ರವಾದ ಪ್ರಚಾರಾಂದೋಲನ ನಡೆಸಲಾಗಿದೆ. ಮೇಲ್ಕಂಡ ಬೇಡಿಕೆಗಳಲ್ಲದೇ ಭಾರತ ಆಹಾರ ನಿಗಮವು ರೈತರಿಗೆ ಕನಿಷ್ಟ ಬೆಂಬಲ ನೀಡಿ ಭತ್ತವನ್ನು ಖರೀದಿಸಬೇಕು, ಪಡಿತರ ವ್ಯವಸ್ಥೆಯಲ್ಲಿ ಸಕ್ಕರೆಯನ್ನು ಸಮರ್ಪಕವಾಗಿ ನೀಡಬೇಕು ಮುಂತಾದ ಸ್ಥಳೀಯ ಬೇಡಿಕೆಗಳನ್ನಿಟ್ಟು ಬೃಹತ್ ಚಳುವಳಿ ನಡೆಸಲಾಯಿತು. ರಾಜ್ಯಾದ್ಯಂತ ನಡೆದ ಸಾಮೂಹಿಕ ಸತ್ಯಾಗ್ರಹದಲ್ಲಿ ಸು. 1.76 ಲಕ್ಷ (ನಿಖರ ಲೆಕ್ಕ 1,76,052) ಜನರು ಸುಡುವ ರಣಬಿಸಿಲನ್ನು ಲೆಕ್ಕಿಸದೇ ಬಂಧನಕ್ಕೆ ಒಳಗಾಗಿದ್ದಾರೆ. ತ್ರಿಪುರ ರಾಜ್ಯದ ಪ್ರಜಾಸತ್ತಾತ್ಮಕ ಚಳುವಳಿಯಲ್ಲೇ ಇದೊಂದು ದಾಖಲೆಯಾಗಿದೆ. ಈ ಜನರಲ್ಲಿ ಮಹಿಳೆಯರು ಬಾರಿ ಉತ್ಸಾಹದಿಂದ ಮತ್ತು ಭಾರಿ ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದು ಗಮನಾರ್ಹವಾದ ಅಂಶವಾಗಿತ್ತು. ಈ ಚಳುವಳಿಯ ಭಾಗವಾಗಿ ರಾಜ್ಯದ ನಲವತ್ತು ಸ್ಥಳಗಳಲ್ಲಿ ಕೇಂದ್ರ ಸರ್ಕಾರ ಕಛೇರಿಗಳ ಬಳಿ ಈ ಸತ್ಯಾಗ್ರಹ ನಡೆದಿದೆ. ತ್ರಿಪುರದ ರಾಜ ಧಾನಿ ಅಗರ್ತಲದಲ್ಲಿ 'ಆಲ್ ಇಂಡಿಯಾ ರೇಡಿಯೋ' ಕಾರ್ಯಾಲಯದ ಮುಂದೆ ನಡೆದ ಸತ್ಯಾಗ್ರಹದಲ್ಲಿ 12,002 ಜನರು ಬಂಧನಕ್ಕೆ ಒಳಗಾಗಿದ್ದಾರೆ.

ಪಶ್ಚಿಮ ಬಂಗಾಳ-ಕಾಯ್ದೆ ಭಂಗ ಚಳುವಳಿ

ಪಶ್ಚಿಮ ಬಂಗಾಳ ರಾಜಧಾನಿ ಕೊಲ್ಕೋತ್ತಾದಲ್ಲಿ ಮೇ 31, 2013 ರಂದು ಬೃಹತ್ ಕಾಯ್ದೆಭಂಗ ಚಳುವಳಿಯೇ ನಡೆಯಿತು. ಪಶ್ಚಿಮ ಬಂಗಾಳದಲ್ಲಿ ರಾಜಕೀಯ ಪಕ್ಷಗಳು ಜನಾಂದೋಲನದ ಭಾಗವಾಗಿ ಕಾಯ್ದೆಭಂಗ ಚಳುವಳಿ ನಡೆಸುವುದು ಹೊಸದೇನಲ್ಲ. ಎಲ್ಲ ಪಕ್ಷಗಳೂ ಇಂತಹ ಚಳುವಳಿ ನಡೆಸುತ್ತಾ ಬಂದಿವೆ. ಆದರೆ ಅಧಿಕಾರ ರೂಢ ತೃಣಮೂಲ ಸರ್ಕಾರ ಕೊನೆ ಕ್ಷಣದಲ್ಲಿ ಚಳುವಳಿಯನ್ನು ನಿಷೇಧಿಸಿ ಆದೇಶ ಹೊರಡಿಸಿತು. ಆದರೆ ಸರ್ಕಾರದ ಈ ಆದೇಶವನ್ನು ಧಿಕ್ಕರಿಸಿ ಚಳುವಳಿಗಾರರು ಚಳುವಳಿ ನಡೆಸಿಯೇ ನಡೆಸಿದರು. 'ರಾಣಿ ರಶ್ಮೋನಿ' ರಸ್ತೆಯಲ್ಲಿ ನೆರೆದ ಸಾವಿರಾರು ಜನರು ಕಾಯ್ದೆ ಉಲ್ಲಂಘಿಸಿದರು. ಸರ್ಕಾರ ಅತ್ಯಂತ 'ಬಿಗಿಭದ್ರತೆ', 'ಬಂದೋಬಸ್ತ್' ಏರ್ಪಾಟು ಮಾಡಿತ್ತು. ಪೋಲಿಸರು ಕಾಮ್ರೆಡ್ ಭಿಮನ್ ಬಸು, ಸೂರ್ಯಕಾಂತ ಮಿಶ್ರ, ಅಶೋಕ್ ಘೋಷ್, ಖಿತಿ ಗೋಸ್ವಾಮಿ ನೇತೃತ್ವದ ಮೊದಲ ತಂಡವನ್ನು ಬಂಧಿಸಿದರು. ಆದರೆ ಪೋಲಿಸರು ಎಲ್ಲರನ್ನು ಬಂಧಿಸಲಿಲ್ಲ. ಎಲ್ಲರನ್ನೂ ಬಂಧಿಸುವಂತೆ ಒತ್ತಾಯಿಸಿ ಚಳುವಳಿಗಾರರು ಸಾಕಷ್ಟು ಹೊತ್ತು ಚಳುವಳಿ ಸ್ಥಳದಲ್ಲೇ ಕೂತು ಹಠ ಮಾಡಿದರೂ ಸರ್ಕಾರ ಅವರನ್ನು ಬಂಧಿಸಲಿಲ್ಲ.



ತ್ರಿಪುರಾ

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಚಳುವಳಿ ನಡೆದಿದೆ. ಬರ್ದ್ವಾನ್ ಜಿಲ್ಲೆ ಸು. ನಲವತ್ತು ಸಾವಿರ ಜನರು, ದಕ್ಷಿಣ ಪರಗಣ ಮತ್ತು ಬಿರ್‌ಬೂಮ್ ಜಿಲ್ಲೆಗಳಲ್ಲಿ ಸುಮಾರು ತಲಾ ಹತ್ತು ಸಾವಿರ ಜನರು ಬಂಧನಕ್ಕೆ ಒಳಗಾಗಿದ್ದಾರೆ. 24 ಪರಗಣ ಜಿಲ್ಲೆಯಲ್ಲಿ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯಕ್ಕೆ ಮುತ್ತಿಗೆ ಹಾಕಿ ಬಂಧನಕ್ಕೆ ಒಳಗಾಗಿದ್ದಾರೆ. ಪುರುಲಿಯಾದಲ್ಲಿ ಬಸುದೇವ ಆಚಾರ್ಯ ಅವರ ನೇತೃತ್ವದಲ್ಲಿ ಚಳುವಳಿ ನಡೆದಿದೆ. ಮೇಲ್ಕಂಡ ಸಾಮಾನ್ಯ ಬೇಡಿಕೆಗಳಲ್ಲದೇ ರಾಜ್ಯದಲ್ಲಿ ಚಿಟ್‌ಫಂಡ್ ಸಂಸ್ಥೆಯಿಂದ ಸಂತ್ರಸ್ತರಾದವರಿಗೆ ಸರಿಯಾದ ಪರಿಹಾರ, ಎಸ್‌ಎಫ್‌ಐ ಸಂಗಾತಿ ಸುದೀಪ್ತೋ ಗುಪ್ತಾ ಸಾವಿನ ಬಗೆಗೆ ಸೂಕ್ತ ತನಿಖೆ ಮುಂತಾದ ಬೇಡಿಕೆಗಳಿಗಾಗಿ ಸಹ ಒತ್ತಾಯಿಸಲಾಯಿತು.



ತಮಿಳುನಾಡು

ದೆಹಲಿ-ಸಚಿವಾಲಯದ ಮುಂದೆ ಬೃಹತ್ ಪ್ರದರ್ಶನ

ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಮೇ 28 ರಂದು ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಯಿತು. ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಪಾಲ್ಗೊಂಡ ಈ ಚಳುವಳಿಯಲ್ಲಿ ನಗರ ಉದ್ಯೋಗ ಖಾತ್ರಿ ಯೋಜನೆ ಜಾರಿಗಾಗಿ ಹಾಗೂ ನೀರು ಮತ್ತು ವಿದ್ಯುತ್ ದರ ಏರಿಕೆ ಕೈಬಿಡಲು ಹಾಗೂ ಬಡವರಿಗೆ ಕಡಿಮೆ ದರದ ಫ್ಲ್ಯಾಟ್‌ಗಳನ್ನು ನಿರ್ಮಿಸಿ ಕೊಡಲು ಆಗ್ರಹಿಸಲಾಯಿತು.

ಅದೇ ರೀತಿ ದಲಿತರು, ಹಿಂದುಳಿದವರು ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೆ ನ್ಯಾಯಬದ್ಧವಾಗಿ ಸಿಗಬೇಕಾದ ಸೌಲಭ್ಯಗಳಲ್ಲಿ ವಂಚನೆಯಾಗುತ್ತಿರುವುದನ್ನು ತಪ್ಪಿಸಬೇಕೆಂದು ತೀವ್ರವಾಗಿ ಒತ್ತಾಯಿಸಲಾಯಿತು.

ಐಟಿಓ ಬಳಿ ನೆರೆದ ಚಳುವಳಿಕಾರರು ನಂತರ ದೆಹಲಿ ಸರ್ಕಾರದ ಸಚಿವಾಲಯಕ್ಕೆ ಪ್ರತಿಭಟನಾ ಮೆರವಣಿಗೆಯಲ್ಲಿ ತೆರಳಿ ಬಂಧನಕ್ಕೆ ಒಳಗಾದರು.

ಜೈಪುರದಲ್ಲಿ ಪ್ರಕಾಶ್ ಕಾರಟ್ ಬಂಧನ

ಮೇ 31, 2013 ರಂದು ಎಲ್ಲೆಲ್ಲೂ ನೆತ್ತಿ ಸುಡುವ ಬಿಸಿಲು. ಆದರೆ ಅದಕ್ಕೆ ರಾಜಾಸ್ಥಾನದ ಸಿಪಿಐ(ಎಂ) ಮುಖಂಡರು, ಕಾರ್ಯಕರ್ತರ ಹೋರಾಟದ ಉತ್ಸಾಹಕ್ಕೆ ಭಂಗ ತರಲು ಆಗಲಿಲ್ಲ. ಇಡೀ ರಾಜ್ಯವ್ಯಾಪಿಯಾಗಿ ಚಳುವಳಿ ನಡೆಯಿತು. ರಾಜಧಾನಿ ಜೈಪುರದಲ್ಲಿ ಸು. ನೂರಕ್ಕೂ ಹೆಚ್ಚು ಮಹಿಳೆಯರು, ಒಟ್ಟಾರೆ ಸುಮಾರು 500 ಜನರು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಪ್ರಕಾಶ್ ಕಾರಟ್ ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ವಾಸುದೇವ್ ಅವರೊಂದಿಗೆ ಬಂಧನಕ್ಕೆ ಒಳಗಾದರು. ಪ್ರತಿಭಟನಾಕಾರರು ಮೊದಲು ಖಾಸಾ ಖೋಟಿ ಕೂಡುಸ್ಥಳದಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ನೆರೆದು ಪ್ರತಿಭಟನೆ ನಡೆಸಿದರು. ಉದ್ಯೋಗ ಖಾತ್ರಿ ಯೋಜನೆಯನ್ನು ನಗರ ಪ್ರದೇಶಗಳಿಗೂ ವಿಸ್ತರಿಸಲು, ಪಡಿತರ ವ್ಯವಸ್ಥೆ ಬಲಪಡಿಸಲು ಕಾರಟ್ ಆಗ್ರಹಿಸಿದರು.

ಜಾರ್ಖಂಡ್-ಅರಣ್ಯ ಹಕ್ಕು ಕಾಯ್ದೆ ಜಾರಿಗೆ ಆಗ್ರಹ

ಆದಿವಾಸಿಗಳು ಅರಣ್ಯವಾಸಿಗಳು ಬಹುದೊಡ್ಡ ಸಂಖ್ಯೆಯಲ್ಲಿರುವ ರಾಜ್ಯ ಜಾರ್ಖಂಡ್. ಆದರೆ ಅಲ್ಲಿ ಅರಣ್ಯ ಹಕ್ಕು ಕಾಯ್ದೆ ಜಾರಿಗೇ ಬಂದಿಲ್ಲ!!

ಮೇ 29 ರಂದು ನಡೆದ ಚಳುವಳಿಯಲ್ಲಿ ಉಳಿದ ಬೇಡಿಕೆಗಳ ಜೊತೆಗೆ ಒಂದು ಪ್ರಧಾನ ಪ್ರಶ್ನೆ ಈ ಅರಣ್ಯ ಹಕ್ಕು ಕಾಯ್ದೆ ಜಾರಿ ಮಾಡಿ ಎಂದು ಆಗ್ರಹಿಸುವುದಾಗಿತ್ತು. ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯೆ ಬೃಂದಾ ಕಾರಟ್ ಇಲ್ಲಿ ಹೋರಾಟದಲ್ಲಿ ಪಾಲ್ಗೊಂಡಿದ್ದರು.

ರಾಜ್ಯದಲ್ಲಿ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ, ಒಟ್ಟಾರೆ 82 ಬ್ಲಾಕ್‌ಗಳಲ್ಲಿ ಚಳುವಳಿ ನಡೆಯಿತು. ರಾಜಧಾನಿ ರಾಂಚಿಯಲ್ಲಿ ಜೈಪಾಲ್ ಸಿಂಗ್ ಸ್ಟೇಡಿಯಂನಿಂದ ಮೆರವಣಿಗೆ ಹೊರಟ ಚಳುವಳಿಗಾರರು ಜಿಲ್ಲಾಧಿಕಾರಿಗಳ ಕಛೇರಿಗೆ ಮುತ್ತಿಗೆ ಹಾಕಿದರು. ಬೃಂದಾ ಅವರು ಇಲ್ಲಿ ಮಾತನಾಡಿ 6.5 ಕೋಟಿ ಟನ್ ಆಹಾರವು ದೇಶದ ಗೋದಾಮುಗಳಲ್ಲಿ ಸಂಗ್ರಹಗೊಂಡಿದ್ದರೂ ಸರ್ಕಾರ ಜನರಿಗೆ ಆಹಾರವನ್ನು ಕಡಿಮೆದರದಲ್ಲಿ ಕೊಡುತ್ತಿಲ್ಲ ಎಂದು ಖಂಡಿಸಿದರು. ಬಿಪಿಎಲ್ ಕಾರ್ಡುದಾರರ ಪಟ್ಟಿಯಿಂದ ಕೈಬಿಡಲಾಗಿರುವ ಅರ್ಹ ಬಡವರಿಗೆ ಬಿಪಿಎಲ್ ಕಾರ್ಡು ಕೊಡುವುದಾಗಿ ಮತ್ತು ಅರಣ್ಯ ಹಕ್ಕು ಕಾಯ್ದೆ ಜಾರಿ ಮಾಡುವುದಾಗಿ ರಾಂಚಿ ಜಿಲ್ಲಾಧಿಕಾರಿ ಚಳುವಳಿಗಾರರಿಗೆ ಭರವಸೆ ನೀಡಿದರು. ಆದಿವಾಸಿ ಮಹಿಳೆಯರು ಮತ್ತು ಯುವಜನರು ಇಲ್ಲಿ ಗಣನೀಯ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ನಕ್ಸಲ್‌ಪೀಡಿತ ಚಾತ್ರ ಜಿಲ್ಲೆಯ ಹುಂತರ್‌ಗಂಜ್ ಬ್ಲಾಕ್‌ನಲ್ಲಿ ಸುಮಾರು 2,000 ದಷ್ಟು ನೊಂದ ಜನರು ಚಳುವಳಿಯಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ಮೇ 30 ಮತ್ತು 31 ರಂದು ಕ್ರಮವಾಗಿ ಗೊಡ್ಡ ಮತ್ತು ಧನಾಬಾದ್‌ಗಳಲ್ಲಿ ಸಾಮೂಹಿಕ ಚಳುವಳಿ ನಡೆಯಿತು. ಇವೆರಡರಲ್ಲೂ ಬೃಂದಾ ಭಾಗವಹಿಸಿದ್ದರು.

ಪುಟ 13 ಕ್ಕೆ

ಅಪರಾಧಗಳು ಕೇವಲ ವ್ಯಕ್ತಿಗತ ದೌರ್ಬಲ್ಯವೇ ? ನಮ್ಮ ಸಮಾಜದ ಆರ್ಥಿಕ ಸಾಮಾಜಿಕ ವ್ಯವಸ್ಥೆಗೂ ಅಪರಾಧಗಳಿಗೂ ಸಂಬಂಧವೇನು ? ಇಲ್ಲಿ ಹೆಚ್ಚು ಹೆಚ್ಚು ಅಪರಾಧಿಗಳಾಗಿ ಶಿಕ್ಷೆಗೆ ಗುರಿಯಾಗುವವರು ಯಾರು ? ಒಮ್ಮೆ ಮರಣ ದಂಡನೆ ಜಾರಿಯಾಗಿ ಆಮೇಲೆ ಅದನ್ನು ವಾಪಸ್ ಮಾಡಬೇಕೆಂದರೆ ಅದು ಸಾಧ್ಯವೇ ? ಹೀಗೆ ನಾನಾ ಪ್ರಶ್ನೆಗಳನ್ನು ವಿಶ್ಲೇಶಿಸಿದ್ದಾರೆ ಕೊಡಗಿನ ಹಿರಿಯ ವಕೀಲರು.



ಮರಣ ದಂಡನೆ ಶಿಕ್ಷೆ ಎಷ್ಟು ಸರಿ?

ಐ. ಆರ್. ಪ್ರಮೋದ್

ರಾಜ ಪ್ರಭುತ್ವದ ಕಾಲದಲ್ಲಿ ಕೆಲವು ಅಪರಾಧಗಳನ್ನು ಘೋರ ಅಪರಾಧಗಳೆಂದು ಪರಿಗಣಿಸಿ ಮರಣ ದಂಡನೆ ಶಿಕ್ಷೆ ವಿಧಿಸಲಾಗುತ್ತಿತ್ತು.

ರಾಜ ಪ್ರಭುತ್ವವನ್ನು ವಿರೋಧಿಸುವವರನ್ನು ವಿದ್ರೋಹಿಗಳೆಂದು ಆರೋಪಿಸಿ ಸಾರ್ವಜನಿಕವಾಗಿ ಗಲ್ಲಿಗೇರಿಸಿ, ಆನೆಯಿಂದ ತುಳಿಸಿ ಅಥವಾ ಕಡಿದಾದ ಬೆಟ್ಟದ ತುದಿಯಿಂದ ಕೆಳಗೆ ತಳ್ಳಿ ಹತ್ಯೆ ಮಾಡಲಾಗುತ್ತಿತ್ತು. ಬ್ರಿಟಿಷ್ ಸಾಮ್ರಾಜ್ಯಶಾಹಿ ಆಳ್ವಿಕೆಯ ಕಾಲದಲ್ಲಿ ಕೂಡ ಈ ಶಿಕ್ಷೆ ಇನ್ನಷ್ಟು ಕಠಿಣವಾಗಿತ್ತು. ದೇಶಿಯರ ಮೇಲೆ ತಮ್ಮ ಪ್ರಭುತ್ವದ ಹಿಡಿತವನ್ನು ಬಲಿಷ್ಟಗೊಳಿಸಲು ಬ್ರಿಟಿಷ್ ಸರಕಾರ ದಮನಕಾರಿಯಾದ ಶಿಕ್ಷೆಯನ್ನು ನೀಡುತ್ತಿತ್ತು.

ಬ್ರಿಟಿಷ್ ಸಾಮ್ರಾಜ್ಯಶಾಹಿ ಆಳ್ವಿಕೆಯನ್ನು ವಿರೋಧಿಸಿ ಹೋರಾಟ ನಡೆಸಿದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಹಲವರನ್ನು ಮರಣ ದಂಡನೆ ಶಿಕ್ಷೆಗೆ ಗುರಿಪಡಿಸಿದೆ. ಭಗತ್ ಸಿಂಗ್, ರಾಜಗುರು ಸುಖದೇವ್ ಮತ್ತು ಕಯ್ಯೂರಿನ ರೈತ ಹೋರಾಟಗಾರರು ಗಲ್ಲಿಗೇರಿ ಹುತಾತ್ಮರಾದರು.

ಕರಿ ನೆರಳು

ಸ್ವಾತಂತ್ರೋತ್ತರ ಭಾರತ ಹೊಸ ಸಂವಿಧಾನವನ್ನು ಅಂಗೀಕರಿಸಿದರೂ ಕೂಡ ಅಪರಾಧ ಶಿಕ್ಷೆಗಳನ್ನು ನಿರೂಪಿಸುವ ಕ್ರಿಮಿನಲ್ ಸಂಹಿತೆ, ನ್ಯಾಯಾಂಗದ ಸ್ವರೂಪ, ಸಾಕ್ಷ್ಯ ಸಂಹಿತೆ ಇತ್ಯಾದಿಗಳೆಲ್ಲ ಬ್ರಿಟಿಷ್ ಕಾಲದ ಮಾದರಿಯಲ್ಲಿಯೇ ಮುಂದುವರಿಯಿತು. ಭಾರತದ ದಂಡ ಸಂಹಿತೆಯಲ್ಲಿ ಕೊಲೆ, ಸೈನಿಕ ದಂಗೆಯಂಥ ಅಪರಾಧಗಳನ್ನು ಘೋರ ಅಪರಾಧಗಳೆಂದು ವ್ಯಾಖ್ಯಾನಿಸಿ ಅವುಗಳಿಗೆ ಮರಣ ದಂಡನೆ ಶಿಕ್ಷೆಯನ್ನು ವಿಧಿಸಲಾಗಿತ್ತು.

ತಿದ್ದುಪಡಿ

1973 ರಲ್ಲಿ ನಮ್ಮ ಕಾನೂನಿಗೆ ತಿದ್ದುಪಡಿ ತಂದು ಮರಣ ದಂಡನೆ ಶಿಕ್ಷೆ ವಿಧಿಸುವ ಸಂದರ್ಭದಲ್ಲಿ ಸಮರ್ಪಕವಾದ ಕಾರಣವನ್ನು ನೀಡಬೇಕೆಂದು ಷರತ್ತನ್ನು ಸೇರಿಸಲಾಯಿತು.

ಈ ಶಿಕ್ಷೆಯ ಸಂವಿಧಾನಬದ್ಧತೆಯನ್ನು ಪ್ರಶ್ನಿಸಲಾಗಿ ಭಾರತದ ಸುಪ್ರಿಂ ಕೋರ್ಟ್ 1973 ರಲ್ಲಿ ಮರಣ ದಂಡನೆ ಸಂವಿಧಾನಬದ್ಧ ಎಂದು ಘೋಷಿಸಿತು.


ವಿರೋಧ

ಆದರೆ ಮರಣ ದಂಡನೆ ಶಿಕ್ಷೆ ಅಮಾನವೀಯವಾದದ್ದು, ಪ್ರತಿಕಾರಾತ್ಮಕವಾದದ್ದು ಮತ್ತು ಅನಾಗರೀಕವಾದದ್ದು ಎಂದು ಈ ಶಿಕ್ಷೆಯನ್ನು ವಿರೋಧಿಸಿ ಅಂತರಾಷ್ಟ್ರಿಯ ಮಟ್ಟದಲ್ಲಿ ಮತ್ತು ನಮ್ಮ ದೇಶದಲ್ಲಿಯೂ ನಾಗರೀಕ ಹಕ್ಕುಗಳ ಸಂಘಟನೆಗಳಿಂದ ಚಳುವಳಿಗಳು ನಡೆದವು.

ಜಾಗತಿಕ ಮಟ್ಟದಲ್ಲಿ ಹಲವು ರಾಷ್ಟ್ರಗಳು ಮರಣ ದಂಡನೆ ಶಿಕ್ಷೆಯನ್ನು ರದ್ದುಗೊಳಿಸಿದವು.

ವಿಶ್ವ ಸಂಸ್ಥೆ ಸಾಮಾನ್ಯ ಸಭೆ ನಿರ್ಣಯ 1945 ರಲ್ಲಿ ವಿಶ್ವಸಂಸ್ಥೆ ಸ್ಥಾಪನೆಯಾದಾಗ ಎಂಟು ಸದಸ್ಯ ರಾಷ್ಟ್ರಗಳು ಮಾತ್ರ ಮರಣ ದಂಡನೆ ಶಿಕ್ಷೆಯನ್ನು ರದ್ದು ಪಡಿಸಿದ್ದವು. ಆದರೆ ಜೂನ್ 2012 ರಲ್ಲಿ ಒಟ್ಟು 141 ರಾಷ್ಟ್ರಗಳು ಈ ಶಿಕ್ಷೆಯನ್ನು ರದ್ದುಗೊಳಿಸಿದ್ದವು.

ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಈ ಶಿಕ್ಷೆಯನ್ನು ರದ್ದುಗೊಳಿಸಬೇಕೆಂದು ನಿರ್ಣಯವು ಮಂಡನೆಯಾದಾಗ 2010 ರಲ್ಲಿ 109 ರಾಷ್ಟ್ರಗಳು ಈ ನಿರ್ಣಯವನ್ನು ಬೆಂಬಲಿಸಿದರೆ 41 ರಾಷ್ಟ್ರಗಳು ವಿರೋಧಿಸಿದವು. 36 ರಾಷ್ಟ್ರಗಳು ತಟಸ್ಥವಾದವು.



ಆದರೆ ಈ ಶಿಕ್ಷೆಯನ್ನು ಕಾನೂನು ಪುಸ್ತಕದಲ್ಲಿ ಉಳಿಸಿಕೊಂಡ ರಾಷ್ಟ್ರಗಳಲ್ಲಿ ಕೂಡಾ ಈ ಶಿಕ್ಷೆಗೆ ಗುರಿಯಾದವರ ಸಂಖ್ಯೆ ವಿರಳವಾಗಿದೆ. ಕಳೆದ ಐದು ವರ್ಷಗಳಲ್ಲಿ ಈ ಶಿಕ್ಷೆ ಜಾರಿಯಲ್ಲಿರುವ ಒಟ್ಟು 21 ರಾಷ್ಟ್ರಗಳಲ್ಲಿ 25 ಮಂದಿ ಮಾತ್ರ ಬಲಿಯಾಗಿದ್ದರು.

ಭಾರತದಲ್ಲಿ ಕೂಡ ಸ್ವಾತಂತ್ರ್ಯ ಸಿಕ್ಕಿದ ಮೊದಲ ವರ್ಷಗಳಲ್ಲಿ ಪ್ರತಿ ವರ್ಷ ಸರಾಸರಿ 150 ಆರೋಪಿಗಳು ಗಲ್ಲು ಶಿಕ್ಷೆಗೆ ಗುರಿಯಾಗುತ್ತಿದ್ದರು.

1975 ರಿಂದ 1994 ರ ತನಕ ಈ ಸಂಖ್ಯೆ ಸರಾಸರಿ 12 ಆಗಿತ್ತು. 1980ರ ಬಳಿಕ ಭಾರತದಲ್ಲಿ ಭಯೋತ್ಪಾದನೆಯ ಕೃತ್ಯಗಳು ಹೆಚ್ಚಾಗತೊಡಗಿದವು. ಹಲವು ಪ್ರಮುಖ ನಗರಗಳಲ್ಲಿ ಸರಣಿ ಬಾಂಬ್ ಸ್ಫೋಟಗಳಿಂದಾಗಿ ನೂರಾರು ಅಮಾಯಕರು ಜೀವ ಕಳೆದುಕೊಳ್ಳಬೇಕಾಯಿತು. ಸಹಜವಾಗಿಯೇ ಭಯೋತ್ಪಾದನಾ ಕೃತ್ಯಗಳ ವಿರುದ್ಧ ಜನ ಸಾಮಾನ್ಯರ ಆತಂಕ ಮೇರೆ ಮೀರಿತ್ತು. ಭಯೋತ್ಪಾದನೆಯನ್ನು ನಿಗ್ರಹಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂಬ ಆಗ್ರಹ ಮತ್ತು ಒತ್ತಡ ವ್ಯಾಪಕವಾಯಿತು. ಹಾಲೀ ಚಾಲ್ತಿಯಲ್ಲಿರುವ ಕಾನೂನುಗಳು ಭಯೋತ್ಪಾದನಾ ಕೃತ್ಯಗಳ ಆರೋಪಿಗಳನ್ನು ಶಿಕ್ಷಿಸುವುದಕ್ಕೆ ಶಕ್ತವಾಗಿಲ್ಲ ಎಂಬ ಕಾರಣಕ್ಕಾಗಿ ಟಾಡಾ ಕಾಯಿದೆಯನ್ನು ಜಾರಿಗೊಳಿಸಲಾಯಿತು. ಈ ಕಾನೂನಿನ್ವಯ ಆರೋಪಿಗಳಿಗೆ ಜಾಮೀನು ಸಿಗುವುದು ಕಠಿಣವಾಗಿದೆ. ಪೋಲಿಸರು ತನಿಖೆಯ ಆಧಾರದಲ್ಲಿ ಸಲ್ಲಿಸುವ ಸಾಕ್ಷ್ಯಾಧಾರಗಳ ಆಧಾರದಲ್ಲಿ ಮತ್ತು ತನಿಖಾಧಿಕಾರಿಯವರ ಮುಂದೆ ಅರೋಪಿ ನೀಡುವ ತಪ್ಪೊಪ್ಪಿಗೆ ಹೇಳಿಕೆಯ ಆಧಾರದಲ್ಲಿ ಆರೋಪಿಗಳನ್ನು ಶಿಕ್ಷಿಸಬಹುದು. ಮಾಮೂಲಿ ಕಾನೂನಿನ ತತ್ವಕ್ಕೆ ತದ್ವಿರುದ್ಧವಾಗಿ ಈ ಕಾನೂನಿನ್ವಯ ತಾನು ತಪ್ಪಿತಸ್ಥನಲ್ಲವೆಂದು ಸಾಬೀತುಪಡಿಸುವ ಜವಾಬ್ದಾರಿ ಆರೋಪಿಯ ಮೇಲಿರುತ್ತದೆ.

ಆದರೆ ಹಲವು ಪ್ರಕರಣಗಳಲ್ಲಿ ಈ ಕಾಯಿದೆಯನ್ನು ದುರುಪಯೋಗಪಡಿಸಿ ಅಮಾಯಕರನ್ನು ಮುಗ್ದರನ್ನು ಪೋಲೀಸರು ಬಂಧಿಸಿ ದೈಹಿಕ ಹಿಂಸೆಗೆ ಒಳಪಡಿಸಿ ಸುಳ್ಳು ಮೊಕದ್ದಮೆಗಳನ್ನು ದಾಖಲಿಸುತ್ತಿದ್ದಾರೆಂದು ಆರೋಪಗಳೂ ಕೇಳಿ ಬಂದವು.

ಮುಖ್ಯವಾಗಿ ಮುಸ್ಲಿಂ ಯುವಕರನ್ನೇ ಆರೋಪಿಗಳನ್ನಾಗಿಸಿ ಜೈಲಿನಲ್ಲಿ ವರ್ಷಾನುಗಟ್ಟಲೆ ಬಂಧಿಸಿಟ್ಟ ಹಲವು ಪ್ರಕರಣಗಳು ನಡೆದವು. ಹಲವು ಮೊಕದ್ದಮೆಗಳಲ್ಲಿ ಪೋಲೀಸರು ಮಾಡಿದ ಗಂಭೀರ ಆರೋಪಗಳನ್ನು ನ್ಯಾಯಾಲಯ ತಿರಸ್ಕರಿಸಿ ಆರೋಪಿಗಳನ್ನು ಬಿಡುಗಡೆಗೊಳಿಸಿತು.

ಭಯೋತ್ಪಾದಕ ಕೃತ್ಯಗಳು

ಭಾರತದ ಸಂಸತ್ತಿನ ಮೇಲೆ ನಡೆಸಿದ ಭಯೋತ್ಪಾದನೆ ದಾಳಿ ಅತ್ಯಂತ ಹೇಯ ಘಟನೆ, ರಕ್ಷಣಾ ಪಡೆಗಳ ಯೋಧರು ಈ ದಾಳಿಗೆ ಬಲಿಯಾದರು.

ಆ ಬಳಿಕ ಮುಂಬಯಿಯಲ್ಲಿ ಖಾಸಗಿ ಹೋಟೇಲ್‌ನ ಮೇಲೆ ನಡೆದ ಭಯೋತ್ಪಾದಕಾ ದಾಳಿ ಕೂಡಾ ಘೋರ ಅಪರಾಧ. ಈ ದಾಳಿಯಲ್ಲಿ ಹಲವಾರು ಅಮಾಯಕ ಪ್ರವಾಸಿಗಳು, ನಾಗರೀಕರು ಹತ್ಯೆಗೀಡಾದರು.

ಕೋಮುವಾದಿ ಪ್ರಚಾರದ ಒತ್ತಡಕ್ಕೆ ಸಿಲುಕಿ

ಈ ಪ್ರಕರಣಗಳಲ್ಲಿ ಆರೋಪಿಗಳಾದ ಅಫ್ಜಲ್ ಗುರು ಮತ್ತು ಕಸಾಬ್‌ರಿಗೆ ಸುಪ್ರೀಂ ಕೋರ್ಟ್ ಮರಣ ದಂಡನೆ ಶಿಕ್ಷೆ ವಿಧಿಸಿತ್ತು. ಆರೋಪಿಯ ಮನವಿಯ ಮೇರೆ ಮರಣ ದಂಡನೆ ಶಿಕ್ಷೆಯನ್ನು ವಿನಾಯಿತಿ ಕ್ಷಮಾದಾನ ನೀಡುವ ಅಧಿಕಾರ ರಾಷ್ಟ್ರಪತಿಗೆ ಇದೆ. ಪ್ರಣಬ್ ಮುಖರ್ಜಿಯವರು ರಾಷ್ಟ್ರಪತಿಯವರಾದ ಬಳಿಕ ಈ ಇಬ್ಬರೂ ಅಪರಾಧಿಗಳ ಕ್ಷಮಾದಾನದ ಅರ್ಜಿಗಳನ್ನು ತಿರಸ್ಕರಿಸಿ ತರಾತುರಿಯಿಂದ ರಹಸ್ಯವಾಗಿ ಗಲ್ಲಿಗೇರಿಸಲಾಯಿತು. ಗಲ್ಲಿಗೇರಿಸುವ ಮುನ್ನ ಅವರ ಕುಟುಂಬದವರಿಗೆ ಮಾಹಿತಿಯನ್ನು ನೀಡಲಿಲ್ಲ. ಓರ್ವ ವ್ಯಕ್ತಿಗೆ ಅಂತಿಮ ಕ್ಷಣದಲ್ಲಿ ನೀಡಬೇಕಾದ ಕನಿಷ್ಟ ಮಾನವೀಯ ಕಾಳಜಿಯನ್ನೂ ತೋರಿಸಲಿಲ್ಲ.

ಈ ಅಪರಾಧಿಗಳ ವಿರುದ್ಧ ಶಿಕ್ಷೆಯನ್ನು ಜಾರಿಗೊಳಿಸದ ಕೇಂದ್ರ ಸರಕಾರವನ್ನು ಹಿಂದುತ್ವವಾದಿ ಪಕ್ಷಗಳು ಮತ್ತು ಸಂಘಟನೆಗಳು, ಬಲಹೀನ 'ದುರ್ಬಲ' 'ಹೇಡಿ' ಸರ್ಕಾರ ಎಂಬ ಸತತ ಅಬ್ಬರದ ಪ್ರಚಾರಕ್ಕೆ ಉತ್ತರ ಎನ್ನುವ ರೀತಿಯಲ್ಲಿ

ಪುಟ 11 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

24 ಗಂಟೆಗಳ ಅಡ್ವಾಣಿ ಪ್ರತಿಭಟನೆ ಮೋದಿಗೆ ಸಂಪೂರ್ಣ ಆರೆಸ್ಸೆಸ್ ಬೆಂಬಲ

ಮೋದಿ ವಿಷಮಯ ಹಿಂದುತ್ವ ಹಾಗೂ ಬಂಡವಾಳಶಾಹಿ ಹಿತಗಳ ಒಂದು ಮಿಶ್ರಣದ ಪ್ರತೀಕ. ಇದು ಬಲಪಂಥೀಯ ಸರ್ವಾಧಿಕಾರಶಾಹಿಗೆ ಅತ್ಯಂತ ಅನುಕೂಲಕರವಾದ ಮಿಶ್ರಣ. ಇದೇ ಗುಜರಾತ ಅಭಿವೃದ್ಧಿ ಮಾದರಿ ಎಂದನಿಸಿಕೊಂಡಿದೆ. ಅಡ್ವಾಣಿಯವರ 24 ಗಂಟೆಗಳ ಸಾಂಕೇತಿಕ ಪ್ರತಿಭಟನೆ ಏನೇ ಇರಲಿ, ವರ್ಗದೃಷ್ಟಿಯಿಂದ ದೊಡ್ಡ ಬಂಡವಾಳಶಾಹಿಗಳ ಮತ್ತು ರಾಜಕೀಯವಾಗಿ ಆರೆಸ್ಸೆಸ್‌ನ ಬೆಂಬಲ ಮೋದಿಗೆ ದಕ್ಕಿದೆ. ಈ ಸಾಧ್ಯತೆಯನ್ನು ವಿರೋಧಿಸಿದ ಜೆಡಿ(ಯು) ಕೊನೆಗೂ ...ಡಿಎ ಬಿಟ್ಟರೆ ಅದು ಕೇವಲ ಮೂರು ಕೋಮುವಾದಿ ಕಣ್ಣೋಟದ ಪಕ್ಷಗಳ ಮೈತ್ರಿಕೂಟವಾಗಿ ಉಳಿದು ಬಿಡುತ್ತದೆ.


ಸೀತಾರಾಮ ಯೆಚೂರಿ


ಗೋವಾದಲ್ಲಿ ನಡೆದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯ ಸಭೆ ನರೇಂದ್ರ ಮೋದಿಯವರನ್ನು ಲೋಕಸಭಾ ಚುನಾವಣೆಯ ಪ್ರಚಾರ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದೆ. ಈ ನಿರ್ಣಯದೊಂದಿಗೆ ಮೋದಿಯವರನ್ನು ತನ್ನ ಪ್ರಧಾನಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸುವತ್ತ ಬಿಜೆಪಿ ಮುಂದಿನ ಹೆಜ್ಜೆ ಇಟ್ಟಿದೆ. ನೋಡುಗರ ಕಣ್ಣಿಗೆ ಮಣ್ಣೆರಚುವ ಪ್ರಯತ್ನವನ್ನು ಇಲ್ಲಿ ಮುಚ್ಚಿಡಲೂ ಆಗಿಲ್ಲ. ಇದಕ್ಕೆ ಕಾರಣ ಹಿರಿಯ ಮುಖಂಡ ಎಲ್. ಕೆ.ಅಡ್ವಾಣಿಯವರು ವ್ಯಕ್ತಪಡಿಸಿದ ವಿರೋಧ ಮತ್ತು ಮೋದಿಯವರನ್ನು ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸಲು ಎನ್‌ಡಿಎ ಮಿತ್ರಪಕ್ಷ ಜನತಾ ದಳ(ಯು)ಕ್ಕೆ ಇರುವ ಆಕ್ಷೇಪ.

ನರೇಂದ್ರ ಮೋದಿ ಬಿಜೆಪಿ/ಆರೆಸ್ಸೆಸ್ ಕೂಟದ ಆಕ್ರಮಣಕಾರಿ ಹಿಂದುತ್ವ ಸಿದ್ಧಾಂತದ ಮೂರ್ತರೂಪ. ಗುಜರಾತ ರಾಜ್ಯ 1980ರ ದಶಕದ ಮಧ್ಯಭಾಗದಿಂದ ಸಂಘ ಪರಿವಾರ ತನ್ನ ಹಿಂದುತ್ವ ಪ್ರಯೋಗವನ್ನು ಮೊದಲ ಬಾರಿಗೆ ನಡೆಸಿದ ಪ್ರಯೋಗಶಾಲೆ. ಈ ಪ್ರಯೋಗದ ಯಶಸ್ಸಿನ ಪರಿಣಾಮವೆಂದರೆ ಸಮಾಜ ಕ್ರಮೇಣ ಕೋಮುಗ್ರಸ್ತಗೊಳ್ಳಲಾರಂಭಿಸಿದ್ದು. ಜೊತೆಗೆ ಮುಸ್ಲಿಂ, ಕ್ರೈಸ್ತ ಅಲ್ಪಸಂಖ್ಯಾತರ ಮೇಲೆ ವ್ಯವಸ್ಥಿತ ದಾಳಿಗಳು–ಇದರ ಚರಮಘಟ್ಟವೇ ...2ರ ಕೋಮುವಾದಿ ಹತ್ಯಾಕಾಂಡ. ನರೇಂದ್ರ ಮೋದಿ ಮೇಲೆದ್ದು ಬಂದದ್ದು ಈ ಕೋಮುವಾದಿ ಯೋಜನೆಯೊಳಗಿಂದಲೇ. ಹೀಗೆ ಮೋದಿಗೆ ಸಿಕ್ಕ ಪದೋನ್ನತಿ ಆರೆಸ್ಸೆಸ್ ಕೊಡಮಾಡಿರುವ ಸಂಪೂರ್ಣ ಬೆಂಬಲದ ಒಂದು ಫಲಿತಾಂಶ ಕೂಡ.

ಆರೆಸ್ಸೆಸ್ ಹಿಡಿತ

ಬಿಜೆಪಿ ಸದಾ ಆರೆಸ್ಸೆಸ್‌ನ ರಾಜಕೀಯ ಅಂಗವಾಗಿಯೇ ಕೆಲಸ ಮಾಡಿದ್ದರೂ, 2004ರ ಲೋಕಸಭಾ ಚುನಾವಣೆಗಳಲ್ಲಿ ಸೋಲಿನ ನಂತರ ಬಿಜೆಪಿ ಮುಖಂಡತ್ವದಲ್ಲಿ ಒಂದು ರೀತಿಯ ಮಂಥನ ನಡೆದಿದೆ. ಪಕ್ಷದ ಮೇಲೆ ಆರೆಸ್ಸೆಸ್‌ನ ಹಿಡಿತ ಕ್ರಮೇಣ ಬಿಗಿಗೊಂಡಿದೆ. 2009ರ ಲೋಕಸಭಾ ಚುನಾವಣೆಗಳಲ್ಲಿ ಎರಡನೇ ಸೋಲಿನ ನಂತರ ಪ್ರಧಾನ ಮುಖಂಡರಾಗಿ ಅಡ್ವಾಣಿಯವರ ಸ್ಥಾನ ಪಲ್ಲಟವಾಯಿತು. ಮುಖಂಡತ್ವಕ್ಕಾಗಿ ತಿಕ್ಕಾಟ ತೀವ್ರಗೊಂಡಿತು. ಬಿಜೆಪಿ ಅಧ್ಯಕ್ಷರಾಗಿ ನಿತಿನ್ ಗಡ್ಕರಿ ನೇಮಕ ಸಂಘಟನೆಯೊಳಗೆ ಆರೆಸ್ಸೆಸ್ ಪಾತ್ರ ಹೆಚ್ಚಿದುದಕ್ಕೆ ಒಂದು ಉದಾಹರಣೆ. ಇಲ್ಲಿ ಒತ್ತು ಇದ್ದದ್ದು ಆರೆಸ್ಸೆಸ್ ಪ್ರತಿಪಾದಿಸುವ ಕಟ್ಟಾ ಹಿಂದುತ್ವ ಅಜೆಂಡಾ–ಕ್ಕೆ ಹಿಂದಿರುಗಿ ಅದನ್ನೇ ಅವಲಂಬಿಸಬೇಕು ಎಂಬುದರ ಮೇಲೆ.





ಆದರೆ ಅತ್ತ ಚುನಾವಣಾ ಯಶಸ್ಸು ಸಾಧಿಸಬೇಕಾದರೆ ಬಿಜೆಪಿ ನೇತೃತ್ವದ ಮೈತ್ರಿಕೂಟವನ್ನು ವಿಸ್ತರಿಸುವ ಅಗತ್ಯವೂ ಇತ್ತು. ಈ ವಾಸ್ತವತೆ ಹಿಂದುತ್ವ ಅಜೆ–ಂಡಾಕ್ಕೆ ಹಿಂದಿರುಗಬೇಕೆಂಬ ಪ್ರವೃತ್ತಿಗೆ ಅನುಗುಣವಾಗಿಲ್ಲ. ಎನ್‌ಡಿಎ ಪಕ್ಷಗಳ ಸಂಖ್ಯೆ ಇಳಿಯುತ್ತಾ ಬಂದಿದ್ದು ಈಗ ಬಿಜೆಪಿ ಜತೆ ಉಳಿದಿರುವ ಪಕ್ಷಗಳು ಮೂರೇ–ಜೆಡಿ(ಯು), ಶಿವಸೇನೆ ಮತ್ತು ಅಕಾಲಿ ದಳ. ಒಂದು ಸರಕಾರ ರಚಿಸಲು ಸಾಧ್ಯವಾಗಬೇಕಾದರೆ ಒಂದು ವಿಶಾಲ ಮೈತ್ರಿಕೂಟ ಅನಿವಾರ್ಯವಾಗಿದೆ. ಈ ಚುನಾವಣಾ ಅನಿವಾರ್ಯತೆಯನ್ನೇ ಎಲ್. ಕೆ.ಅಡ್ವಾಣಿ ನರೇಂದ್ರ ಮೋದಿಯವರು ಮೇಲೇರುವದನ್ನು ತಪ್ಪಿಸುವ ಪ್ರಯತ್ನದಲ್ಲಿ ಬಳಸಿದರು. ಮೋದಿಯ ಕೈಗಳಲ್ಲಿ ಚುಕ್ಕಾಣಿ ಬಂದರೆ ಅದು ಬಿಜೆಪಿಯ ಮಿತ್ರರಾಗುವ ಸಾಧ್ಯತೆ ಇರುವ ಪಕ್ಷಗಳನ್ನು ದೂರ ತಳ್ಳುತ್ತದೆ ಎಂದು ವಾದಿಸಲಾಯಿತು.

ವೈರುಧ್ಯ–ತಿಕ್ಕಾಟಗಳು ಬಹಿರಂಗಕ್ಕೆ

ಕಟ್ಟಾ ಕೋಮುವಾದಿ ಅಜೆಂಡಾ ಮತ್ತು ಅದರೊಂದಿಗೆ ದೊಡ್ಡ ಕಾರ್ಪೊರೇಟುಗಳ, ದೊಡ್ಡ ಬಂಡವಾಳಶಾಹಿ ಹಿತಾಸಕ್ತಿಗಳ ಪ್ರತಿಪಾದನೆ ಇದೀಗ ಬಿಜೆಪಿಯ ನಿಲುವು. ನರೇಂದ್ರ ಮೋದಿ ಚುನಾವಣಾ ಸಮರದ ಮುಖಂಡರಾಗಿ ಉದಯಗೊಂಡಿರುವುದು ಈ ನಿಲುವಿನ ಪ್ರತೀಕ ಕೂಡ. ಈತ ಗುಜರಾತದ ಮುಖ್ಯಮಂತ್ರಿಯಾಗಿ ಸ್ವತಂತ್ರ ಭಾರತದಲ್ಲೇ ಮುಸ್ಲಿಮರ ವಿರುದ್ಧ ಅತ್ಯಂತ ಹೀನ ಹತ್ಯಾಕಾಂಡದ ಸಾರಥ್ಯ ವಹಿಸಿದ್ದವರು. ಅದರ ನಂತರ ತನ್ನ ಸರಕಾರವನ್ನು ದೊಡ್ಡ ಬಂಡವಾಳಿಗರ ಸೇವೆಗೆ ಮುಡಿಪಾಗಿಟ್ಟು ಅವರ ನೆಚ್ಚಿನ ವ್ಯಕ್ತಿಯಾದವರು. ಎಲ್ಲ ಪ್ರಮುಖ ಬಂಡವಾಳಿಗ ಮನೆತನಗಳು–ಎರಡು ಅಂಬಾನಿಗಳು, ಟಾಟಾಗಳು, ಬಿರ್ಲಾಗಳು, ಅದಾನಿ ಮತ್ತು ಎಸ್ಸಾರ್–ಆತನ ಸೇವೆಗಳಿಂದ ಅಲ್ಲಿ ಅಪಾರ ಲಾಭ ಗಿಟ್ಟಿಸಿಕೊಂಡಿದ್ದಾರೆ. ಗುಜರಾತಿನ ಭೂಮಿ ಮತ್ತು ಇತರ ಸಂಪನ್ಮೂಲಗಳನ್ನು ಅವರ ಪದತಲದಲ್ಲಿ ಇಡಲಾಗಿದೆ. ಹೀಗೆ ಮೋದಿ ವಿಷಮಯ ಹಿಂದುತ್ವ ಹಾಗೂ ಬಂಡವಾಳಶಾಹಿ ಹಿತಗಳ ಒಂದು ಮಿಶ್ರಣದ ಪ್ರತೀಕ. ಇದು ಬಲಪಂಥೀಯ ಸರ್ವಾಧಿಕಾರಶಾಹಿಗೆ ಅತ್ಯಂತ ಅನುಕೂಲಕರವಾದ ಮಿಶ್ರಣ. ಇದೇ ಗುಜರಾತ ಅಭಿವೃದ್ಧಿ ಮಾದರಿ ಎಂದನಿಸಿಕೊಂಡಿದೆ.

ಎಲ್.ಕೆ.ಅಡ್ವಾಣಿಯವರ ಸಾಂಕೇತಿಕ ಪ್ರತಿಭಟನಾ ರಾಜೀನಾಮೆ 24 ಗಂಟೆಗಳ ಕಾಲ ಇತ್ತು. ಆರೆಸ್ಸೆಸ್ ಮುಖ್ಯಸ್ಥನ ಆಣತಿ ಅದನ್ನು ಇತ್ಯರ್ಥ ಮಾಡಿತು. ಆದರೆ ಅದು ತಿಕ್ಕಾಟಗಳನ್ನು, ವೈರುಧ್ಯಗಳನ್ನು ಬಹಿರಂಗ–ಕ್ಕೆ ತಂದಿಟ್ಟಿದೆ. ಹಿಂದುತ್ವ ರಾಜಕೀಯ ಅಜೆಂಡಾದ ಜನಕ ಆತನ ಸ್ಥಾನವನ್ನು ಕಸಿದುಕೊಳ್ಳುವ ಪ್ರಯತ್ನ ನಡೆಸಿರುವ ನವ–ದುರಹಂಕಾರಿಯ ಮುಖಾಮುಖಿ. ಆರೆಸ್ಸೆಸ್ ಮತ್ತು 2005ರ ವರೆಗೆ ಅದರ ಅತ್ಯುತ್ತಮ ಸ್ವಯಂಸೇವಕನ ಪ್ರತೀಕವಾಗಿದ್ದಾತನ ನಡುವಿನ ವೈರುಧ್ಯ. ಎನ್‌ಡಿಎ ಒಳಗೂ, ಬಿಜೆಪಿ ಮತ್ತು ಜೆಡಿ(ಯು) ನಡುವೆ ವೈರುಧ್ಯವಿದೆ–ಮೋದಿಯ ಪ್ರಶ್ನೆಯ ಮೇಲೆ. ಕೊನೆಗೂ ಜೆಡಿ(ಯು) ಎನ್‌ಡಿಎ ಬಿಟ್ಟರೆ ಅದು ಕೇವಲ ಮೂರು ಕೋಮುವಾದಿ ಕಣ್ಣೋಟದ ಪಕ್ಷಗಳ–ಬಿಜೆಪಿ, ಶಿವಸೇನೆ ಮತ್ತು ಅಕಾಲಿ ದಳ– ಮೈತ್ರಿಕೂಟವಾಗಿ ಉಳಿದು ಬಿಡುತ್ತದೆ.

ಅಡ್ವಾಣಿಯವರ ಪ್ರತಿಭಟನೆ ಏನೇ ಇರಲಿ, ಬಿಜೆಪಿ ಮುಖಂಡತ್ವ ಪಲ್ಲಟದ ಹಾದಿಯಲ್ಲಿದೆ. ವರ್ಗದೃಷ್ಟಿಯಿಂದ ದೊಡ್ಡ ಬಂಡವಾಳಶಾಹಿಗಳ ಮತ್ತು ರಾಜಕೀಯವಾಗಿ ಆರೆಸ್ಸೆಸ್‌ನ ಬೆಂಬಲ ಮೋದಿಗೆ ನಾಯಕತ್ವ ದಕ್ಕುವಂತೆ ಮಾಡುತ್ತದೆ. ಈ ಸಾಧ್ಯತೆಯನ್ನು ವಿರೋಧಿಸಿದ ಜೆಡಿ(ಯು) ಇಂತಹ ಹೊಸ ವ್ಯವಸ್ಥೆಯಲ್ಲಿ ತಾನು ಉಳಿಯಲು ಸಾಧ್ಯವೇ ಎಂದು ಬೇಗನೇ ನಿರ್ಧರಿಸ ಬೇಕಾಗುತ್ತದೆ. ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಮಾಡಬೇಕಾದ ಕೆಲಸವಂತೂ ಸ್ಪಷ್ಟವಾಗಿದೆ ಕಾಂಗ್ರೆಸ್ ಧೋರಣೆಗಳ ವಿರುದ್ಧ ಹೋರಾಡುವುದಲ್ಲದೆ, ಮುಂಬರುವ ದಿನಗಳಲ್ಲಿ ಮೋದಿ ನೇತೃತ್ವದ ಬಿಜೆಪಿಯನ್ನು ಸೋಲಿಸುವುದರ ಮೇಲೂ ಗಮನ ಕೇಂದ್ರೀಕರಿಸ ಬೇಕಾಗಿದೆ.

ಮರಣ ದಂಡನೆ ....

ಪುಟ 8 ರಿಂದ

ಯುಪಿಎ ಸರಕಾರ ಈ ವಿಚಾರದಲ್ಲಿ ವರ್ತಿಸಿತ್ತು.

ಭಯೋತ್ಪಾದಕರ ವಿರುದ್ಧ ಕಠಿಣ ಶಿಕ್ಷೆಯಾಗಬೇಕೆನ್ನುವುದರಲ್ಲಿ ಯಾರಿಗೂ ಆಕ್ಷೇಪವಿಲ್ಲವಾದರೂ ಕೂಡ ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಲ್ಲಿಯೇ ಹಲವು ದೋಷಗಳಿವೆ ಮತ್ತು ಗಲ್ಲು ಶಿಕ್ಷೆಯಂಥ ಗರಿಷ್ಠ ಶಿಕ್ಷೆ ನೀಡುವ ಸಂದರ್ಭದಲ್ಲಿ ಈ ಅಪರಾಧಿಯ ಹಕ್ಕುಗಳನ್ನು, ವೈಯುಕ್ತಿಕ ಘನತೆಯನ್ನು ತಿರಸ್ಕರಿಸುವುದು ಸರಿಯಲ್ಲ ಎನ್ನುವುದು ಎಲ್ಲಾ ಪ್ರಜಾಪ್ರಭುತ್ವವಾದಿಗಳ ಅಭಿಪ್ರಾಯವಾಗಿತ್ತು.

ಬಿಜೆಪಿ ಮತ್ತು ಹಿಂದುತ್ವವಾದಿ ಸಂಘ ಪರಿವಾರದ ಸಂಘಟನೆಗಳು ಈ ಪ್ರಕರಣಗಳಲ್ಲಿ ಅಪರಾಧಿಗಳು ಜನ್ಮತ: ಮುಸಲ್ಮಾನರು ಎನ್ನುವ ಏಕೈಕ ಕಾರಣಕ್ಕೆ ಕೋಮು ಉನ್ಮತ್ತತೆಯ ದ್ವೇಷಪೂರಿತ ಪ್ರಚಾರವನ್ನು ಮಾಡಿದವು. ಭಯೋತ್ಪಾದನೆಯನ್ನು ನಿಗ್ರಹಿಸುವ ವಿಚಾರದಲ್ಲಿ ಬಿಜೆಪಿ ಮತ್ತು ಸಂಘ ಪರಿವಾರದ ನಿಲುವು ಪ್ರಾಮಾಣಿಕವಾದುದಲ್ಲ.

ಮುಸ್ಲಿಂ ದ್ವೇಷವನ್ನು ಪ್ರಚೋದಿಸಿ ಕೋಮುಸಾಮರಸ್ಯವನ್ನು ಕದಡಿ ರಾಜಕೀಯ ದುರ್ಬಳಕೆ ಮಾಡಿಕೊಂಡು ಅಧಿಕಾರದ ಗದ್ದುಗೆಯನ್ನು ಏರುವ ಹುನ್ನಾರವೇ ಸಂಘ ಪರಿವಾರದ ಆಕ್ರೋಶಭರಿತ ಪ್ರಚಾರಕ್ಕೆ ಮುಖ್ಯ ಕಾರಣ.

ದೇಶಭಕ್ತಿಯ ಮುಖವಾಡ

ಬಿಜೆಪಿ ತನ್ನ ಸಂದರ್ಭ ಸಾಧಕತನವನ್ನು ಮುಚ್ಚಿಡಲು 'ದೇಶಭಕ್ತಿ' ಎನ್ನುವ ಮುಖವಾಡವನ್ನುಹಾಕಿಕೊಳ್ಳುತ್ತದೆ. ಬಿಜೆಪಿಯ 'ದೇಶ ಭಕ್ತಿ'ಯ ಒಂದು ಮಾದರಿ ಹೀಗಿದೆ. ಪಂಜಾಬಿನಲ್ಲಿ ಖಾಲಿಸ್ಥಾನದ ಪರವಾಗಿ ಉಗ್ರವಾದಿ ಭಯೋತ್ಪಾದಕ ಕೃತ್ಯಗಳು ನಡೆಯುತ್ತಿದ್ದ ಆ ದಿನಗಳಲ್ಲಿ, 31–8–95 ರಂದು, ಅಲ್ಲಿನ ಮುಖ್ಯಮಂತ್ರಿಯಾಗಿದ್ದ ಬೇಯಾತ್ ಸಿಂಗ್ ಮತ್ತು ಇತರ ಹದಿನೇಳು ಜನರು ಆತ್ಮಹತ್ಯಾ ಬಾಂಬು ದಾಳಿಕೋರರ ದಾಳಿಯಿಂದ ಹತ್ಯೆಗೀಡಾದರು. ಈ ಪ್ರಕರಣದಲ್ಲಿ ಆರೋಪಿಗಳಾಗಿದ್ದ ಬಬ್ಬರ್ ಖಲ್ಸ ಅಂತರಾಷ್ಟ್ರೀಯ ಸಂಘಟನೆಯ ಮುಖ್ಯಸ್ಥನನ್ನು ಮತ್ತು ಪೋಲೀಸ್ ಕಾನ್ಸ್‌ಟೇಬಲ್‌ರಾಗಿದ್ದ ಬಲಬೀರ್ ಸಿಂಗ್ ರಾಜೋರ ಮತ್ತು ಇತರರನ್ನು ವಿಚಾರಣೆ ನಡೆಸಿದ ನ್ಯಾಯಾಲಯ 2007 ರಲ್ಲಿ ರಾಜೋರನಿಗೆ ಮರಣ ದಂಡನೆ ವಿಧಿಸಿತ್ತು.

ಆದರೆ ಆತ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲಿಲ್ಲ ಮತ್ತು ತನ್ನ ಕೃತ್ಯಕ್ಕೆ ಪಶ್ಚಾತ್ತಾಪವನ್ನು ವ್ಯಕ್ತಪಡಿಸಲಿಲ್ಲ.

ಮರಣ ದಂಡನೆ ಜಾರಿಯೆಂದು ನಿಗದಿಯಾದ ದಿನಾಂಕ 31–3–2012 ಸಮೀಪಿಸುತ್ತಿದ್ದಂತೆಯೇ ಪಂಜಾಬಿನಲ್ಲಿ ಪ್ರತಿರೋಧ ವ್ಯಕ್ತವಾಯಿತು. ಈ ವಿಚಾರದಲ್ಲಿ ಚರ್ಚೆ ನಡೆಸಿದ ಸಿಖ್ಖರ ಪರಮೋಚ್ಚ ಧಾರ್ಮಿಕ ಸಂಸ್ಥೆಯಾದ ಅಖಾಲ್ ತಖ್ತ್, ಈ ಗಲ್ಲುಶಿಕ್ಷೆಯನ್ನು ರದ್ದುಗೊಳಿಸಬೇಕೆಂದು ರಾಷ್ಟ್ರಪತಿಗೆ ಮನವಿ ಸಲ್ಲಿಸಬೇಕೆಂದು ಪಂಜಾಬಿನ ಮುಖ್ಯಮಂತ್ರಿಗೆ ಮತ್ತು ಅಕಾಲಿದಳ ನಾಯಕತ್ವಕ್ಕೆ ಹುಕುಂ ನೀಡಿತ್ತು.

ಪಂಜಾಬಿನ ಮುಖ್ಯಮಂತ್ರಿ 28–3–12 ರಂದು ರಾಷ್ಟ್ರಪತಿಯವರನ್ನು ಭೇಟಿ ಮಾಡಿ ಗಲ್ಲು ಶಿಕ್ಷೆಯನ್ನು ತಡೆ ಹಿಡಿಯುವಂತೆ ಮನವಿ ಸಲ್ಲಿಸಿದರು. ಕೇಂದ್ರ ಸರ್ಕಾರ ಶಿಕ್ಷೆಯನ್ನು ಅಮಾನತ್ತಿನಲ್ಲಿಟ್ಟಿತ್ತು.

ಈ ಶಿಕ್ಷೆಯನ್ನು ವಿರೋಧಿಸಿ ಪಂಜಾಬಿನಲ್ಲಿ ಕೆಲವು ಸಿಖ್ ಪಕ್ಷ ಸಂಘಟನೆಗಳ ಕಾರ್ಯಕರ್ತರು ಖಡ್ಗಗಳನ್ನು ಝುಳಪಿಸುತ್ತ ಖಾಲಿಸ್ಥಾನದ ಪರ ಘೋಷಣೆಗಳನ್ನು ಕೂಗುತ್ತಾ ಪ್ರದರ್ಶನ ನಡೆಸಿದರು.

ತನ್ನ ಕೃತ್ಯದ ಕುರಿತು ಕೊಂಚವೂ ಪಶ್ಚಾತ್ತಾಪ ಪಡದ ಅಪರಾಧಿಯನ್ನು, ಗಲ್ಲು ಶಿಕ್ಷೆಯಿಂದ ಉಳಿಸಲು ಪಂಜಾಬ್ ಸರಕಾರದಲ್ಲಿ ಅಕಾಲಿದಳದೊಡನೆ ಪಾಲುದಾರ ಪಕ್ಷವಾಗಿದ್ದ ಬಿಜೆಪಿ ಕೂಡ ಹೊಣೆಗಾರ ಎನ್ನುವುದು ಈ ಪಕ್ಷದ ಸಂದರ್ಭಸಾಧಕ ನಿಲುವನ್ನು ಬಹಿರಂಗಗೊಳಿಸಿತ್ತು.

ಅಲ್ಲದೇ ಮರಣ ದಂಡನೆಯ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪುಗಳು ಕೂಡಾ ಏಕ ರೀತಿಯ ಮಾನದಂಡಗಳನ್ನು ಪಾಲಿಸಿಲ್ಲ. 1980 ರಲ್ಲಿಯೇ ಸುಪ್ರೀಂ ಕೋರ್ಟ್ ಅತ್ಯಂತ ಅಪೂರ್ವದಲ್ಲಿ ಅಪೂರ್ವವಾದ ಸಂದರ್ಭದಲ್ಲಿ ಮಾತ್ರವೇ ಬಹಳ ಎಚ್ಚರಿಕೆಯಿಂದ ಮರಣ ದಂಡನೆ ಶಿಕ್ಷೆಯನ್ನು ನೀಡಬೇಕೆಂದು ಆದೇಶಿಸಿದ್ದರೂ ಕೂಡಾ ಈ ಪೂರ್ವ ನಿರ್ದೇಶನಗಳನ್ನು ಪಾಲಿಸದೇ ಶಿಕ್ಷೆ ನೀಡಲ್ಪಟ್ಟು ಜೈಲಿನಲ್ಲಿರುವ ಹದಿಮೂರು ಅಪರಾಧಿಗಳ ಶಿಕ್ಷೆಯನ್ನು ರದ್ದುಗೊಳಿಸಬೇಕೆಂದು 2012ರ ಜುಲೈ 25 ರಂದು ಸುಪ್ರೀಂ ಕೋರ್ಟ್‌ನ ಹದಿನಾಲ್ಕು ನಿವೃತ್ತ ನ್ಯಾಯಮೂರ್ತಿಗಳು ಭಾರತದ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು.

ಇದು ಭಾರತದ ನ್ಯಾಯಾಂಗ ಇತಿಹಾಸದಲ್ಲಿಯೇ ಅಪೂರ್ವ ಪ್ರಸಂಗ. ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಮೂರ್ತಿಗಳು ಆ ಕೋರ್ಟಿನ ತೀರ್ಪುಗಳನ್ನು ದೋಷಪೂರಿತ ಎಂದು ಬಹಿರಂಗವಾಗಿ ಒಪ್ಪಿಕೊಂಡ ಈ ವಿಚಾರ, ಮರಣ ದಂಡನೆ ಶಿಕ್ಷೆಯ ಕುರಿತು ಪುನರ್ ವಿಮರ್ಶೆ ಮಾಡುವುದು ತುರ್ತು ಅಗತ್ಯವಾಗಿದೆ ಎಂಬುದನ್ನು ಸ್ಪಷ್ಟಪಡಿಸಿದೆ.

ಅಲ್ಲದೇ ಭಾರತದ ನ್ಯಾಯಾಂಗವು ಕೂಡ ಪ್ರಭುತ್ವದ ಇನ್ನಿತರ ಅಂಗ ಸಂಸ್ಥೆಗಳಂತೆ ವರ್ಗ ಪಕ್ಷಪಾತಿಯಾಗಿದೆ. ಅಧಿಕಾರ ನಡೆಸುವ ಆಳುವ ವರ್ಗಗಳ ರಾಜಕೀಯ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ನ್ಯಾಯಾಂಗ ಕಾಪಾಡುತ್ತದೆ. ಸ್ವತ: ಸುಪ್ರಿಂ ಕೋರ್ಟಿನ ನ್ಯಾಯಾಧೀಶರೇ ಸಮರ್ಥಿಸಿದ ವಾಸ್ತವವಿದು.

ವರ್ಗ ಪಕ್ಷಪಾತ

ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಯಾಗಿದ್ದ ಕೃಷ್ಣ ಅಯ್ಯರ್‌ರವರು ಮರಣ ದಂಡನೆ ಶಿಕ್ಷೆ ವರ್ಗ ಪಕ್ಷಪಾತಿಯಾಗಿದೆ, ಬಡವರು, ಆರ್ಥಿಕವಾಗಿ ದುರ್ಬಲರು ಮಾತ್ರವೇ ಈ ಶಿಕ್ಷೆಗೆ ಗುರಿಯಾದರೆ, ಆಹಾರ ಕಲಬೆರಕೆ, ಆರ್ಥಿಕ ಭ್ರಷ್ಟಾಚಾರ, ನೈಸರ್ಗಿಕ ವಿನಾಶ ಇಂಥ ಸಾರ್ವಜನಿಕ ಹಿತಾಸಕ್ತಿ ವಿರೋಧೀ ಕೃತ್ಯಗಳನ್ನು ಎಸಗುವವರು ಶಿಕ್ಷೆಯಿಂದ ಬಚಾವಾಗುತ್ತಾರೆ ಎಂದು ಘೋಷಿಸಿದರು. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿದ್ದ ನ್ಯಾಯಮೂರ್ತಿ ಭಗವತಿಯವರೂ ಕೂಡ ಭಾರತದ ಸಂದರ್ಭದಲ್ಲಿ ಮರಣ ದಂಡನೆ ಶಿಕ್ಷೆಗೆ ಗುರಿಯಾಗುವವರು ಹೆಚ್ಚಿನಂಶ ಬಡವರು ಮತ್ತು ದಮನಿತರು ಎಂದಿದ್ದಾರೆ.

ಆದರೆ ಸಿಪಿಐ(ಎಂ) ಈ ಶಿಕ್ಷೆಯನ್ನು ವಿರೋಧಿಸುತ್ತಿರುವುದು ಕೇವಲ ನೈತಿಕತೆಯ ಅಥವ ಮಾನವೀಯ ಅನುಕಂಪದ ಆಧಾರದಲ್ಲಲ್ಲ. ಬದಲಿಗೆ ಸ್ಪಷ್ಟವಾದ ವರ್ಗ ವಿಶ್ಲೇಷಣೆಯ ನೆಲೆಯಲ್ಲಿ. ಈ ತಾತ್ವಿಕ ಭೂಮಿಕೆಯನ್ನು ಪ್ರಖ್ಯಾತ ಆರ್ಥಿಕ ತಜ್ಞ ಪ್ರಭಾತ್ ಪಟ್ನಾಯಕ್ ವಿವರಿಸುತ್ತಾರೆ.

ಬಂಡಾವಾಳಶಾಹಿ ಪ್ರಭುತ್ವ ಸ್ವಾತಂತ್ರ್ಯವನ್ನು ಅಪೇಕ್ಷಿಸುವುದಿಲ್ಲ. ಬದಲಿಗೆ ಸರ್ವಾಧಿಕಾರವನ್ನು ಬಯಸುತ್ತದೆ ಎನ್ನುತ್ತಾರೆ ಲೆನಿನ್. ಓರ್ವ ವ್ಯಕ್ತಿ ಎಸಗುವ ಅಪರಾಧವನ್ನು ಆತನ ಸಾಮಾಜಿಕ ಹಿನ್ನಲೆ ಮತ್ತು ಆತ ಬದುಕುವ ಸಮಾಜದ ಆರ್ಥಿಕ ಸಂಬಂಧಗಳ ಪರಿಸ್ಥಿತಿಯಿಂದ ಪ್ರತ್ಯೇಕಿಸಿ, ಕಮ್ಯೂನಿಸ್ಟರು ಮತ್ತು ಪ್ರಗತಿಶೀಲರು ನೋಡುವುದಿಲ್ಲ.


ತದ್ವಿರುದ್ಧವಾಗಿ ಬಂಡವಾಳಶಾಹಿ, ವರ್ಗ ಅಪರಾಧವನ್ನು ಆರೋಪಿಯ ವೈಯುಕ್ತಿಕ ದೌರ್ಬಲ್ಯದ ಕಾರಣ ಎಂದು ಪರಿಗಣಿಸುತ್ತದೆ. ಖಾಸಗೀಕರಣ ಮತ್ತು ಉದಾರೀಕರಣದ ಪರಿಣಾಮವಾಗಿ ನಮ್ಮ ಸಮಾಜದಲ್ಲಿ ಬಡತನ ತೀವ್ರವಾಗುತ್ತಿದೆ, ವರ್ಗಗಳ ನಡುವಿನ ಅಂತರ ಅಗಾಧವಾಗಿ ಹೆಚ್ಚುತ್ತಿದೆ. ಶ್ರಮಿಕ ವರ್ಗದಲ್ಲಿ ಪ್ರಭುತ್ವದ ವಿರುದ್ಧ ಅಸಹನೆ ವ್ಯಾಪಕವಾಗಿ ಬೆಳೆಯುತ್ತಿದೆ. ಮತ್ತು ಸ್ಫೋಟಗೊಳ್ಳಬಹುದಾದ ಅಸಹನೆ ಮತ್ತು ಪ್ರತಿರೋಧವನ್ನು ಹತ್ತಿಕ್ಕಲು ಬಂಡವಾಳಶಾಹಿ ಸಮಾಜದ ಎಲ್ಲಾ ರಂಗಗಳಲ್ಲಿಯೂ ತನ್ನ ಹಿಡಿತವನ್ನು ಬಿಗಿಗೊಳಿಸುತ್ತದೆ. ತನ್ನ ಆಳ್ವಿಕೆಗೆ ಪೂರಕವಾದ ವಿಚಾರಗಳನ್ನೇ ಇಡೀ ದೇಶ ಒಪ್ಪಿಕೊಳ್ಳಬೇಕಾದ ಸರ್ವ ಸಮ್ಮತಿಯ ವಿಚಾರಗಳು ಎಂದು ಮಾಧ್ಯಮಗಳ ಮೂಲಕ ಭ್ರಮೆಯನ್ನು ಚಾಲ್ತಿಯಲ್ಲಿಡುತ್ತದೆ.

ಈ ರೀತಿಯ ಸರ್ವ ಸಮ್ಮತ ವಿಚಾರಗಳನ್ನು ಪ್ರಶ್ನಿಸುವುದನ್ನು ಬಂಡೇಳುವ ಅವಿಧೇಯತನ ಎಂದು ಪರಿಗಣಿಸಿ ಕಠಿಣವಾದ ಶಿಕ್ಷೆಯಿಂದ ನಿರ್ನಾಮಗೊಳಿಸಬೇಕೆಂದು ಪ್ರತಿಪಾದಿಸುತ್ತದೆ. ಪ್ರಭುತ್ವವನ್ನು ಸಶಕ್ತಗೊಳಿಸಲು ಈ ರೀತಿಯ ಕಠಿಣ ಶಿಕ್ಷೆಗಳು ಅಗತ್ಯ ಎಂದು ಪ್ರಚಾರ ಮಾಡುತ್ತಿವೆ.

ಭಯೋತ್ಪಾದಕ ಕೃತ್ಯಗಳ ಆರೋಪಿಗಳನ್ನು ರಾತ್ರೋರಾತ್ರಿ ರಹಸ್ಯವಾಗಿ ಗಲ್ಲಿಗೇರಿಸುವುದರ ಮೂಲಕ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿದೆ ಮತ್ತು ಸರಕ[illegible] ಬಲಿಷ್ಠವಾಗಿದೆ ಎನ್ನುವ ಸಂದೇಶವನ್ನು ರವಾನಿಸಲಾಗಿದೆ ಎನ್ನುತ್ತದೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ.

ಬಿಜೆಪಿ ಮತ್ತು ಸಂಘ ಪರಿವಾರ "ಪರಾಕ್ರಮಿ ಹಿಂದೂ ಸಮಾಜವನ್ನು" ನಿರ್ಮಿಸುವ ನಿಟ್ಟಿನಲ್ಲಿ ಎಲ್ಲಾ ವಿರೋಧಿಗಳನ್ನು ಭಿನ್ನಮತೀಯರನ್ನೂ ಸದೆ ಬಡಿಯಬೇಕೆಂಬ ಉಗ್ರ ಸೈನಿಕ ಭಾಷೆಯನ್ನೇ ಬಳಸುತ್ತದೆ. ಮಾತ್ರವಲ್ಲ ಗಲ್ಲಿಗೇರಿದವರ ಸಾವನ್ನು ವೈಭವೀಕರಿಸಿ ಕುಣಿದು ಕುಪ್ಪಳಿಸಿ ಕೇಕೆ ಹಾಕುತ್ತಾ ಸಿಹಿ ಹಂಚಿ ಈ ಮರಣ ದಂಡನೆಯನ್ನು ಸ್ವಾಗತಿಸಿದೆ.

ಸಿಪಿಐ(ಎಂ) ನಿಲುವು



ಸಿಪಿಐ(ಎಂ) ಕೇಂದ್ರ ಸಮಿತಿಯು ಮೇ ತಿಂಗಳಲ್ಲಿ ನಡೆದ ಸಭೆಯಲ್ಲಿ ಮರಣ ದಂಡನೆ ಶಿಕ್ಷೆಯನ್ನು ರದ್ದುಪಡಿಸುವ ಕುರಿತು ಚರ್ಚಿಸಿ ಮರಣ ದಂಡನೆ ಶಿಕ್ಷೆಯ ರದ್ಧತಿಗೆ ಒತ್ತಾಯಿಸಲು ನಿರ್ಣಯಿಸಿತು. ಭಾರತದಲ್ಲಿ ಮರಣ ದಂಡನೆಯ ಶಿಕ್ಷೆ[illegible] ಅವಿಚಾರಿತವಾಗಿ ಜಾರಿಗೊಳಿಸುತ್ತಿರುವುದೇ ಹೆಚ್ಚು. ಅದು ಅತ್ಯಂತ ಅಮಾನವೀಯವೂ ಮತ್ತು ಒಮ್ಮೆ ಜಾರಿಗೊಳಿಸಿದ ಬಳಿಕ ಬದಲಾಯಿಸಲಾಗದ್ದಾಗಿದೆ. ಮುಂದೆ ದೊರಕಬಹುದಾದ ಹೊಸ ಸಾಕ್ಷ್ಯಾಧಾರಗಳಿಂದ ಶಿಕ್ಷೆಗೊಳಗಾದವನು ಅಪರಾಧಿ ಅಲ್ಲ ಎಂದು ಸಾಭೀತಾದರೆ ಆತನಿಗೆ ನೀಡಲಾದ ಶಿಕ್ಷೆಯನ್ನು ಬದಲಾಯಿಸಲು ಸಾಧ್ಯವಾಗುವುದಿಲ್ಲ, ಏಕೆಂದರೆ ಅಷ್ಟರಲ್ಲಿ ಆತನಿಗೆ ವಿಧಿಸಲಾದ ಮರಣ ದಂಡನೆ ಜಾರಿಯಾಗಿರುತ್ತದೆ. ಆದ್ದರಿಂದ, ಸಿಪಿಐ(ಎಂ), ಅತ್ಯಂತ ಘೋರ, ಅಪರೂಪದಲ್ಲಿ ಅಪರೂಪದ ಪ್ರಕರಣಗಳಲ್ಲಿ ಅಪರಾಧಿಗೆ ಮರಣದಂಡನೆ ಶಿಕ್ಷೆಯನ್ನು ವಿಧಿಸುವ ಬದಲಾಗಿ ಜೀವಾವಧಿ ಶಿಕ್ಷೆ, ಅಂದರೆ ಆತ ಸಹಜ ಸಾವಿಗೆ ಒಳಗಾಗುವವರೆಗೂ ಆತನನ್ನು ಬಂಧನದಲ್ಲಿ ಇರಿಸಬೇಕೆಂದು ಪ್ರತಿಪಾದಿಸಲು ನಿರ್ಣಯಿಸಿದೆ.

ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ ಸುವರ್ಣ ಮಹೋತ್ಸವ – ರಾಷ್ಟ್ರೀಯ ವಿಚಾರ ಸಂಕಿರಣ

ಸಾಮಾಜಿಕ ಕ್ರಾಂತಿಗಾಗಿ ವಿಜ್ಞಾನ

– ಜಯ

ಕೇರಳ ಶಾಸ್ತ್ರಯ ಸಾಹಿತ್ಯ ಪರಿಷತ್ (ಕೆಎಸ್‌ಎಸ್‌ಪಿ) ಈಗ ಸುವರ್ಣ ಮಹೋತ್ಸವ ಆಚರಿಸುತ್ತಿದೆ. ಈ ಜನವಿಜ್ಞಾನ ಸಂಘಟನೆಯು ಕೇರಳ ಸಮಾಜದ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರ ವಹಿಸಿರುವುದಷ್ಟೇ ಅಲ್ಲ, ಅದು ರಾಷ್ಟ್ರಮಟ್ಟದಲ್ಲಿ ಜನವಿಜ್ಞಾನ ಚಳುವಳಿಯಾದ ಅಖಿಲ ಭಾರತ ಜನ ವಿಜ್ಞಾನ ನೆಟ್‌ವರ್ಕ್ (ಎಐಪಿಎಸ್‌ಎನ್) ಸಂಘಟನೆಗೆ ತಾಯಿಯೂ ಹೌದು. ಕೆಎಸ್‌ಎಸ್‌ಪಿ ರಚಿತಗೊಂಡು 50 ವರ್ಷಗಳಾಗಿರುವ ಹಿನ್ನೆಲೆಯಲ್ಲಿ 'ಸಾಮಾಜಿಕ ಕ್ರಾಂತಿಗಾಗಿ ವಿಜ್ಞಾನ' ಎಂಬ ವಿಷಯ ಕುರಿತು 2 ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಅಖಿಲ ಭಾರತ ಜನ ವಿಜ್ಞಾನ ನೆಟ್‌ವರ್ಕ್ ಸಂಘಟನೆಯು ಮೇ 9 & 10 ರಂದು ಆಯೋಜಿಸಿತ್ತು. ಇದರಲ್ಲಿ ವಿವಿಧ ರಾಜ್ಯಗಳ ಜನವಿಜ್ಞಾನ ಸಂಘಟನೆಯಿಂದ ಮತ್ತು ಪ್ರತಿನಿಧಿಗಳು ಭಾಗವಹಿಸಿದ್ದರು.

ಜನವಿಜ್ಞಾನ ಚಳುವಳಿಯ ಜಾಥಾ:

ಈ ವಿಚಾರ ಸಂಕಿರಣದಲ್ಲಿ ಕೇರಳದ ಮಾಜಿ ಹಣಕಾಸು ಮಂತ್ರಿ ಥಾಮಸ್ ಐಸಾಕ್, ಇತಿಹಾಸಕಾರ ಕೆ.ಎನ್ ಗಣೇಶ್, ಅಮಿತ್ ಸೇನ್ ಗುಪ್ತ, ಡಾ: ರಘುನಂದನ್, ಸಿಟಿಎಸ್ ನಾಯರ್, ಕೇರಳ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ: ಎಕ್ಬಾಲ್, ರಾಷ್ಟ್ರೀಯ ಜೀವಶಾಸ್ತ್ರ ಸಂಸ್ಥೆಯ ನಿರ್ದೇಶಕರೂ ಮತ್ತು ದೆಹಲಿ ಸೈನ್ಸ್ ಫೋರಂ ಅಧ್ಯಕ್ಷರೂ ಆದ ಶ್ರೀ ಸತ್ಯಜಿತ್ ರಥ್ ಮತ್ತು ಇತರರು ಭಾಗವಹಿಸಿದ್ದರು. ವಿಚಾರ ಸಂಕಿರಣದ ನಂತರದ ಮೂರು ದಿನಗಳ ಕಾಲ ಕೆಎಸ್‌ಎಸ್‌ಪಿ ಸಂಘಟನೆಯ ರಾಜ್ಯ ಸಮ್ಮೇಳನ ನಡೆಯಿತು. ಅದನ್ನು ಸಾವಿರಾರು ಜನರು ಸೇರಿದ ಜಾಥಾವನ್ನು ಕೋಝಿಕ್ಕೋಡ್ ನಗರದ ಪ್ರಮುಖ ರಸ್ತೆಗಳಲ್ಲಿ ನಡೆಸುವ ಮೂಲಕ ಆರಂಭಿಸಲಾಯಿತು.

ವಿಚಾರ ಸಂಕಿರಣದಲ್ಲಿ ಪ್ರಮುಖವಾಗಿ ಕೆಎಸ್‌ಎಸ್‌ಪಿಯು ಕೇರಳ ರಾಜ್ಯದಲ್ಲಿ ಕಳೆದ 50 ವರ್ಷಗಳಲ್ಲಿ ಹಮ್ಮಿಕೊಂಡಿರುವ ಚಟುವಟಿಕೆಗಳ ಕಿರು ಸಮೀಕ್ಷೆ ಮತ್ತು ರಾಷ್ಟ್ರಮಟ್ಟದಲ್ಲಿ ಕಳೆದ 25 ವರ್ಷಗಳಿಂದ ಜನವಿಜ್ಞಾನ ಚಳುವಳಿಯು ಕ್ರಮಿಸಿದ ಹಾದಿ ಮತ್ತು ಇಂದು ಚಳುವಳಿಯ ಮುಂದಿರುವ ಸವಾಲುಗಳು, ಶಿಕ್ಷಣ, ಆರೋಗ್ಯ & ಪರಿಸರ ಹಾಗೂ ಅಭಿವೃದ್ಧಿ ಕುರಿತು ಜನವಿಜ್ಞಾನ ಚಳುವಳಿಯು ತಳೆಯಬೇಕಾದ ಧೋರಣೆಗಳ ಬಗ್ಗೆ ವಿಚಾರ ಮಂಡನೆ ಚರ್ಚೆಗಳು ನಡೆದವು. ವಿಚಾರ ಸಂಕಿರಣದಲ್ಲಿ ಮಂಡನೆಗೊಂಡ ಪ್ರಮುಖ ವಿಚಾರಗಳನ್ನು ಇಲ್ಲಿ ನೀಡಲಾಗಿದೆ.

ವಿಜ್ಞಾನದ ಕ್ರಾಂತಿಕಾರಿ ಪಾತ್ರ: ವಿಮೋಚನೆಗೊಳಿಸುವ ಸಾಮರ್ಥ್ಯ

ವಿಜ್ಞಾನವನ್ನು ಅಭಿವೃದ್ಧಿ ಪಡಿಸುತ್ತಾ ಬಂದಿರುವುದು ಕೇವಲ ಸಂಶೋಧಕರು ಮತ್ತು ವಿಜ್ಞಾನಿಗಳು ಮಾತ್ರವೇ ಅಲ್ಲ, ವಿಜ್ಞಾನಿಗಳೆನಿಸದ ಜನಸಾಮಾನ್ಯರು ಅದನ್ನು ಬೆಳೆಸಿ ಗಣನೀಯ ಕೊಡುಗೆ ನೀಡಿದ್ದಾರೆ. ಜನಸಾಮಾನ್ಯರು ಆಲೋಚಿಸುವ, ಅಭಿವೃದ್ಧಿಪಡಿಸುವ, ವೈಚಾರಿಕವಾಗಿ ಗ್ರಹಿಸಿ ಪಾಲ್ಗೊಳ್ಳುವ, ವಿಜ್ಞಾನದ ಬಳಕೆಯನ್ನು ವಿಚಾರಣೆಗೊಳಪಡಿಸುವ ಸಾಮರ್ಥ್ಯವನ್ನು ಜನವಿಜ್ಞಾನ ಚಳುವಳಿ ಎಂದು ಕರೆಯಬಹುದು.



ಭಾರತ ಸಮಾಜದಲ್ಲಿ ಪಾಳೇಗಾರಿ ಪಳೆಯುಳಿಕೆ ಸಂಬಂಧಗಳು ಇನ್ನೂ ಪ್ರಧಾನವಾಗಿದ್ದು, ಮೂಢನಂಬಿಕೆ ಮತ್ತು ಅಂಧಶ್ರದ್ಧೆ ವಿರುದ್ಧ ಚಳುವಳಿಯು ವ್ಯಾಪಕವಾದ ಆಂದೋಲನ ನಡೆಸಬೇಕು. ಜನತೆಯನ್ನು ವಿಮೋಚನೆಗೊಳಿಸುವಲ್ಲಿ ವಿಜ್ಞಾನಕ್ಕಿರುವ ಕ್ರಾಂತಿಕಾರಿ ಸಾಮರ್ಥ್ಯವನ್ನು ಜನತೆಗೆ ತಲುಪಿಸುವುದು. ಬಂಡವಾಳವು ಲಾಭಕ್ಕಾಗಿ ವಿಜ್ಞಾನವನ್ನು ಒಂದು ಉದ್ದಿಮೆಯಾಗಿ ಪರಿವರ್ತಿಸುತ್ತಿದ್ದು, ಸರ್ಕಾರಗಳು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನತೆಯ ನೋವು ಮತ್ತು ಸಂಕಟಗಳ ಹೊರೆ ಇಳಿಸಲು ಬಳಸುವಂತೆ ಜನವಿಜ್ಞಾನ ಚಳುವಳಿ ಕೆಲಸ ಮಾಡಬೇಕಿದೆ. ಇದಕ್ಕಾಗಿ ಜನತೆ ಮತ್ತು ವಿಜ್ಞಾನಿಗಳ ನಡುವೆ ಸೇತುವೆಯಾಗಿ ಚಳುವಳಿಯು ಹೆಚ್ಚೆಚ್ಚು ವೇದಿಕೆ ರೂಪಿಸಬೇಕಿದೆ. ಕೆಲವು ಸನ್ನಿವೇಶದಲ್ಲಿ ಮುನ್ಸೂಚನೆ ನೀಡಬಲ್ಲ ವಿಶಿಷ್ಟ ಸ್ವಭಾವ ವಿಜ್ಞಾನಕ್ಕಿದೆ.

ವಿಜ್ಞಾನ ಮತ್ತು ತಂತ್ರಜ್ಞಾನವು ಜನಸಾಮಾನ್ಯರ ಉದ್ಯೋಗ ಮತ್ತು ಜೀವನೋಪಾಯಗಳ ಕುರಿತಾದ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾದಾಗ ವಿಜ್ಞಾನ ಶಕ್ತಿಯುತ ಸಾಧನವಾಗಿ ಹೊರಹೊಮ್ಮುತ್ತದೆ. ಶ್ರಮದ ಉತ್ಪಾದನಾ ಸಾಮರ್ಥ್ಯವನ್ನು ದೀರ್ಘಕಾಲೀನವಾಗಿ ವಿಸ್ತರಿಸುವ ಕಾರ್ಯವನ್ನು ಜನವಿಜ್ಞಾನ ಚಳುವಳಿ ಮಾಡಬೇಕು. ವೈಜ್ಞಾನಿಕ ಜ್ಞಾನವು ಜನತೆಯ ಸಾಮಾಜಿಕ ಆಚರಣೆಯಾಗಬೇಕು. ಅದರಿಂದ ಸಮಾಜದ ಹಲವು ಪಿಡುಗುಗಳನ್ನು ನಾಶಗೊಳಿಸಲು ಸಾಧ್ಯ.

ಪರಿಸರ ವಿನಾಶ – ಬಂಡವಾಳದ ಲೂಟಿಕೋರ ಸ್ವಭಾವ:

ಪರಿಸರ ಚಳುವಳಿಯೆಂದರೆ ಅಭಿವೃದ್ಧಿಯ ವಿರುದ್ಧ ಧ್ವನಿಯೆತ್ತುವುದು ಆಮೂಲಕ ಕೇವಲ ತಕ್ಷಣದ ಪರಿಹಾರಗಳನ್ನು ಮಾತ್ರವೇ ಪ್ರಭುತ್ವ ಮತ್ತು ಬಂಡವಾಳಶಾಹಿ ಒದಗಿಸುವಂತೆ ಒತ್ತಾಯಿಸುವಂತಿದೆ. ಆದರೆ ತನ್ನ ಲೂಟಿಕೋರತನ ಸ್ವಭಾವದ ಬಂಡವಾಳವು ಪರಿಸರವನ್ನು ಲಾಭದಾಸೆಗೆ ಹೇಗೆ ನಾಶಗೊಳಿಸುತ್ತಿದೆ ಎಂಬುದನ್ನು ಜನವಿಜ್ಞಾನ ಚಳುವಳಿಯು ಎತ್ತಿತೋರಿಸಬೇಕು. ಯಾವುದೇ ಅಭಿವೃದ್ಧಿ ಕಾರ್ಯವು ಸುಸ್ಥಿರ ಪರಿಸರದ ಹಾದಿಯನ್ನು ಮತ್ತು ದೀರ್ಘಕಾಲೀನ ಪರಿಹಾರಗಳನ್ನು ರೂಪಿಸುವುದಾಗಿದೆ. ಜನವಿಜ್ಞಾನ ಚಳುವಳಿಯು ವೈಜ್ಞಾನಿಕ ತಳಹದಿಯ ಮೇಲೆ, ಜನತೆಯ ಪರವಾಗಿ ಪಕ್ಷಪಾತಿಯಾಗಿರುತ್ತದೆ. ಬಂಡವಾಳಶಾಹಿಯು ಮಾನವ ಶ್ರಮ ಮತ್ತು ಪರಿಸರ – ಇವೆರಡನ್ನೂ ಶೋಷಿಸುತ್ತದೆ. ಶ್ರಮ–ಪರವಾದ ಹೋರಾಟ ಮತ್ತು ಪರಿಸರ ಸಂರಕ್ಷಣೆಗಾಗಿ ಹೋರಾಟ – ಇವೆರಡನ್ನೂ ಬೆಸೆಯುವ ಆಧಾರದಲ್ಲಿ ಜನಪರವಾದ, ಸುಸ್ಥಿರ ಪರಿಸರ ಹೋರಾಟ ರೂಪಿಸಬೇಕು.

ಕ್ರಾಂತಿಯಲ್ಲಿ ಜನಾರೋಗ್ಯ ಚಳುವಳಿ ಪಾತ್ರ:

ಸಮಗ್ರ ಭೌತಿಕ, ಮಾನಸಿಕ ಮತ್ತು ಸಾಮಾಜಿಕವಾಗಿ ಬದುಕುವುದು ಮಾನವನ ಹಕ್ಕು. ಜನಾರೋಗ್ಯ ಚಳುವಳಿಯು ಹೇಗೆ ಪ್ರಭುತ್ವವು ಸಾರ್ವತ್ರಿಕ ಆರೋಗ್ಯದ ಗುರಿಯಿಂದ ನವ–ಉದಾರವಾದಿ ಧೋರಣೆ ಮೂಲಕ ಉಳ್ಳವರಿಗೆ ಮಾತ್ರವೇ ಆರೋಗ್ಯ ಎಂಬಲ್ಲಿಗೆ ತಲುಪಿದೆ ಎನ್ನುವುದನ್ನು ಪ್ರಚುರಪಡಿಸಬೇಕು. ಸಾರ್ವತ್ರಿಕ ಆರೋಗ್ಯ ರಕ್ಷಣೆಯ ಜಾಗವನ್ನು ಖಾಸಗಿ ಕಂಪನಿಗಳ ಆರೋಗ್ಯ ವಿಮೆ ಆಕ್ರಮಿಸಿಕೊಂಡಿದೆ. ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿಯಂತೆ, ಭಾರತದಲ್ಲೂ ಖಾಸಗಿ ಹಿಡಿತದಲ್ಲಿ ಔಷಧಿ ಮತ್ತು ಕೈಗಾರಿಕಾ ಸಂಕೀರ್ಣವು ರೂಪುಗೊಳ್ಳುತ್ತಿದೆ. ಪೇಟೆಂಟ್‌ಗಳ ಮೂಲಕ ಬಹುರಾಷ್ಟ್ರೀಯ ಕಂಪನಿಗಳು ಬೆಲೆಯೇರಿಸುವ, ಮತ್ತು ಜೀವವುಳಿಸುವ ಔಷಧಿಗಳು ಹಣವುಳ್ಳವರಿಗೆ ಮಾತ್ರವೇ ದೊರಕುವಂತೆ ಮಾಡಿರುವ ಕುಟಿಲೋಪಾಯಗಳ ವಿರುದ್ಧ ಜನತೆಯನ್ನು ಅಣಿನೆರೆಸಬೇಕು. ಭಾರತವನ್ನು 'ದಕ್ಷಿಣದ ಔಷಧಿಗಳ ಆಗರ'ವೆಂದು ಕರೆಯಲಾಗುತ್ತಿತ್ತು. ಆದರೆ, ನವ–ಉದಾರವಾದಿ ನೀತಿಗಳ ಮೂಲಕ ಬಹುರಾಷ್ಟ್ರೀಯ ಕಂಪನಿಗಳು ಭಾರತೀಯ ಔಷಧಿ ಕಂಪನಿಗಳನ್ನು ಕೊಂದು ಹಾಕುತ್ತಿವೆ ಅಥವಾ ನುಂಗಿ ಹಾಕುತ್ತಿವೆ. ಲ್ಯಾಟಿನ್ ಅಮೇರಿಕಾದಂತಹ ದೇಶಗಳಲ್ಲಿ ಆರೋಗ್ಯ ವ್ಯವಸ್ಥೆ ಕುರಿತಂತ ಮಧ್ಯಪ್ರವೇಶಗಳು ಇಡೀ ಸಮಾಜವನ್ನೇ ಪರಿವರ್ತಿಸುವ, ಪರ್ಯಾಯ ಸಮಾಜವಾದಿ ವ್ಯವಸ್ಥೆಗಾಗಿ ನವೀನ ಹೋರಾಟದ ಮಾದರಿಗಳನ್ನು ತೋರಿಸಿಕೊಟ್ಟಿವೆ. ಸರ್ಕಾರಿ ಯೋಜನೆಗಳ ಹಿಂದೆ ಬೀಳದೆ, ಎನ್‌ಜಿಓಗಳ ಬಾಲಂಗೋಚಿಯಾಗದೇ ಸ್ವತಂತ್ರ ಹೋರಾಟಗಳನ್ನು, ಅವಶ್ಯವಿರುವೆಡೆ ಸಮಾನ ಮನಸ್ಕ ಸಂಘಟನೆಗಳೊಂದಿಗೆ, ರೂಪಿಸಬೇಕಿದೆ.

ಅಭಿವೃದ್ಧಿ ಮತ್ತು ನೈಸರ್ಗಿಕ ಸಂಪನ್ಮೂಲಗಳ ಬಳಕೆಯಲ್ಲಿ ಮಧ್ಯಪ್ರವೇಶ:

ನವ–ಉದಾರವಾದಿ ನೀತಿಗಳು ಅಭಿವೃದ್ಧಿಯ ಹೆಸರಿನಲ್ಲಿ ಜನತೆಯ ನೈಸರ್ಗಿಕ ಸಂಪನ್ಮೂಲಗಳನ್ನು ಖಾಸಗಿ ಮಾಲೀಕತ್ವಕ್ಕೆ ವರ್ಗಾಯಿಸಲಾಗುತ್ತಿದೆ. ಭೂಮಿ, ಗಾಳಿ, ನೆಲ, ಜಲ, ಖನಿಜಗಳು, ಅರಣ್ಯ, ಹವಾಮಾನ ಬದಲಾವಣೆ, ಇತ್ಯಾದಿಯಂತಹ ನೈಸರ್ಗಿಕ ಸಂಪನ್ಮೂಲಗಳ ದುರ್ಬಳಕೆಯು ಅಂತರಾಷ್ಟ್ರೀಯ ಪ್ರಕ್ರಿಯೆಯಾಗಿದೆ. ಅಪಾಯಕಾರಿ ತ್ಯಾಜ್ಯ, ಮಾಲಿನ್ಯಗಳನ್ನು ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ತಂದು ಸುರಿಯಲಾಗುತ್ತಿದೆ. ಇಂಥಹ ಕಡೆ ಜನ ವಿಜ್ಞಾನ ಚಳುವಳಿಯ ಪರಿಣಾಮಕಾರಿಯಾಗಿ ಮಧ್ಯಪ್ರವೇಶಿಸಬೇಕಿದೆ.

ಪ್ರಭುತ್ವ ಮತ್ತು ಶಿಕ್ಷಣ ಹಕ್ಕು:

ವ್ಯವಸ್ಥೆಯನ್ನು ಯಥಾಸ್ಥಿತಿ ಮುಂದುವರಿಸಲು ಅನುವಾಗುವಂತೆ ಇವತ್ತಿನ ಶಿಕ್ಷಣ, ಪಾಠದ ಕೊಠಡಿಗಳು ಮತ್ತು ಶೈಕ್ಷಣಿಕ ಪರಿಸರವನ್ನು ರೂಪಿಸಲಾಗಿದೆ. ಹಣ ಮತ್ತು ಜಾತಿ ಆಧಾರದ ಮೇಲೆ ಶಿಕ್ಷಣ ವ್ಯವಸ್ಥೆ

ಪುಟ 15 ಕ್ಕೆ

ನಾಸಿಕ್: ಹೋರಾಟದ ಪಥಕ್ಕೆ ಸಾಥಿಯಾದ ಸಾಮೂಹಿಕ ಮದುವೆ

–ಸಿಮ್ಮಿಸಿ

ದಿನೇ ದಿನೇ ಬದುಕು ಬಲು ದುಬಾರಿಯಾಗುತ್ತಾ ನಡೆದಿದೆ. ಬಡವರು, ಶೋಷಿತ ಜನರು ಬದುಕಿನ ಬಂಡಿ ಎಳೆಯುವುದೇ ಕಷ್ಟವಾಗುತ್ತಿದೆ. ಇಂತಹ ಹೊತ್ತಲ್ಲಿ ಸರಳ ಸಾಮೂಹಿಕ ವಿವಾಹಗಳು ಅವರ ಬೆನ್ನ ಮೇಗಲ ಭಾರವನ್ನು ಎಷ್ಟೋ ಇಳಿಸಬಹುದು. ಜನಚಳುವಳಿಗಳು ಈ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಬೇಕು ಎಂದರು ಇಲ್ಲಿ ಬೃಂದಾ ಕಾರಾಟ್.

ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಸುರ್ಗಣ ಪ್ರದೇಶದಲ್ಲಿ ನಡೆದ ಇತಿಹಾಸ ಪ್ರಸಿದ್ಧ ಸಾಮೂಹಿಕ ವಿವಾಹ ಕಾರ್ಯಕ್ರಮದ ಬಗ್ಗೆ ಒಂದಷ್ಟು ವಿಚಾರವನ್ನು ಹೇಳಲೇ ಬೇಕು. ಜನಪರ ಚಳವಳಿಯಲ್ಲಿ ತೊಡಗಿಸಿಕೊಂಡ ಎಲ್ಲ ನಾಯಕರು, ಕಾರ್ಯಕರ್ತರು ಮತ್ತು ಹಿತೈಷಿಗಳಿಗೆ ಇದೊಂದು ಸ್ಫೂರ್ತಿದಾಯಕ ವಿಷಯ.

ಸುರ್ಗಣ ಪ್ರದೇಶದ ಆಲಂಗುಣ ಗ್ರಾಮದಲ್ಲಿ ಈ ಬಾರಿ ಆದಿವಾಸಿ ಕುಟುಂಬಗಳ 825 ಜೋಡಿಗಳು ವೈವಾಹಿಕ ಜೀವನಕ್ಕೆ ಕಾಲಿಟ್ಟವು. ನಾಸಿಕ್ ಜಿಲ್ಲೆಯಲ್ಲಿ ಆದಿವಾಸಿ ಮಕ್ಕಳಿಗೆ ಹಲವಾರು ಶಿಕ್ಷಣ ಸಂಸ್ಥೆಗಳು, ಹಾಸ್ಟೆಲ್‌ಗಳನ್ನು ನಡೆಸಿಕೊಂಡು ಬರುತ್ತಿರುವ ಸಿಪಿಐ(ಎಂ) ನೇತೃತ್ವದ ಆದರ್ಶ್ ಸಮತಾ ಶಿಕ್ಷಣ್ ಪ್ರಸಾರಕ್ ಮಂಡಲ್ ಹಾಗೂ ಅಖಿಲ ಭಾರತ ಕಿಸಾನ್ ಸಭಾದ ಜಂಟಿ ಆಯೋಜನೆಯಲ್ಲಿ ಈ ಸಮಾರಂಭ ನಡೆಯಿತು.

ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯೆ ಬೃಂದಾ ಕಾರಟ್ ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದರು. ಕಿಸಾನ್ ಸಭಾದ ರಾಜ್ಯ ಕಾರ್ಯಾಧ್ಯಕ್ಷ ರಾಜಾರಾಂ ಓಜಾರೆ ಮತ್ತು ಜನವಾದಿ ಮಹಿಳಾ ಸಂಘಟನೆಯ ಮರಿಯಂ ಧವಳೆ ಅವರಿಗೆ ಸಮಾರಂಭದ ವಿಶೇಷ ಗೌರವ ನೀಡಲಾಯಿತು. ಇವರಿಬ್ಬರೂ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು.

ಸುದೀರ್ಘ ಇತಿಹಾಸ

ಇದಿಷ್ಟೇ ಆಗಿದ್ದರೆ ದೊಡ್ಡ ವಿಷಯವಾಗಿರಲಿಲ್ಲ. ಇಲ್ಲಿ ನಡೆಯುವ ಸಾಮೂಹಿಕ ವಿವಾಹಕ್ಕೆ ಒಂದು ದೊಡ್ಡ ಇತಿಹಾಸವಿದೆ. ಈ ಮಹಾ ಕಾರ್ಯಕ್ರಮಕ್ಕೆ ಆರಂಭದ ಅಡಿಗಲ್ಲು ಇಟ್ಟದ್ದು 32 ವರ್ಷಗಳ ಹಿಂದೆ. 1981ರಲ್ಲಿ. ಈ ಕಾರ್ಯಕ್ಕೆ ನೇತೃತ್ವ ನೀಡಿದವರು ಧೀಮಂತ ನಾಯಕ ನರೇಂದ್ರ ಮಾಲುಸಾರೆ. ಸುರ್ಗಣ ಪ್ರದೇಶದ ಆದಿವಾಸಿ ನಾಯಕರಾದ ರಾಮ ಮಹಾಳೆ, ಕೆ.ಕೆ.ಪವಾರ್, ಜೆ.ಪಿ. ಗವಿತ್ ಮತ್ತು ಹರಿ ಮಹಾಳೆ ಈ ಕಾರ್ಯಕ್ಕೆ ಆಗ ಸಾಥ್ ನೀಡಿದರು. ಅಂದ ಹಾಗೆ, ಸುರ್ಗಣ ಪ್ರದೇಶದ ಶೇಕಡಾ 98 ಜನಸಂಖ್ಯೆ ಆದಿವಾಸಿ ಸಮುದಾಯಕ್ಕೆ ಸೇರಿದೆ.

32 ವರ್ಷಗಳ ಹಿಂದೆ, ಕಿಸಾನ್ ಸಭಾ ನಡೆಸಿದ ಮೊದಲ ಸಾಮೂಹಿಕ ಮದುವೆ ಕಾರ್ಯಕ್ರಮದಲ್ಲಿ 32 ಆದಿವಾಸಿ ಜೋಡಿಗಳು ದಾಂಪತ್ಯದ ಶಪಥ ಸ್ವೀಕರಿಸಿದ್ದರು. ಐಎಎಸ್ ಅಧಿಕಾರಿಯಾಗಿ ಸಾಕಷ್ಟು ಹೆಸರು ಮಾಡಿದ್ದ ಆದಿವಾಸಿ ಅಭಿವೃದ್ಧಿ ಆಯುಕ್ತ ಸದಾಶಿವರಾವ್ ಟಿನೇಕರ್ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಒಂದು ಸಾವಿರಕ್ಕೂ ಅಧಿಕ ಮಂದಿ ಈ ಕಾರ್ಯಕ್ಕೆ ಪ್ರತ್ಯಕ್ಷ ಸಾಕ್ಷಿಯಾದರು. ಕಾರ್ಯಕ್ರಮದ ಭೋಜನ ಹಾಗೂ ಮಂಟಪದ ವ್ಯವಸ್ಥೆಯನ್ನು ಕಿಸಾನ್ ಸಭಾ ಕಾರ್ಯಕರ್ತರು ಚಂದಾ ಎತ್ತುವ ಮೂಲಕ ಮಾಡಿದ್ದರು. ಹೀಗೆ ಸಂಗ್ರಹಿಸಿದ ದೇಣಿಗೆಯ ಹೆಚ್ಚುವರಿ ಹಣವನ್ನು ದಂಪತಿಗಳಿಗೆಪಾತ್ರೆಹಾಗೂ ಇತರ ಅಗತ್ಯ ಸಾಮಾನುಗಳನ್ನು ಉಡುಗೊರೆಯಾಗಿ ನೀಡಲು ಬಳಸಲಾಯಿತು.



ಬೃಂದಾ ಕಾರಾಟ್ ಮಾತನಾಡುತ್ತಿರುವುದು

ಮೊದಲ ಸಾಮೂಹಿಕ ವಿವಾಹ ನಾಡಿನ ಮಟ್ಟಿಗೆ ಸಣ್ಣ ಕಾರ್ಯಕ್ರಮವಾಗಿದ್ದರೂ ಅದರ ಯಶಸ್ಸು ಮತ್ತು ಪರಿಣಾಮ ದೊಡ್ಡ ಮಟ್ಟದ್ದಾಗಿತ್ತು. ಇದರ ಯಶಸ್ಸಿನಿಂದ ಉತ್ತೇಜಿತರಾಗಿ ಎರಡನೇ ವರ್ಷಕ್ಕೂ ಅದನ್ನು ವಿಸ್ತರಿಸಲಾಯಿತು. ಈ ಬಾರಿ 351 ಜೋಡಿಗಳು ವೈವಾಹಿಕ ಜೀವನ ಪ್ರವೇಶಿಸಿದವು. ಜ್ಞಾನಪೀಠ ಸಾಹಿತಿ ಕುಸುಮಾಗ್ರಜ, ಸಿಪಿಐ(ಎಂ)ನ ಕೇಂದ್ರ ಸಮಿತಿ ಸದಸ್ಯೆ ಅಹಿಲ್ಯಾ ರಂಗ್ಣೇಕರ್ ಮತ್ತು ಕಿಸಾನ್ ಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿ ನರೇಂದ್ರ ಮಲುಸಾರೆ ಈ ಕಾರ್ಯಕ್ರಮದ ಅತಿಥಿ ಗಣ್ಯರಾಗಿದ್ದರು.



ಆ ಬಳಿಕ ಪ್ರತಿವರ್ಷವೂ ಸಾಮೂಹಿಕ ಮದುವೆಗಳು ನಡೆದವು, ಉತ್ತಮ ಜನಸ್ಪಂದನೆಯೂ ದೊರೆಯಿತು. 1995ರಲ್ಲಿ ನಡೆದ ಐತಿಹಾಸಿಕ ಸಮಾರಂಭದಲ್ಲಿ 1276 ದಂಪತಿಗಳು ಹಸೆಮಣೆ ಏರಿದರು.

ಮಾದರಿಯಾದ ನಾಯಕರು

2002ರ ಕಾರ್ಯಕ್ರಮದಲ್ಲಿ ಆಗಿನ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪ್ರಭಾಕರ್ ಸಂಜ್‌ಗಿರಿ ಮತ್ತು ಸುಮನ್ ಸಂಜ್‌ಗಿರಿ ಮುಖ್ಯ ಅತಿಥಿಗಳಾಗಿದ್ದರು. ಸಾಮೂಹಿಕ ವಿವಾಹಕ್ಕೆ 32 ವರ್ಷಗಳ ಹಿಂದೆ ಮುನ್ನುಡಿ ಬರೆದ ಸಿಪಿಐ(ಎಂ) ನಾಯಕ ಜೆ.ಪಿ. ಗವಿತ್ ಅವರ ಮಗ ಮತ್ತು ಮಗಳೂ ತಮ್ಮ ಬಾಳ ಸಂಗಾತಿಯನ್ನು ವರಿಸುವ ಮೂಲಕ ಈ ಕಾರ್ಯಕ್ರಮದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಇದು ಅಂದಿನ ಕಾರ್ಯಕ್ರಮದ ಕೇಂದ್ರ ವಿಷಯವಾಗಿತ್ತು. ಅಷ್ಟೇ ಅಲ್ಲ, ಸಿಪಿಐ(ಎಂ), ಕಿಸಾನ್ ಸಭಾದ ಹಲವು ನಾಯಕರ ಮಕ್ಕಳೂ ಸಾಮೂಹಿಕ ವಿವಾಹದಲ್ಲಿ ಮದುವೆಯಾದರು. ಸಿಪಿಐ(ಎಂ) ನಾಯಕರಾದ ಹೇಮಂತ್ ವಘೇರೆ, ಸಾವಲಿರಾಮ ಪವಾರ್, ರಾಂಜಿ ಗವಿತ್, ಆನಂದ್ ಚವಾಣ್ ಕೂಡ ಹೀಗೆ ಮದುವೆಯಾಗಿ ಸಮಾಜಕ್ಕೆ ಮಾದರಿಯಾದರು.

2005ರಲ್ಲಿ 501 ಆದಿವಾಸಿ ದಂಪತಿಗಳು ಸಾಮೂಹಿಕ ವಿವಾಹದಲ್ಲಿ ದಾಂಪತ್ಯ ಬಂಧನಕ್ಕೊಳಗಾದರು. ಆ ಕಾರ್ಯಕ್ರಮದಲ್ಲಿ ಆಗಿನ ಮಹಾರಾಷ್ಟ್ರ ಮುಖ್ಯಮಂತ್ರಿ ವಿಲಾಸ್‌ರಾವ್ ದೇಶ್‌ಮುಖ್ ಮತ್ತು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಡಾ. ಅಶೋಕ್ ಧವಳೆ ಮುಖ್ಯ ಅತಿಥಿಗಳಾಗಿದ್ದರು.

ಆ ಸಂದರ್ಭದಲ್ಲಿ ಆ ಕ್ಷೇತ್ರವನ ಪ್ರತಿನಿಧಿಸುತ್ತಿದ್ದವರು ಸಿಪಿಐ(ಎಂ) ಶಾಸ ಜೆ.ಪಿ. ಗವಿತ್. ಮುಂದಿನ ಅಧಿವೇಶನದ ಸಾಮೂಹಿಕ ವಿವಾಹ ಬಂಧನಕ್ಕೆ ಒಳಗಾಗು ಆದಿವಾಸಿ ದಂಪತಿಗೆ ಆರ್ಥಿಕ ನೆ ನೀಡಬೇಕೆಂದು ಸದನದಲ್ಲಿ ಗವಿತ್ ಒತ್ತಾ ಮಾಡಿದರು. ಕಾರ್ಯಕ್ರಮದಲ್ಲಿ ಭಾಗವಹಿ ಎಲ್ಲವನ್ನೂ ಪ್ರತ್ಯಕ್ಷವಾಗಿ ವೀಕ್ಷಿಸಿದ್ದ ಸಿಎ ವಿಲಾಸ್‌ರಾವ್ ದೇಶಮುಖ್ ಈ ಬೇಡಿ ಕೆಗೆ ಸ್ಪಂದಿಸಿ ಕನ್ಯಾದಾನ ಯೋಜನೆಯ 10 ಸಾವಿರ ರೂಪಾಯಿ ಯೋಜನೆಯನು ಪ್ರಕಟಿಸಿದರು.

ಸುರ್ಗಣದಲ್ಲಿ ಎಡ ಚಳವಳಿ

ಆದಿವಾಸಿಗಳ ಬಾಹುಳ್ಯವಿರು ಸುರ್ಗಣದಲ್ಲಿ ಸಿಪಿಐ(ಎಂ) ಮತ್ತ ಕಿಸಾನ್ ಸಭಾ ಹಲವು ಕ್ಷೇತ್ರಗಳಲ್ಲಿ ಮುಂಚೂಣಿಯ ಪಾತ್ರ ವಹಿಸಿವೆ. ಪಡಿತರ ವ್ಯವಸ್ಥೆಯ ಯೋಜನೆಯ ಜಾರಿ ಇರಲಿ ವೃದ್ಧಾಪ್ಯ ವೇತನದ ವಿಚಾರವಿರಲಿ ಆದಿವಾಸಿಗಳ ಹಕ್ಕುಗಳ ಇರಲಿ ಪಕ್ಷದ ಹಾಗೂ ರೈತ ಸಂಘದ ಕಾರ್ಯಕರ್ತರು ಸದಾ ಜನರ ಪರವಾಗಿ ನಿಂತು ಹೋರಾಟ ನಡೆಸುತ್ತಿದ್ದಾರೆ ಬದುಕಿನ ಎಲ್ಲ ವಿಚಾರಗಳಲ್ಲೂ ಪ್ರತಿ ಮನೆಯ ಸಂಪರ್ಕದಲ್ಲಿರುತ್ತಾರೆ.

ಇಂತಹ ಕಾರ್ಯಗಳಿಂದಲೇ 2012ರಲ್ಲಿ ಸುರ್ಗಣ ಪ್ರದೇಶದ ಮೂರು ಜಿಲ್ಲಾ ಪಂಚಾಯತ್ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಜಯಭೇರಿ ಬಾರಿಸಿತ್ತು. ಅಷ್ಟೇ ಅಲ್ಲದೆ ಆರು ಪಂಚಾಯತ್ ಸಮಿತಿ ಸ್ಥಾನಗಳ ಪೈಕಿ ಐದರಲ್ಲಿ ಮತ್ತು ಗ್ರಾಮ ಪಂಚಾಯತ್‌ನ ಹಲವು ಸ್ಥಾನಗಳಲ್ಲಿ ಕೆಂಬಾವುಟ ಬಾನೆತ್ತರಕ್ಕೆ ಹಾರಿದೆ.

ಕಳೆದ 25 ವರ್ಷಗಳಿಂದ ನಿರಂತರವಾಗಿ ಸುರ್ಗಣ ಪಂಚಾಯತ್ ಸಮಿತಿಗಳಲ್ಲಿ ಸಿಪಿಐ(ಎಂ) ಗೆಲುವು ಸಾಧಿಸಿಕೊಂಡು ಬರುತ್ತಿದೆ. ಥಾಣೆ ಜಿಲ್ಲೆಯ ತಲಸಾರಿ ಪಂಚಾಯತ್‌ನ 50 ವರ್ಷಗಳ ನಿರಂತರ ಗೆಲುವಿನ ಸಾಧನೆ ಹೊರತುಪಡಿಸಿದರೆ ಇದೊಂದು ದಾಖಲೆಯೇ ಸರಿ.

ಇದೇ ಕ್ಷೇತ್ರದಲ್ಲಿ ಪಕ್ಷ ನಿರಂತರ ಆರು ಚುನಾವಣೆಗಳಲ್ಲಿ ಜಯಭೇರಿ ಬಾರಿಸಿತ್ತು. ಆದರೆ, 2009ರಲ್ಲಿ ಕ್ಷೇತ್ರ ಪುನರ್‌ವಿಂಗಡಣೆಯಿಂದಾಗಿ ಕ್ಷೇತ್ರ ಸಿಪಿಐ(ಎಂ)ನ ಕೈತಪ್ಪಿತ್ತು. ಕಳೆದ ಚುನಾವಣೆಯಲ್ಲಿ ಸಿಪಿಐ(ಎಂ) ವಿರುದ್ಧ ಜಾತ್ಯತೀತ ಮತ್ತು ಕೋಮುವಾದಿ ಪಕ್ಷಗಳು ಕೈಜೋಡಿಸಿದ್ದೂ ಇದಕ್ಕೆ ಇನ್ನೊಂದು ಕಾರಣ.

2013ರಲ್ಲಿ ಕಿಸಾನ್ ಸಭಾ ಮತ್ತೊಂದು ಸಾಧನೆಯನ್ನೂ ಮಾಡಿದೆ. ಅದು ಸದಸ್ಯತ್ವದಲ್ಲಿ. ನಾಸಿಕ್ ಜಿಲ್ಲೆಯ ಒಟ್ಟು 75 ಸಾವಿರ ಸದಸ್ಯತ್ವದ ಪೈಕಿ ಸುರ್ಗಣವೊಂದರಲ್ಲೇ 35 ಸಾವಿರ ಸದಸ್ಯತ್ವ ದಾಖಲಾಗಿದೆ. ಇದು ಮಹಾರಾಷ್ಟ್ರದ ಯಾವುದೇ ಪ್ರದೇಶವೊಂದರಲ್ಲಿ ನೋಂದಾವಣೆಯಾದ ದಾಖಲೆಯ ಸದಸ್ಯತ್ವ.


ಜನಶಕ್ತಿ
ಕನ್ನಡ ವಾರಪತ್ರಿಕೆ

ಜಿಡಿಪಿ ದರ ಕುಸಿದರೂ ದಾರಿ ಬದಲಿಸಲೊಲ್ಲದ ಯುಪಿಎ–2 ಸರಕಾರ

ಕಳೆದ ವಾರ 2012–13 ಹಣಕಾಸು ವರ್ಷದ ಕೊನೆಯ ಮೂರು ತಿಂಗಳ ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ದ ಅಂಕಿ–ಅಂಶಗಳು ಪ್ರಕಟವಾಗಿವೆ. ಇದರ ಪ್ರಕಾರ ಜನವರಿ–ಮಾರ್ಚ್2013 ರ ಅವಧಿಯಲ್ಲಿ ಜಿಡಿಪಿ ಬೆಳವಣಿಗೆ ದರ 4.8ಶೇ. ಕ್ಕೆ ಇಳಿದಿದೆ. ಇದರೊಂದಿಗೆ 2012–13 ರ ಒಟ್ಟಾರೆ ಜಿಡಿಪಿ ಬೆಳವಣಿಗೆ ದರ 5ಶೇ.ಕ್ಕೇ ನಿಂತು ಹೋದಂತಾಗಿದೆ. ಇದು ಈ ದಶಕದಲ್ಲಿಯೇ ಅತಿ ಕಡಿಮೆ ಬೆಳವಣಿಗೆ ದರ. ಸರಕಾರ 6ಶೇ.ವಾದರೂ ಇರುತ್ತದೆ ಎಂದು ಹೇಳಿಕೊಳ್ಳುತ್ತಿತ್ತು. ಅದೀಗ ಸಂಪೂರ್ಣ ಹುಸಿಯಾಗಿದೆ. ಕಳೆದ ಹಣಕಾಸು ವರ್ಷದಲ್ಲಿ ಇದು 6.5ಶೇ. ಇತ್ತು. ಮುಖ್ಯವಾಗಿ ಕೃಷಿ, ಕೈಗಾರಿಕಾ ಉತ್ಪಾದನೆ ಮತ್ತು ಗಣಿಗಾರಿಕೆಯಲ್ಲಿ ಮಂದಗತಿಯಿಂದಾಗಿ ಜಿಡಿಪಿ ದರ ಇಳಿಮುಖಗೊಂಡಿದೆ.

ಹಿಂದಿನ ಹಣಕಾಸು ವರ್ಷದ, ಅಂದರೆ 2011–12ರ ಆರಂಭದ ಮೂರು ತಿಂಗಳ(ಏಪ್ರಿಲ್–ಜೂನ್ 2011) ಅವಧಿಯಲ್ಲಿ 5.4ಶೇ. ಇದ್ದ ಕೃಷಿ ಬೆಳವಣಿಗೆ ದರ ಜನವರಿ–ಮಾರ್ಚ್ 2013 ರ ಅವಧಿಯಲ್ಲಿ 1.4 ಶೇ. ಕ್ಕೆ ಇಳಿದಿದೆ; ಕೈಗಾರಿಕಾ ಉತ್ಪಾದನಾ ರಂಗದಲ್ಲಿ ಈ ಅವಧಿಯಲ್ಲಿ 7.4ಶೇ.ದಿಂದ 2.6ಶೇ.ಕ್ಕೆ ಇಳಿದಿದೆ. ಗಣಿಗಾರಿಕೆಯಲ್ಲಂತೂ ಕಳೆದ ಏಪ್ರಿಲ್–ಜೂನ್ 2011 ರಲ್ಲಿ –0.4ಶೇ.(ಅಂದರೆ ಇಳಿಕೆ) ಇದ್ದ ದರ ಇನ್ನಷ್ಟು ಇಳಿದು –3ಶೇ.ಕ್ಕೆ ಇಳಿದಿದೆ.

ಕಳೆದ ವರ್ಷ ಜಿಡಿಪಿ ದರವನ್ನು 5.5ಶೇ.ಕ್ಕೆ ಎತ್ತಿದ್ದು ಸೇವಾ ವಲಯದಲ್ಲಿನ 11.7ಶೇ. ಬೆಳವಣಿಗೆ. ಇದು ಕೂಡ 2012–13ರಲ್ಲಿ 8.6ಶೇ. ಕ್ಕೆ ಇಳಿದಿದೆ. ನಿಜವಾಗಿ ಜಿಡಿಪಿ ಬೆಳವಣಿಗೆ ದರ ಲೆಕ್ಕ ಹಾಕುವಾಗ ಸೇವಾವಲಯದ ಬೆಳವಣಿಗೆ ದರವನ್ನು ಅದರಲ್ಲಿ ಸೇರಿಸುವುದು ಆರ್ಥಿಕ ಬೆಳವಣಿಗೆಯ ತಪ್ಪು ಚಿತ್ರ ಕೊಡುತ್ತದೆ ಎಂಬುದು ಕೆಲವು ಆರ್ಥಿಕ ತಜ್ಞರ ಅಭಿಪ್ರಾಯ ಏಕೆಂದರೆ ಈ ವಲಯದಲ್ಲಿನ ಉತ್ಪಾದನೆಯ ಪ್ರಮಾಣವನ್ನು ಉಳಿದ ವಲಯಗಳಂತೆ ಕರಾರುವಾಕ್ಕಾಗಿ ಲೆಕ್ಕ ಹಾಕಲು ಸಾಧ್ಯವಿಲ್ಲ. 'ಸೇವೆ'ಗಳಲ್ಲಿ ಬಹಳಷ್ಟು ಅನುತ್ಪಾದಕವಾದವುಗಳೂ ಸೇರಿರಬಹುದು. ಒಬ್ಬ ಬಳಕೆದಾರನಿಗೆ 'ತೃಪ್ತಿ' ಉಂಟುಮಾಡುವಂತದ್ದು 'ಸೇವೆ' ಎಂದು ನಿರೂಪಿಸಲ್ಪಡುತ್ತದೆ. ಈ ನಿರೂಪಣೆಯ ಪ್ರಕಾರ ಒಬ್ಬ ಭಿಕ್ಷುಕನಿಗೆ ಭಿಕ್ಷೆ ನೀಡಿದಾಗ ಹಾಗೆ ನೀಡಿದವನಿಗೆ ಭಿಕ್ಷೆ ನೀಡಿದ 'ತೃಪ್ತಿ' ಸಿಗುವುದರಿಂದ ಭಿಕ್ಷುಕ ಸೇವೆ ಒದಗಿಸಿದವನು, ಭಿಕ್ಷೆ ನೀಡಿದವನು ಸೇವೆ ಪಡೆದವನು ಆಗಬೇಕು, ಭಿಕ್ಷೆಯ ಹಣವೂ ಉತ್ಪನ್ನದ ಲೆಕ್ಕಕ್ಕೆ ಜಮಾ ಆಗಬೇಕು, ಅದು ಹೊಸದೇನನ್ನೂ ನಿರ್ಮಿಸದಿದ್ದರೂ! ಇಂತಹ ಹಲವು 'ಸೇವೆ'ಗಳು ವಾಸ್ತವವಾಗಿ 'ಸೇವೆ'ಯ ಲೆಕ್ಕಕ್ಕೆ ಬರುತ್ತವೆ. ಆದ್ದರಿಂದಲೇ ಹಿಂದಿನ ಸೋವಿಯೆತ್ ಒಕ್ಕೂಟ ಮತ್ತು ಇತರ ಸಮಾಜವಾದಿ ದೇಶಗಳು ತಮ್ಮ ಜಿಡಿಪಿ ಲೆಕ್ಕ ಹಾಕುವಾಗ ಸೇವಾ ವಲಯವನ್ನು ಲೆಕ್ಕಕ್ಕೆ ತಗೊಳ್ಳುತ್ತಿರಲಿಲ್ಲ. ಸೇವಾವಲಯವನ್ನು ಬಿಟ್ಟು ಲೆಕ್ಕ ಹಾಕಿದರೆ ನಮ್ಮ ಆಳರಸರು ಬೆನ್ನು ತಟ್ಟಿಕೊಳ್ಳುವ ಜಿಡಿಪಿ ಬೆಳವಣಿಗೆ ದರ ಇನ್ನಷ್ಟು ಕಡಿಮೆಯಾಗುತ್ತದೆ, ದೇಶ ಸಾಧಿಸಿದ 'ಬೆಳವಣಿಗೆ'ಯ ನಿಜಹೂರಣವನ್ನು ತೋರಿಸುತ್ತದೆ.




ಅದೇನೇ ಇರಲಿ, ಈಗ ಆ ಬೆಳವಣಿಗೆ ದರವೂ ಗಮನಾರ್ಹವಾಗಿ ಇಳಿದಿದೆ. ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಶೇರು ಸೂಚ್ಯಂಕ ದರ ಸೆನ್ಸೆಕ್ಸ್ 297 ಪಾಯಿಂಟುಗಳ ತೀವ್ರ ಕುಸಿತ ಕಂಡಿದೆ. ಕೆಲವು ದಿನಗಳ ಹಿಂದೆ, ದೇಶಗಳ ಆರ್ಥಿಕ ಯೋಗ್ಯತೆಯನ್ನು ಅಳೆಯುತ್ತೇವೆ ಎಂದು ಹೇಳಿಕೊಳ್ಳುವ ಮೂರು ರೇಟಿಂಗ್ ಸಂಸ್ಥೆಗಳಲ್ಲಿ ಒಂದಾದ ಸ್ಟಾಂಡರ್ಡ್ ಅಂಡ್ ಪೂರ್ (ಎಸ್ ಅಂಡ್ ಪಿ) ಭಾರತದ ಯೋಗ್ಯತೆಯನ್ನು ಬಿಬಿಬಿ(ಅಂದರೆ ಅತಿ ಕಡಿಮೆ) ಮಟ್ಟದಲ್ಲಿ ಇರಿಸಿ ಮುಂದಿನ 12 ತಿಂಗಳಲ್ಲಿ ಆರ್ಥಿಕ ಬೆಳವಣಿಗೆಯಲ್ಲಿ 'ಸುಧಾರಣೆ' ತೋರಿಸದಿದ್ದರೆ ನಮ್ಮ ದೇಶದ ಆರ್ಥಿಕ ಸಂಪೂರ್ಣ ಹದಗೆಟ್ಟಿದೆ ಎಂದು ಸಾರುವುದಾಗಿ ಬೆದರಿಸಿದೆ. ತಮಾಷೆಯೆಂದರೆ ಈ ರೇಟಿಂಗ್ ಸಂಸ್ಥೆಯ ರೇಟಿಂಗ್‌ಗಳ ಬಗ್ಗೆಯೇ ಅಪಾರ ಸಂದೇಹಗಳಿವೆ. ಇತ್ತೀಚೆಗಷ್ಟೇ ಸ್ವತಃ ಅಮೆರಿಕನ್ ಸರಕಾರ ಜಾಗತಿಕ ಆರ್ಥಿಕ ಕುಸಿತ ತಂದ ಸಬ್‌ಪ್ರೈಮ್(ಅಪಾತ್ರ) ಮನೆಸಾಲಗಳ ವಿಷಯದಲ್ಲಿ ತಪ್ಪು ರೇಟಿಂಗ್ ತೋರಿಸಿ ಹೂಡಿಕೆದಾರರಿಗೆ ದೊಡ್ಡ ಮೋಸ ಮಾಡಿದೆ ಎಂದು ಈ ಸಂಸ್ಥೆಯ ಮೇಲೆ 5 ಬಿಲಿಯ ಡಾಲರುಗಳ ದಂಡ ವಿಧಿಸಿದೆಯಂತೆ!

ಯುಪಿಎ–2 ಸರಕಾರ ಈ ಸಂಸ್ಥೆಯ ರೇಟಿಂಗ್‌ಗೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ ಎಂದೇನೋ ಹೇಳಿದೆ. ಅದರೆ ಅದು ಈ ರೇಟಿಂಗ್ ಸಂಸ್ಥೆಗೆ ಅಂತಹ ಬೆದರಿಕೆ ಹಾಕುವ ಯೋಗ್ಯತೆಯಿಲ್ಲ ಎಂಬ ಕಾರಣಕ್ಕೆ ಅಲ್ಲ, ಅದು ನಿರೀಕ್ಷಿಸುವ 'ಸುಧಾರಣೆ'ಗಳನ್ನು ತಂದು ಜಾಗತಿಕ ಹಣಕಾಸು ಬಂಡವಾಳಿಗರ 'ವಿಶ್ವಾಸ' ಗಳಿಸಬಹುದು ಎಂಬ 'ನಂಬಿಕೆ'ಯಿಂದ! ತಾವು ಹಿಡಿದಿರುವ ನವ–ಉದಾರವಾದಿ ದಾರಿಯ ದಿವಾಳಿಕೋರತನ ಹೆಚ್ಚೆಚ್ಚು ಸ್ಪಷ್ಟವಾಗಿ ಪ್ರಕಟವಾಗುತ್ತಿದ್ದರೂ ಪರವಾಗಿಲ್ಲ! ತಾವೇ ಮಾನದಂಡವಾಗಿಟ್ಟುಕೊಂಡ ಜಿಡಿಪಿ ದರ, ಸೆನ್ಸೆಕ್ಸ್‌ಗಳೂ ಅದನ್ನು ತೋರಿಸಿ ಕೊಡುತ್ತಿದ್ದರೂ ಪರವಾಗಿಲ್ಲ!

ಈ ರೀತಿ ವಿಶ್ವಾಸ ಗಳಿಸುವ ಹೆಸರಿನಲ್ಲಿ ಯುಪಿಎ–2 ಸರಕಾರ ಮತ್ತೆ ಜೂಜುಕೋರ ಆರ್ಥಿಕ 'ಗುಳ್ಳೆ' ಸೃಷ್ಟಿಸುವ ದಾರಿಯನ್ನೇ ಹಿಡಿಯುತ್ತಿದೆ, ಅದು ಸಫಲವಾಗುತ್ತಿಲ್ಲ, ಸಫಲವಾಗಲು ಸಾಧ್ಯವೂ ಇಲ್ಲ ಎನ್ನುತ್ತಾರೆ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್. ಹಣಕಾಸು ಬಂಡವಾಳದ ಬಾಲ ಹಿಡಿಯುವ ನವ–ಉದಾರವಾದಿ ವ್ಯವಸ್ಥೆ ಹೂಡಿಕೆದಾರರನ್ನು ಆಕರ್ಷಿಸುವಾಗ 'ಉದ್ಯಮಿಗಳು' ಮತ್ತು 'ಜೂಜುಕೋರರ' ನಡುವೆ ವ್ಯತ್ಯಾಸ ಕಾಣುವುದಿಲ್ಲ. ಆದ್ದರಿಂದ ಇಂತಹ ಕ್ರಮಗಳು ಜೂಜಾಟದ 'ಗುಳ್ಳೆ'ಗಳನ್ನು ಸೃಷ್ಟಿಸುತ್ತವೆ; ಆ ಗುಳ್ಳೆಗಳು ಒಂದೊಮ್ಮೆ ಒಡೆದೇ ಒಡೆಯುತ್ತವೆ; ಆಗ ಇನ್ನೊಂದು ಬಿಕ್ಕಟ್ಟು ಅಮರಿಕೊಳ್ಳುತ್ತದೆ. ಅಮೆರಿಕಾದ ಆಳರಸರು 'ಡಾಟ್‌ಕಾಂ' ಜೂಜಾಟದ ಗುಳ್ಳೆ ಒಡೆದಾಗ ಸಬ್‌ಪ್ರೈಮ್ ಮನೆಸಾಲ ಗುಳ್ಳೆ ಸೃಷ್ಟಿಸಿ ಬಿಕ್ಕಟ್ಟಿನಿಂದ ಹೊರ ಬರಲು ಪ್ರಯತ್ನಿಸಿದರು. ಅದು ಇನ್ನೂ ದೊಡ್ಡದಾದ ಜಾಗತಿಕ ಹಣಕಾಸು ಕುಸಿತವನ್ನು ತಂದಿತು; ಅದು ಈಗಲೂ ಮುಂದುವರೆದಿದ್ದು ಅದರ ದುಷ್ಪರಿಣಾಮಗಳನ್ನು ಯುರೋಪಿನಾದ್ಯಂತ 'ಮಿತವ್ಯಯ'ದ ಹೆಸರಿನಲ್ಲಿ ದುಡಿಯುವ ಜನಗಳ ಮೇಲೆ ದಾಟಿಸಲಾಗುತ್ತಿದೆ.

ಭಾರತದಲ್ಲೂ ಯುಪಿಎ–2 ಸರಕಾರಕ್ಕೆ ಜಿಡಿಪಿ ಕುಸಿತದಿಂದ ಹೊರಬರಲು ಕೂಡ ಕಾಣುತ್ತಿರುವುದು ಇದೊಂದೇ ದಾರಿ. ಆದ್ದರಿಂದಲೇ ವಿದೇಶಿ ಹಣಕಾಸು ಬಂಡವಾಳಕ್ಕೆ ಹೊಸ ಕ್ಷೇತ್ರಗಳನ್ನು ತೆರೆದು ಕೊಡುವ ಯೋಚನೆ ಮಾಡುತ್ತಿದೆ; ವಾಲ್ ಮಾರ್ಟ್‌ನಂತಹ ಕಂಪನಿಗಳಿಗೆ ಚಿಲ್ಲರೆ ವ್ಯಾಪಾರವನ್ನು ತೆರೆದು ಕೊಡುತ್ತಿದೆ; ವೊಡಾಫೋನ್ ತೆರಿಗೆ ವಂಚನೆಯ ವಿಷಯದಲ್ಲಿ 'ಸೌಹಾರ್ದಯುತ ಇತ್ಯರ್ಥ'ದ(ವಾಸ್ತವವಾಗಿ ತೆರಿಗೆ ವಂಚನೆಯನ್ನು ಮನ್ನಾ ಮಾಡುವ) ಮಾತಾಡುತ್ತಿದೆ; ಈ ಮೂಲಕ ಭಾರತದ 'ಆತಿಥ್ಯ'ದ ಬಗ್ಗೆ ವಿಶ್ವಾಸ ಮೂಡಿಸ ಬಯಸುತ್ತಿದೆ. ಅದರೆ ಈ ರೀತಿ ಹೊಸದೊಂದು ಗುಳ್ಳೆ ಸೃಷ್ಟಿಸುವ ಪ್ರಯತ್ನ ಭಾರತೀಯ ದುಡಿಯುವ ಜನಗಳ ಮೇಲೆ ಇನ್ನಷ್ಟು ಸಂಕಟಗಳನ್ನು ಹೇರುತ್ತದೆಯೇ ಹೊರತು ಬಿಕ್ಕಟ್ಟನ್ನು ಪರಿಹರಿಸಲಾರದು ಎನ್ನುತ್ತಾರೆ ಪ್ರೊ. ಪ್ರಟ್ನಾಯಕ್.



ವೇದರಾಜ ಎನ್.ಕೆ.

ಆಹಾರ ಚಳುವಳಿ....

ಪುಟ 7 ರಿಂದ

ಹರ್ಯಾಣ–ದಮನ ಅಕ್ರಮಗಳ ವಿರುದ್ಧ ಆಕ್ರೋಶ

ಇಲ್ಲಿ ರಾಜ್ಯ ಸರ್ಕಾರವೇ ಮಾರುತಿ ಸುಜುಕಿ ಮಾಲೀಕರ ಪರ ನಿಂತು ಕಾರ್ಮಿಕರ ಹಕ್ಕನ್ನು ನಿರ್ದಯವಾಗಿ ದಮನ ಮಾಡುತ್ತದೆ. ಅಕ್ರಮ ಸಾರಾಯಿ ಎಲ್ಲೆಲ್ಲೂ ಹರಿದಾಡುತ್ತದೆ. ಬಡವರಿಗೆ ದಕ್ಕಬೇಕಾದ ಮನೆಗಳು ಯಾರಿಗೋ ಉಳ್ಳವರಿಗೆ ಸಿಗುತ್ತವೆ. ಆರೋಗ್ಯ ವ್ಯವಸ್ಥೆ ಕೆಡುತ್ತಾ ಹೋಗುತ್ತದೆ. ಸರ್ಕಾರವೇ ರೈತರ ಭೂಮಿ ಕಬಳಿಸುವ ಸಂಚುಗಳಲ್ಲಿ ತೊಡಗುತ್ತದೆ. ಇದು ಹರ್ಯಾಣದ 'ಹೂಡಾ' ಸರ್ಕಾರದ 'ಗುಣಗಾನ'. ಇಂತಹ ಸರ್ಕಾರಕ್ಕೆ ಸಿಪಿಐ(ಎಂ) ಮೇ ಕೊನೆಯ ವಾರದಲ್ಲಿ ಸಂಘಟಿಸಿದ ರಾಜ್ಯವ್ಯಾಪಿ ಚಳುವಳಿ 'ಮಂಗಳಾರತಿ' ಎತ್ತಿದೆ. ಮೇ 24 ರಂದು ಪಂಚಕುಲದಲ್ಲಿ, ಮೇ 27 ರಂದು ಹಿಸ್ಸಾರ್ ಜಿಲ್ಲೆಯ ಬರ್ವಾಲಾದಲ್ಲಿ ಚಳುವಳಿ ನಡೆದು ಜಿಲ್ಲಾಧಿಕಾರಿಗಳ ಕಛೇರಿ ಮುತ್ತಿಗೆ ಹಾಕಲಾಯಿತು.

ಇಲ್ಲಿ ಎಸ್‌ಡಿಎಂ ಅಧಿಕಾರಿ ಮನವಿ ಸ್ವೀಕರಿಸಿ ಸಮಸ್ಯೆ ಬಗೆ ಹರಿಸುವ ನಿಟ್ಟಿನಲ್ಲಿ ಮಾತುಕತೆಗೆ ದಿನಾಂಕ ನಿಗದಿ ಮಾಡಿದರು.

ಅಮೇರಿಕಾದ ರಾಷ್ಟ್ರೀಯ ಭದ್ರತಾ ಸಂಸ್ಥೆಯ ಬೇಹುಗಾರಿಕೆ ಕುರಿತು ಐತಿಹಾಸಿಕ ಮಾಹಿತಿ ಸೋರಿ

ನಾನು ಮತ್ತೆ ಮನೆಗೆ ಮರಳುವೆನೆಂಬ ಭರವಸೆ ಇಲ್ಲ : ಎಡ್ವರ್ಡ್ ಸ್ನೋಡೆನ್


ಜಯ

ಅಮೇರಿಕಾ ಸರ್ಕಾರ ತನ್ನ ಶತ್ರುಗಳ ದೂರವಾಣಿ ಕರೆ ಮತ್ತು ಇ-ಮೇಲ್‌ಗಳನ್ನು ಮಾತ್ರವೇ ರಹಸ್ಯವಾಗಿ ರೆಕಾರ್ಡ್ ಮಾಡಿಕೊಳ್ಳುತ್ತಿಲ್ಲ, ತನ್ನ ಪ್ರತಿ ಪ್ರಜೆ-ಯ ದೂರವಾಣಿ ಮತ್ತು ಇ-ಮೇಲ್ ಸಂಭಾಷಣೆಗಳನ್ನು ಸಹ ರೆಕಾರ್ಡ್ ಮಾಡಿಕೊಳ್ಳುತ್ತಿರುವ ಆಘಾತಕಾರಿ ಅಂಶ ಬಟಾಬಯಲಾಗಿದೆ. ಅಮೇರಿಕಾದ ಇತಿಹಾಸದಲ್ಲೇ ಕಂಡರಿಯದ ರಾಷ್ಟ್ರೀಯ ಭದ್ರತಾ ಸಂಸ್ಥೆ (ಎನ್‌ಎಸ್‌ಎ) ಕುರಿತು ರಹಸ್ಯ ಮಾಹಿತಿ ಸೋರಿಕೆ-ಯಾಗಿದ್ದು, ಅಮೇರಿಕಾ ಸರ್ಕಾರ ಮಾತ್ರವಷ್ಟೇ ಅಲ್ಲ ವಿಶ್ವದ ಹಲವು ರಾಷ್ಟ್ರಗಳ ಸರ್ಕಾರ ಮತ್ತು ಪ್ರಜೆಗಳನ್ನು ಇದು ದಂಗುಬಡಿಸಿದೆ. ಅಮೇರಿಕಾ ದೇಶದೊಳಗೆ ಅಲ್ಲಿನ ಪ್ರಜೆಗಳು ದೇಶದೊಳಗೆ ಮತ್ತು ಇತರೆ ದೇಶಗಳಿಗೆ ಮಾಡುವ ಪ್ರತಿ ದೂರವಾಣಿ ಕರೆಗಳು ಮತ್ತು ಅವುಗಳ ಸಂಭಾಷಣೆ, ಮಾಹಿತಿಗಳ ರಾಶಿಯನ್ನು ಅದು ಸಂಗ್ರಹಿಸಿ ಇಟ್ಟುಕೊಳ್ಳುವ ವ್ಯವಸ್ಥೆ ಮಾಡಿದೆ.

ಹೀಗೆ ಅಂತರ್ಜಾಲ ಮತ್ತು ದೂರವಾಣಿ ಕರೆಗಳನ್ನು ಸಂಗ್ರಹಿಸಿ ಬೇಹುಗಾರಿಕೆ ಮಾಡುತ್ತಿರುವುದರಿಂದ ಭಯೋತ್ಪಾದಕ ಕೃತ್ಯಗಳನ್ನು ಪತ್ತೆ ಹಚ್ಚಲು ಸಾಧ್ಯವಾಗುತ್ತದೆಂದು ಅಮೇರಿಕದ ಸೆನೆಟ್ ಮತ್ತು ಬೇಹುಗಾರಿಕಾ ಸ್ಥಾಯಿ ಸಮಿತಿಗಳು ಸಮರ್ಥಿಸಿಕೊಂಡಿದ್ದರೆ, ಇದು ವ್ಯಕ್ತಿಗಳ ಖಾಸಗಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತದೆ ಎಂಬ ಕೂಗು ವ್ಯಾಪಕವಾಗಿ ಕೇಳಿಬರತೊಡಗಿದೆ. ಯೂರೋಪ್ ಒಳಗೊಂಡು ಹಲವು ರಾಷ್ಟ್ರಗಳು ಅಮೇರಿಕಾ ಸರ್ಕಾರದ ಈ ಕ್ರಮದ ಕುರಿತು ಸ್ಪಷ್ಟನೆ ಕೇಳಿವೆ. ಮತ್ತೊಂದೆಡೆ, ದೂರವಾಣಿ ಮತ್ತು ಅಂತರ್ಜಾಲದಲ್ಲಿ ದೊರೆಯುವ ಮಾಹಿತಿಗಳ ಮೂಲಕ ವ್ಯಕ್ತಿಗಳ ಗುಣಸ್ವಭಾವಗಳನ್ನು ಅಳೆಯುತ್ತಾ ಹೋದಲ್ಲಿ ಅದು ವ್ಯಕ್ತಿಗಳ ಕುರಿತು ತಪ್ಪುತಪ್ಪಾದ ಅಂದಾಜನ್ನು ನೀಡುವ ಸಾಧ್ಯತೆಯೇ ಹೆಚ್ಚು ಎನ್ನುತ್ತಾರೆ ಸಂವಹನ ತಜ್ಞರು.

9,700 ಕೋಟಿ ರಹಸ್ಯ ಮಾಹಿತಿ ಕಲೆಹಾಕಲಾಗಿದೆ:

ರಾಷ್ಟ್ರೀಯ ಭದ್ರತಾ ಸಂಸ್ಥೆಯು ಅಭಿವೃದ್ಧಿ ಪಡಿಸಿರುವ 'ಬೌಂಡ್‌ಲೆಸ್ ಇನ್‌ಫಾರ್ಮಂಟ್' (ದತ್ತಾಂಶ ಕದಿಯುವ ತಂತ್ರಾಂಶ) ಮೂಲಕ ಇದುವರೆಗೆ ರಹಸ್ಯವಾಗಿ ಬೇಹುಗಾರಿಕೆ ನಡೆಸಿ ಸಂಗ್ರಹಿಸಿರುವ ಹಲವು ದಾಖಲೆಗಳು ತನ್ನ ಬಳಿಯಿವೆ ಎಂದು 'ಗಾರ್ಡಿಯನ್' ಪತ್ರಿಕೆ ವರದಿ ಮಾಡಿದೆ. ಹಲವು ದೇಶಗಳ ಅಂತರ್ಜಾಲ, ಸಾಮಾಜಿಕ ಜಾಲ ತಾಣ-ಕ್ಕೆ ಲಗ್ಗೆಯಿಟ್ಟ ನಕ್ಷೆ, ಕಂಪ್ಯೂಟರ್ ಮತ್ತು ದೂರವಾಣಿ ಮೂಲಕ ಶೋಧಿಸಿ ಕಲೆ ಹಾಕಿದ ಮಹತ್ವದ ದಾಖಲೆಗಳ ರಾಶಿಯೇ ತನ್ನಲ್ಲಿದೆ ಎಂದು ಪತ್ರಿಕೆ ತಿಳಿಸಿದೆ. 'ಬೌಂಡ್‌ಲೆಸ್ ಇನ್‌ಫಾರ್ಮಂಟ್' (ದತ್ತಾಂಶ ಕದಿಯುವ ತಂತ್ರಾಂಶ) ಮೂಲಕ ಜಾಗತಿಕವಾಗಿ ಸುಮಾರು 9,700 ಕೋಟಿ ರಹಸ್ಯ ಮಾಹಿತಿಗಳನ್ನು ರಾಷ್ಟ್ರೀಯ ಭದ್ರತಾ




ಸಂಸ್ಥೆಯು ಹೆಕ್ಕಿ ತೆಗೆದಿದೆ ಎನ್ನಲಾಗಿದೆ. ವೆರಿಜೋನ್ ಎಂಬ ದೂರವಾಣಿ ಕಂಪನಿಯು ಅಮೇರಿಕಾ ಸರ್ಕಾರದ ಆದೇಶದ ಮೇರೆಗೆ ಪ್ರಜೆಗಳ ಎಲ್ಲ ದೂರವಾಣಿ ಕರೆಗಳನ್ನು ಸಂಗ್ರಹಿಸಿ ಸರ್ಕಾರಕ್ಕೆ ಕೊಡುತ್ತಿದ್ದು, ಇದೇ ರೀತಿ ಇತರೆ ದೂರವಾಣಿ ಕಂಪನಿಗಳು ಮಾಡುತ್ತಿರಬಹುದು ಎಂದು ಬ್ರಿಟನ್‌ನ ಗಾರ್ಡಿಯನ್ ಪತ್ರಿಕೆ ವರದಿ ಮಾಡಿತ್ತು. ಇದನ್ನು ಅಮೇರಿಕಾ ಸಮರ್ಥಿಸಿಕೊಂಡಿದೆ.

ಅಲ್ಲದೆ 'ಪ್ರಿಸಂ' ಎಂಬ ಯೋಜನೆಯಡಿ ಎನ್‌ಎಸ್‌ಎ ಮತ್ತು ಫೆಡರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್ (ಎಫ್‌ಬಿಐ) ಸಂಸ್ಥೆಗಳು ದೇಶದ ಪ್ರಮುಖ ಇಂಟರ್‌ನೆಟ್ ಕಂಪನಿಗಳಾದ ಮೈಕ್ರೋಸಾಫ್ಟ್, ಯಾಹೂ, ಎಒಎಲ್, ಸ್ಕೈಪ್, ಯೂಟ್ಯೂಬ್, ಆಪಲ್, ಫೇಸ್‌ಬುಕ್, ಗೂಗಲ್, ಇತ್ಯಾದಿಗಳಿಂದ ವ್ಯಕ್ತಿಗಳ ಧ್ವನಿ, ವೀಡಿಯೋ, ಫೋಟೋಗಳು, ಇ-ಮೇಲ್‌ಗಳು, ದಾಖಲೆಗಳು ಮತ್ತು ವ್ಯಕ್ತಿಗಳು ಕಂಪ್ಯೂಟರ್ ಬಳಸುವ ಸಮಯಗಳನ್ನು ಪಡೆದುಕೊಂಡು ಈ ಮುಖೇನಾ ವ್ಯಕ್ತಿಗಳ ಚಲನವಲನಗಳ ಮತ್ತು ಅವರು ಇತರರೊಂದಿಗೆ ಹೊಂದಿರುವ ಸಂಪರ್ಕಗಳನ್ನು ಟ್ರ್ಯಾಕ್ ಮಾಡಲಾಗುತ್ತಿದೆ.

ದೂರವಾಣಿ ಅಥವಾ ಅಂತರ್ಜಾಲ ಹೊಂದಿರುವ ಪ್ರತಿಯೊಬ್ಬರೂ ಟಾರ್ಗೆಟ್:

ಅಮೇರಿಕಾದ ಉಟಾ ಎಂಬ ಸ್ಥಳದಲ್ಲಿ ಎನ್‌ಎಸ್‌ಎ ಸಂಸ್ಥೆಯು ರೂ. 12,000 ಕೋಟಿ ವೆಚ್ಚದಲ್ಲಿ ವಿಶ್ವದ ಅತಿದೊಡ್ಡ ಬೇಹುಗಾರಿಕಾ ನೆಲೆ ಸ್ಥಾಪಿಸುತ್ತಿದೆ. ಅದನ್ನು ಉಟಾ ದತ್ತಾಂಶ ಕೇಂದ್ರ ಎಂದು ಕ-ರೆದರೂ ಅದರ ಕೆಲಸವೆಂದರೆ ವಿಶ್ವದ ಎಲ್ಲೆಡೆ ಹರಡಿರುವ ಸಂವಹನ ಉಪಗ್ರಹಗಳು ಮತ್ತು ಭೂಮಿಯೊಳಗೆ ಹಾಗೂ ಸಮುದ್ರದೊಳಗೆ ಹಾದುಹೋಗಿರುವ ರಾಷ್ಟ್ರೀಯ, ಅಂತರಾಷ್ಟ್ರೀಯ, ದೇಶೀಯ ಮತ್ತು ವಿದೇಶಿ ಕೇಬಲ್ ಜಾಲಬಂಧಗಳನ್ನು ಎಡತಾಕಿ ಅಗಾಧ ಪ್ರಮಾಣದ ಮಾಹಿತಿಗಳನ್ನು ತಡೆಹಿಡಿದು, ಹೆಕ್ಕಿತೆಗೆದು, ವಿಶ್ಲೇಷಿಸಿ ಸಂಗ್ರಹಿಸಿಡುವ ಯೋಜನೆ. ಈ ಕೇಂದ್ರವು ಹಣಕಾಸು ಮಾಹಿತಿ, ಬಿಸಿನೆಸ್ ಡೀಲ್‌ಗಳು, ವಿದೇಶಿ ಮಿಲಿಟರಿ ಮತ್ತು ರಾಯಭಾರ ರಹಸ್ಯಗಳು, ಕಾನೂನು ದಾಖಲಾತಿಗಳು, ರಹಸ್ಯವಾದ ಕೋಟಿಗಟ್ಟಲೆ ವೈಯಕ್ತಿಕ ಸಂವಹನಗಳನ್ನು ಸೂಪರ್ ಕಂಪ್ಯೂಟರ್‌ಗಳ ನೆಟ್‌ವರ್ಕ್ ಮೂಲಕ ಹೆಕ್ಕಿತೆಗೆಯುತ್ತದೆ. ಗೂಢಲಿಪಿಶಾಸ್ತ್ರದಲ್ಲಿ ಅಮೇರಿಕಾದ ಸಂಶೋಧನೆ ಮತ್ತಷ್ಟು ಪ್ರಗತಿ ಹೊಂದಿದ್ದು ಇತರೆ ದೇಶಗಳ ಸರ್ಕಾರಗಳ ಮಾಹಿತಿ ಮಾತ್ರವನ್ನಷ್ಟೇ ತಡೆಹಿಡಿದು ವಿಶ್ಲೇಷಿಸುವುದಿಲ್ಲ, ಸಂವಹನ ಸಾಧನ ಹೊಂದಿರುವ ಪ್ರತಿಯೊಬ್ಬರೂ ಅದಕ್ಕೆ ಟಾರ್ಗೆಟ್.

ನಮ್ಮ ಕಿರುಬೆರಳಿನ ಗಾತ್ರದ ಪೆನ್‌ಡ್ರೈವ್‌ನಲ್ಲಿ 1 ಟೆರಾಬೈಟ್ (1 ಟೆರಾಬೈಟ್ ಅಂದರೆ 1000 ಗಿಗಾ ಬೈಟ್, ಜಿಬಿ – ಸಾಮಾನ್ಯ ಬಳಕೆದಾರರು ಬಳಸುವ ಕಂಪ್ಯೂಟರ್‌ನ ಮೆಮೊರಿಯು ಸುಮಾರು 500ಜಿಬಿ ಇರುತ್ತದೆ.) ಮಾಹಿತಿ ಸಂಗ್ರಹಿಸಿಡಬಹುದು.



ಅಮೇರಿಕಾದ ರಕ್ಷಣಾ ವಿಜ್ಞಾನ ಮಂಡಳಿಯ 2010ರ ವರದಿ ಪ್ರಕಾರ ಬೇಹುಗಾರಿಕೆ ಸಂಸ್ಥೆ ಪೆಂಟಗನ್, ವಿಶ್ವದಾದ್ಯಂತ ತನ್ನ ತಂತು ಮತ್ತು ತಂತು-ರಹಿತ ಸೆನ್ಸಾರ್ ಜಾಲಬಂಧ (ನೆಟ್‌ವರ್ಕ್)ಗಳನ್ನು ವಿಸ್ತರಿಸಿ ಯೊಟ್ಟಾಬೈಟ್ ಗಾತ್ರದಷ್ಟು (1 ಯೊಟ್ಟಾಬೈಟ್ ಅಂ-ದರೆ 1024 ಬೈಟ್‌ಗಳಷ್ಟು, ಇದರ ಮುಂದಿನ ಹಂತದ ಸಂಖ್ಯೆಗೆ ಯಾರೂ ಕೂಡ ಹೆಸರು ಕಂಡುಹಿಡಿದಿಲ್ಲ) ಮಾಹಿತಿ ಸಂಗ್ರಹಿಸುವ ಮೆಮರಿ ಇರುವ ಜಾಗತಿಕ ಮಾಹಿ ಜಾಲಬಂಧವನ್ನು ನಿರ್ಮಿಸುತ್ತಿದೆ. ಗೂಗ ಕಂಪನಿಯ ಹಿಂದಿನ ಮುಖ್ಯಸ್ಥ ಎರಿ ಸ್ಮಿಮ್ಟ್ ಪ್ರಕಾರ 2010 ರಿಂದ 2015 ನಡುವೆ ಜಾಗತಿಕ ಇಂಟರ್‌ನೆಟ್ ಟ್ರಾಫಿ ಸುಮಾರು 966 ವಾರ್ಷಿಕ ಎಕ್ಸಾಬೈ ತಲುಪತ್ತದೆ (10 ದಶಲಕ್ಷ ಎಕ್ಸಾಬೈಟ್‌ಗ ಒಂದು ಯೊಟ್ಟಾಬೈಟ್‌ಗೆ ಸಮ). ಮನುಷ ಉಗಮದಿಂದ ಆರಂಭಿಸಿ 2003 ರವರ ಸೃಷ್ಟಿಯಾಗಿರುವ ಒಟ್ಟಾರೆ ಮಾನವ ಜ್ಞಾನದ ಕೇವಲ 5 ಎಕ್ಸಾಬೈಟ್ ಅಷ್ಟೇ! 20 ರ ಹೊತ್ತಿಗೆ ವಿಶ್ವದ 690 ಕೋಟಿ ಜನ ಪೈಕಿ 200ಕೋಟಿ ಜನ ಇಂಟರ್‌ನೆ ಸಂಪರ್ಕ ಹೊಂದಿದ್ದರು. 2015ರ ಹೊ ಅವರ ಸಂಖ್ಯೆ 270 ಕೋಟಿ ತಲು ಉಟಾ ಕೇಂದ್ರದಲ್ಲಿ ರಾಷ್ಟ್ರೀಯ ಭದ್ರ ಸಂಸ್ಥೆಯೇನಾದರೂ 1 ಯೊಟ್ಟಾಬೈ ಗಾತ್ರದಷ್ಟು ಮಾಹಿತಿ ಸಂಗ್ರಹಿಸಿಟ್ಟ ಅದನ್ನು ಪ್ರಿಂಟ್ ಮಾಡಿಸಿದರೆ ಅ 500 ಕ್ವಿಂಟಿಲಿಯನ್ ಪುಟದಷ್ಟು (ಅಂ ದರೆ 500,000,000,000,000,000,0 ಪುಟಗಳು) ಆಗುತ್ತದೆ!

ಸ್ಫೋಟಕ ಮಾಹಿತಿ ಸೋರಿಕೆದಾರ ಎಡ್ವರ್ ಸ್ನೋಡೆನ್:

ಅಮೇರಿಕಾದ ರಾಷ್ಟ್ರೀಯ ಭದ್ರ ಸಂಸ್ಥೆಯು ರಹಸ್ಯವಾಗಿ ತನ್ನದೇ ಪ್ರಜೆಗ ಅಂತರ್ಜಾಲ ಮತ್ತು ದೂರವಾಣಿ ಕರೆಗ ಸಂಭಾಷಣೆ ಮತ್ತು ಇತರೆ ಮಾಹಿತಿಗ ಕುರಿತು ಬೇಹುಗಾರಿಕೆ ನಡೆಸುತ್ತಿರುವ ಸ್ಫೋಟ ಮಾಹಿತಿಯನ್ನು ಬಯಲಿಗೆಳೆದಿರುವುದು 2 ವರ್ಷದ ಎಡ್ವರ್ಡ್ ಸ್ನೋಡೆನ ಈತ ಅಮೇರಿಕಾದ ವಿದೇಶಿ ಗುಹ ಬೇಹುಗಾರಿಕೆ ನ್ಯಾಯ (ಎಫ್.ಐ.ಎಸ್.ಸಿ ಅಮೇರಿಕನ್ನರ ಫೋ ದಾಖಲೆಗಳನ್ನು ಸಂಗ್ರಹಿಸ ಹೊರಡಿಸಿದ್ದ ರಹ ನ್ಯಾಯಾಲಯ ಆದೇಶವನ ಬಯಲಿಗೆಳೆದಿದ್ದಾನೆ. ಅಲ್ಲ ಅಮೇರಿಕಾದ 9 ಅಂತರ್ಜಾ ಸೇವಾ ಪೂರೈಕೆದಾ ಕಂಪನಿಗಳಿಂದ ಸರ್ಕಾ ನಿರಂತರವಾಗಿ ಮಾಹಿ ಪಡೆಯುತ್ತಿರುವ ರಹಸ್ಯ ಯೋಜನೆಯನು ಬಯಲಿಗೆಳೆದಿದ್ದಾನೆ.

ಈತ ಶಾಲೆಯಲ್ಲಿ ಅಷ್ಟೇನೂ ಪ್ರತಿಭಾವಂ ವಿದ್ಯಾರ್ಥಿಯಾಗಿರಲಿಲ್ಲ. ಅವನು ಅಮೇರಿಕಾ ಕಾಲೇಜೊಂದರಲ್ಲಿ ಕಂಪ್ಯೂಟರ್‌ಸೈ ವಿಷಯ ಅಭ್ಯಸಿಸುತ್ತಿದ್ದ. ಅ ಪೂರ್ಣಗೊಳಿಸಲಾಗದೆ ಕಾಲೇಜು ತೊರೆ ಅಮೇರಿಕಾದ ಸೇನೆಯಲ್ಲಿ ಕೆಲಸಕ್ಕಾಗಿ ಅಜಿ

ಹಾಕಿದ. ಸೇನೆಯಲ್ಲಿ ತರಬೇತಿ ಸಮಯದಲ್ಲಿ ಸಂಭವಿಸಿದ ಅಪಘಾತದಿಂದಾಗಿ ತರಬೇತಿ ತೊರೆದು ರಾಷ್ಟ್ರೀಯ ಭದ್ರತಾ ಸಂಸ್ಥೆಯಲ್ಲಿ ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸಕ್ಕೆ ಸೇರಿದ. ಶಾಲಾಭ್ಯಾಸ ಪೂರ್ಣಗೊಳಿಸದಿದ್ದರೂ, ಅವನ ಕಂಪ್ಯೂಟರ್ ಪ್ರೋಗ್ರಾಂ ಕುರಿತ ಅಗಾಧ ಜ್ಞಾನ ಮತ್ತು ಇಂಟರ್‌ನೆಟ್ ತಿಳುವಳಿಕೆಯಿಂದಾಗಿ ಬಹುಬೇಗ ಅಮೆರಿಕಾದ ಕೇಂದ್ರೀಯ ಬೇಹುಗಾರಿಕಾ ಸಂಸ್ಥೆ (ಸಿಐಎ) ಯಲ್ಲಿ ಕೆಲಸ ದೊರೆಯಿತು. ಸಿಐಎ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ದಿನಗಳಲ್ಲಿ ತಾನು ಒಳ್ಳೆಯದು ಮಾಡುತ್ತಿರುವುದಕ್ಕೆ ಬದಲು ಕೆಟ್ಟ ಕೆಲಸದಲ್ಲಿ ಭಾಗಿಯಾಗಿದ್ದೇನೆಂದು ಅನಿಸತೊಡಗಿತು. 2009ರಲ್ಲಿ ಬುಷ್ ಸರ್ಕಾರ ಹೋಗಿ ಒಬಾಮ ಅಧಿಕಾರಕ್ಕೆ ಬರುವ ಸಂದರ್ಭದಲ್ಲಿ ಜನತೆಯ ಮೇಲೆ ಬೇಹುಗಾರಿಕೆ ನಡೆಸುವ ಸರ್ಕಾರದ ನೀತಿ ಬದಲಾಗಬಹುದೆಂದು ನಿರೀಕ್ಷಿಸಿದ. ಆದರೆ ಅದೇ ಬೇಹುಗಾರಿಕಾ ನೀತಿಯನ್ನೇ ಒಬಾಮ ಮತ್ತಷ್ಟು ಮುಂದೆ ಕೊಂಡೊಯ್ಯತೊಡಗಿದ್ದರಿಂದ ತಾನು ಈ ರಹಸ್ಯಗಳನ್ನು ಜನತೆಯ ಮುಂದೆ ತರುವ ಕುರಿತು ಆಲೋಚಿಸತೊಡಗಿದ. ಇದರಿಂದ ಅವನು ಕಲಿತ ಪಾಠವೆಂದರೆ 'ಬೇರೊಬ್ಬರು ಕ್ರಮಕೈಗೊಳ್ಳುತ್ತಾರೆಂದು ನಾವು ಕಾಯುತ್ತಾ ಕೂರಬಾರದು. ನಾನು ನಾಯಕರಿಗಾಗಿ ಕಾಯುತ್ತಾ ಕುಳಿತೆ, ಆದರೆ ಮೊದಲು ಕ್ರಮಕೈಗೊಳ್ಳುವುದೇ ನಾಯಕತ್ವ' ಎನ್ನುತ್ತಾನೆ. ನಂತರ ಸಿಐಎ ಕೆಲಸ ತೊರೆದು ರಾಷ್ಟ್ರೀಯ ಭದ್ರತಾ ಸಂಸ್ಥೆಗೆ ಕಂಟ್ರ್ಯಾಕ್ಟ್ ಕೆಲಸ ಮಾಡುವ ಕಂಪನಿಯೊಂದಕ್ಕೆ ಸೇರಿದ. 2013 ಮೇ 20ರಂದು ಮೂರ್ಛೆ ರೋಗಕ್ಕೆ ಚಿಕಿತ್ಸೆ ಪಡೆಯಬೇಕೆಂದು ರಜೆ ಪಡೆದು ರಹಸ್ಯವಾಗಿ ಹಾಂಕಾಂಗ್ ತಲುಪಿದ. ಇದೀಗ ಹಾಂಕಾಂಗ್‌ನ ಹೋಟೆಲ್‌ನೊಳಗಿದ್ದು ಮುಂದಿನ ನಡೆಗಳ ಕುರಿತು ಗೊಂದಲದಲ್ಲಿದ್ದಾನೆ. ಚೀನಾ ದೇಶದ ಭಾಗವಾಗಿರುವ ಹಾಂಕಾಂಗ್‌ನಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಮೇರಿಕಾಗಿಂತಲೂ ಹೆಚ್ಚಿನ ಅವಕಾಶವಿರುವುದರಿಂದ ತನ್ನನ್ನು ರಕ್ಷಿಸಿಕೊಳ್ಳಬಹುದೆಂದು ಇಲ್ಲಿಗೆ ಬಂದಿದ್ದೇನೆ ಎನ್ನುತ್ತಾನೆ. ಇಲವಾದಲ್ಲಿ ಅಂತರ್ಜಾಲ ಸ್ವಾತಂತ್ರ್ಯ ಪರವಿರುವ ಐಸ್‌ಲ್ಯಾಂಡ್‌ನಲ್ಲಿ ಆಶ್ರಯ ಪಡೆಯುವುದಾಗಿ ಆಲೋಚಿಸುತ್ತಿದ್ದಾನೆ. ಇತ್ತ ಅವನ ಬೇಟೆಗಾಗಿ ಅಮೇರಿಕಾದ ಪೋಲೀಸ್ ಮತ್ತು ಬೇಹುಗಾರಿಕೆ ಸಂಸ್ಥೆಗಳು ಹಾಂಕಾಂಗ್ ಗೆ ಲಗ್ಗೆಯಿಟ್ಟಿವೆ.

ತಾನು ಮಾಡಿರುವ ಕಾರ್ಯಗಳಿಂದಾಗಿ ತಾನು ಅತೀವ ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆಂದು ತಿಳಿದಿರುವ ಸ್ನೋಡೆನ್ 'ಇಂದು ವಿಶ್ವವನ್ನು ಆಳುತ್ತಿರುವ ರಹಸ್ಯ ಕಾನೂನುಗಳು, ಅಸಮಾನ ಕ್ಷಮಾದಾನ ಮತ್ತು ಜನತೆಯ ಮೇಲೆ ಸವಾರಿ ಮಾಡುವ ಸರ್ಕಾರಗಳ ಅಧಿಕಾರಗಳನ್ನು ಒಂದು ಕ್ಷಣವಾದರೂ ನನ್ನ ಕಾರ್ಯಗಳು ಬಯಲಿಗೆಳೆದಿದ್ದಲ್ಲಿ ನನಗೆ ತೃಪ್ತಿ' ಎನ್ನುತ್ತಾನೆ. 'ನಾನು ಮತ್ತೆ ಮನೆಗೆ ತೆರಳುತ್ತೇನೆಂಬ ಭರವಸೆಯಿಲ್ಲ'. "ತಮ್ಮ ಹೆಸರಿನಲ್ಲಿ ಸರ್ಕಾರಗಳು ನಡೆಸುತ್ತಿರುವ ಕೃತ್ಯಗಳನ್ನು ಜನತೆಗೆ ತಿಳಿಸುವುದಷ್ಟೇ ನನ್ನ ಉದ್ದೇಶ. ನನಗೆ ರೂ. 1 ಕೋಟಿ ಸಂಬಳ, ಒಳ್ಳೆಯ ಗೆಳತಿ, ಹವಾಯಿ ದ್ವೀಪದಲ್ಲೊಂದು ಐಷಾರಾಮಿ ಮನೆ ಮತ್ತು ಆತ್ಮೀಯ ಬಂಧುವರ್ಗದವರೆಲ್ಲರೂ ಇದ್ದು ಆರಾಮ ಜೀವನ ನಡೆಸಬಹುದು. ಆದರೆ, ಇವೆಲ್ಲವನ್ನೂ ನಾನು ತ್ಯಾಗ ಮಾಡಲು ಸಿದ್ಧನಿರುವುದೇಕೆಂದರೆ, ಅಮೇರಿಕಾ ವಿಶ್ವದಾದ್ಯಂತ ರಹಸ್ಯವಾಗಿ ನಿರ್ಮಿಸುತ್ತಿರುವ ಬೇಹುಗಾರಿಕಾ ವ್ಯವಸ್ಥೆಯು ಪ್ರತಿಯೊಬ್ಬರ ಖಾಸಗಿ ಸ್ವಾತಂತ್ರ್ಯ, ಅಂತರ್ಜಾಲ ಸ್ವಾತಂತ್ರ್ಯ ಮತ್ತು ನಾಗರೀಕ ಸ್ವಾತಂತ್ರ್ಯಗಳನ್ನು ನಾಶಗೊಳಿಸುತ್ತಿರುವುದನ್ನು ಗೊತ್ತಿದ್ದೂ ಸುಮ್ಮನೆ ಕೂರಲಾರೆ".

ಅಮೇರಿಕಾದ ಬೇಹುಗಾರಿಕೆಗೆ ಚಳ್ಳೆ ಹಣ್ಣು ತಿನ್ನಿಸುತ್ತಿರುವ ಮಾಹಿತಿ ಸೋರಿಕೆದಾರರು:

ಅಮೇರಿಕಾದ ಬೇಹುಗಾರಿಕೆ ಸಂಸ್ಥೆ ಪೆಂಟಗನ್ ರಹಸ್ಯ ದಾಖಲೆಗಳನ್ನು ಬಯಲಿಗೆಳೆದ ಡೇನಿಯಲ್ ಎಲ್ಸ್‌ಬರ್ಗ್, ಅಮೇರಿಕಾ ತನ್ನ ರಾಯಭಾರಿ ಕಛೇರಿಗಳ ಮೂಲಕ ಇತರೆ ದೇಶಗಳಲ್ಲಿ ನಡೆಸುತ್ತಿರುವ ಬೇಹುಗಾರಿಕೆ ಸಂಭಾಷಣೆಗಳನ್ನು ವಿಕಿಲೀಕ್ಸ್ ಮೂಲಕ ಸೋರಿಕೆ ಮಾಡಿ ಸೆರೆವಾಸದಲ್ಲಿರುವ ಅಮೇರಿಕಾ ಸೈನಿಕ ಬ್ರ್ಯಾಡ್ಲಿ ಮ್ಯಾನಿಂಗ್, ವಿಕಿಲೀಕ್ಸ್ ವೆಬ್‌ಸೈಟ್ ಮೂಲಕ ಅಮೇರಿಕಾದ ಕೋಟ್ಯಾಂತರ ಗೋಪ್ಯ ಮಾಹಿತಿಗಳನ್ನು ಹೊರಗೆಡಗಿ ಸದ್ಯ ಆಫ್ರಿಕಾ ದೇಶವೊಂದರ ರಾಯಭಾರ ಕಛೇರಿಯಲ್ಲಿ ಅಡಗಿರುವ ಜೂಲಿಯನ್ ಅಸ್ಸಾಂಜ್ ರಂಥಹ ಅತಿದೊಡ್ಡ ಮಾಹಿತಿ ಸೋರಿಕೆದಾರರ ಪ್ರತಿಷ್ಠಿತರ ಪಟ್ಟಿಯಲ್ಲಿ ಇದೀಗ ಎಡ್ವರ್ಡ್ ಸ್ನೋಡೆನ್ ಸೇರ್ಪಡೆಯಾಗಿದ್ದಾನೆ.

ಅಮೇರಿಕಾ ಪ್ರತಿಪಾದಿಸುವ ಬೊಗಳೆ ಸ್ವಾತಂತ್ರ್ಯ & ಪ್ರಜಾಪ್ರಭುತ್ವ-ಮಾರಕ ನೀತಿ:

ಇರಾಕ್‌ನಲ್ಲಿ ಸದ್ದಾಂ ಹುಸೇನ್ ಸರ್ಕಾರ ತನ್ನ ಜನತೆಯ ಮೇಲೆ ದೌರ್ಜನ್ಯ, ದಬ್ಬಾಳಿಕೆ ನಡೆಸುತ್ತಿದ್ದು ಅವರನ್ನು ರಕ್ಷಿಸಲು ಮತ್ತು ಇರಾಕ್ ಸರ್ಕಾರ ಸಮೂಹ ನಾಶ ಶಸ್ತ್ರಾಸ್ತ್ರಗಳನ್ನು ಇತರೆ ದೇಶಗಳ ಮೇಲೆ ಬಳಸದಂತೆ ತಡೆಯಲು ಅಮೇರಿಕಾ ಮಧ್ಯಪ್ರವೇಶ ಮಾಡಬೇಕು ಎಂದು ಹೇಳುವ ಅಮೇರಿಕಾ ಸರ್ಕಾರ ಮತ್ತು ಮಾಧ್ಯಮಗಳು ದಿನಂಪ್ರತಿ ಹರಿಯಬಿಡುವ ಸಾಮ್ರಾಜ್ಯಶಾಹಿ ಪರ ಸುದ್ದಿಯನ್ನು ಸ್ನೋಡೆನ್ ಕಟುವಾಗಿ ಉದಾಹರಣೆ ಸಮೇತ ಟೀಕಿಸುತ್ತಾನೆ. 'ನಾನು ಇರಾಕ್ ಯುದ್ಧದಲ್ಲಿ ಪಾಲ್ಗೊಂಡು ಹೋರಾಡಬಯಸಿದ್ದೆ. ಏಕೆಂದರೆ ಒಬ್ಬ ಮಾನವೀಯ ಪರ ವ್ಯಕ್ತಿಯಾಗಿ ಇರಾಕ್‌ನಲ್ಲಿ ದೌರ್ಜನ್ಯ ಮತ್ತು ದಬ್ಬಾಳಿಕೆಗೆ ಒಳಗಾಗಿ ನರಳುತ್ತಿರುವ ಜನತೆಗೆ ಸಹಾಯ ಒದಗಿಸುವುದು ನನ್ನ ಕರ್ತವ್ಯ ಎಂದು ಭಾವಿಸಿದ್ದೆ. ಆದರೆ ಸೇನಾ ತರಬೇತಿಯಲ್ಲಿ ಹಲವು ಶಿಬಿರಾರ್ಥಿ ಸೈನಿಕರು ಅರಬ್ಬರಿಗೆ ಸಹಾಯ ನೀಡುವ ಬದಲು ಅವರನ್ನು ಸಾಯಿಸುವ ಕುರಿತು ಉತ್ಸುಕರಾಗಿದ್ದರು.' ಹೀಗೆ ತನ್ನ ನಂಬಿಕೆಗಳನ್ನು ಛಿದ್ರಗೊಳಿಸಿದ ಸಂಗತಿಗಳನ್ನು ಹಂಚಿಕೊಂಡಿದ್ದಾನೆ.

'ಖಾಸಗಿಯಾಗಿ ಬದುಕಲು ಸಾಧ್ಯವಿಲ್ಲದ ಮತ್ತು ಬೌದ್ಧಿಕ ಶೋಧನೆ ಹಾಗೂ ಸೃಜನಶೀಲತೆ ಜಾಗವಿಲ್ಲದ ವಿಶ್ವದಲ್ಲಿ ನಾನು ಬದುಕಲು ಸಾಧ್ಯವಿಲ್ಲ' 'ಇಂಟರ್‌ನೆಟ್ ಶೋಧನೆ ಜನರ ನಡುವೆ ಅಡೆತಡೆಯಿಲ್ಲದೆ ಸಂಪರ್ಕ ಸಾಧಿಸಲು, ಮಾಹಿತಿ ವಿನಿಮಯ ಮಾಡಿಕೊಳ್ಳಲು ಸಹಕಾರಿಯಾಗಿತ್ತು, ಆದರೆ ಅದನ್ನು ಸರ್ಕಾರಗಳು ತಮ್ಮ ನಿಯಂತ್ರಣದ ಮೂಲಕ ಬುಡಮೇಲು ಮಾಡುತ್ತಿವೆ' ಎನ್ನುತ್ತಾನೆ. ರಾಷ್ಟ್ರೀಯ ಭದ್ರತಾ ಸಂಸ್ಥೆಯು ವಿಶ್ವದಾದ್ಯಂತ ಕಳೆಹಾಕಲು ಬಳಸುತ್ತಿರುವ ಬೇಹುಗಾರಿಕಾ ವ್ಯವಸ್ಥೆಯು ಇನ್ನು ಮುಂದೆ ಶಾಶ್ವತವಾಗಿ ಮುಂದುವರೆಯುತ್ತದೆಂದು ಖಾತರಿಯಾದಾಗ 'ಇದು ಪ್ರಜಾಪ್ರಭುತ್ವಕ್ಕೆ ಅಪಾಯ' ಎನ್ನುವುದು ಅವನಿಗೆ ಮನದಟ್ಟಾಯಿತು. ಸರ್ಕಾರಗಳು ಜನತೆ ತಮಗೆ ನೀಡದೇ ಇರುವ ಶಕ್ತಿಯನ್ನು ಜಳಪಿಸತೊಡಗಿವೆ.

ಭಾರತದ ಅಂತರ್ಜಾಲ ಬೇಹುಗಾರಿಕೆ:

ಭಾರತೀಯ ಜನತೆ ಅಮೇರಿಕಾ ಸರ್ಕಾರದ ಅಂತರ್ಜಾಲ ಬೇಹುಗಾರಿಕಾ ವ್ಯವಸ್ಥೆ ಕುರಿತು ಆತಂಕಪಡುತ್ತಿರುವಾಗಲೇ, ಭಾರತ ಸರ್ಕಾರ ಕೂಡ ಭಯೋತ್ಪಾದನೆ ಕುರಿತು ಮಾಹಿತಿ ಶೋಧಿಸುವ ಹೆಸರಿನಲ್ಲಿ ರಾಷ್ಟ್ರೀಯ ಸೈಬರ್ ಸಂಯೋಜನಾ ಕೇಂದ್ರವನ್ನು ರಚಿಸಿದೆ. ಅದೂ ಕೂಡ ಎಲ್ಲ ಆನ್‌ಲೈನ್ ಅಕೌಂಟ್ ಗಳನ್ನು ನೋಡುವ ಅಧಿಕಾರ ಹೊಂದಿದ್ದು, ಸಂದೇಹಾಸ್ಪದ ಅಕೌಂಟ್‌ಗಳಿಗೆ ಮಾತ್ರವೇ ಸೀಮಿತವಾಗಿಲ್ಲ.

...ಗಳ ಶಾಸ್ತ್ರ....

ಪುಟ 11 ರಿಂದ

...ಥಿಲಗೊಂಡಿದೆ. ಸಮಾಜ ಬದಲಾವಣೆಗಾಗಿ ...ಕ್ಷಣವನ್ನು ಸಾಧನವಾಗಿ ಬಳಸಬೇಕಿದೆ. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಕ್ರಾಂತಿಕಾರಿ ಬದಲಾವಣೆಗಾಗಿ ಬಳಸುವ ಕಾರ್ಯ ಜನವಿಜ್ಞಾನ ಚಳುವಳಿಯಿಂದಾಗಬೇಕಿದೆ.

ಇದರಲ್ಲಿ ಯಶಸ್ಸು ಸಾಧಿಸಬೇಕಾದರೆ, ವಿಜ್ಞಾನ ಮತ್ತು ವಿಜ್ಞಾನಿಗಳನ್ನು ನಾವು ಹೆಚ್ಚಿನ ಮಟ್ಟದಲ್ಲಿ ಜನವಿಜ್ಞಾನ ಚಳುವಳಿಯೊಳಗೆ ತರಬೇಕಿದೆ. ವಿಜ್ಞಾನದ ಬಳಕೆಯನ್ನು ಯಾವುದಕ್ಕೆ ಉಪಯೋಗಿಸಲಾಗುತ್ತಿದೆ ಎಂದು ಚಳುವಳಿಯು ನಿರಂತರ ಪರಿಶೀಲಿಸಬೇಕು.

ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದಲ್ಲಿ ಚಳುವಳಿಯ ಪಾತ್ರ:

ವಿದ್ಯುತ್ ಬಿಕ್ಕಟ್ಟು, ನೀರಾವರಿ ಸಮಸ್ಯೆ, ಶಿಕ್ಷಣ, ಕೈಗಾರಿಕಾಭಿವೃದ್ಧಿ, ಆರೋಗ್ಯ ಕಾರ್ಯ, ಇತ್ಯಾದಿಯಂತ ವಿಷಯಗಳ ಕುರಿತಂತೆ ಆಳುವ ವರ್ಗ ಜನತೆಯ ಮುಂದಿಡುವ ಯೋಜನೆಗಳಿಗೆ ಪರ್ಯಾಯ ಜನಪರ ಯೋಜನೆಗಳನ್ನು ಮುಂಚೂಣಿಗೆ ತರಬೇಕು. ವಿಕೇಂದ್ರೀಕರಣದ ಸಾಂಪ್ರದಾಯಿಕ ಕಣ್ಣೋಟವೇನೆಂದರೆ ಸ್ಥಳೀಯವಾಗಿ ಆರ್ಥಿಕ ಸಂಪನ್ಮೂಲಗಳು ಹಂಚಿಕೆಯಾಗಲು ವಿಕೇಂದ್ರೀಕರಣವು ಪರಿಣಾಮಕಾರಿಯಾಗಿಸುತ್ತದೆ. ಸಮಾಜವಾದಿ ಹಾದಿಯಲ್ಲಿ ಮುಂದೋಗಲು, ವಿಕೇಂದ್ರೀಕರಣವು ಪ್ರಜಾಸತ್ತಾತ್ಮಕ ಮಧ್ಯಪ್ರವೇಶಕ್ಕೆ ಹೆಚ್ಚಿನ ಸಾಧ್ಯತೆ ಒದಗಿಸುತ್ತದೆ ಮತ್ತು ಪ್ರಜಾಸತ್ತಾತ್ಮಕ ವ್ಯವಸ್ಥೆ ಬೇರು ಮಟ್ಟ ತಲುಪಲು ಮತ್ತು ವ್ಯಾಪಕಗೊಳ್ಳುವಲ್ಲಿ ಸಾಧನವಾಗುತ್ತದೆ. ಇದನ್ನು ಲ್ಯಾಟಿನ್ ಅಮೇರಿಕಾದ ಪ್ರಯೋಗಗಳು ತೋರಿಸುತ್ತವೆ.

ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಯನ್ನು ಸೃಜನಾತ್ಮಕವಾಗಿ ಬಳಸಿ ಹೊಸ ಸನ್ನಿವೇಶವನ್ನುಂಟು ಮಾಡುವಂತಹ ಪರಿಸ್ಥಿತಿಗಳನ್ನು ಸೃಷ್ಟಿಸುವುದು, ಆಮೂಲಕ ಸಾಮಾಜಿಕ ಬದಲಾವಣೆ ಬಯಸುವ ಶಕ್ತಿಗಳ ಮುನ್ನೆಗೆತಕ್ಕೆ ಕಾರಣವಾಗುವುದು ಜನವಿಜ್ಞಾನ ಚಳುವಳಿಯ ಪಾತ್ರ.

ಮಂಟೊ ನೂರು......

ಪುಟ 15 ಕ್ಕೆ

ಈಗ 'ದೊಡ್ಡಣ್ಣ' ಎನ್ನಿಸಿಕೊಂಡಿರುವ, ಹಿಂದೆಯೆಲ್ಲ 'ಅಂಕಲ್ ಸ್ಯಾಮ್' ಎಂದು ಕರೆಸಿಕೊಳ್ಳುತ್ತಿದ್ದ ಅಮೇರಿಕಾದ ಪ್ರಭುತ್ವದ ನಿಜ ಹೂರಣವನ್ನು, 'ಸ್ಯಾಮ್ ಅಂಕಲ್ ಗೆ ಪತ್ರಗಳು' ಎಂಬ ಕಿಡಿಗೇಡಿ ಬರಹಗಳ ಮೂಲಕ ಅನಾವರಣಗೊಳಿಸಿದ್ದ ಮಂಟೊ'ರದ್ದು ಅನನ್ಯ ಸೃಜನಶೀಲ ಪ್ರತಿಭೆ. ಆರು ದಶಕಗಳ ಹಿಂದೆ ಮಂಟೊ ಬರೆದ ಆ ಪತ್ರಗಳಲ್ಲಿ ತಮಾಷೆಯಾಗಿಯೇ ವ್ಯಕ್ತಪಡಿಸಿದ್ದ ಹಿಂದೂಸ್ತಾನ, ಪಾಕಿಸ್ತಾನ ಮತ್ತು ಅಮೇರಿಕಾ ನಡುವಣ ರಾಜ ತಾಂತ್ರಿಕ ಸಂಬಂಧಗಳ ಒಕ್ಕಣೆ-ವಿವರಣೆಗಳು ಇಂದು ಕೂಡಾ ಪ್ರಸ್ತುತವೆನ್ನಿಸತೊಡಗಿದಾಗ ಗಾಬರಿಯಾಗುತ್ತದೆ. ಬರಹಗಾರನೊಬ್ಬನಿಂದ ಇಷ್ಟೊಂದು ಕರಾರುವಾಕ್ಕಾಗಿ ಕಣಿ ಹೇಳಲು ಸಾಧ್ಯವೇ? ನಂಬಲಾಗದ ಸತ್ಯ ಇದು.

ಆ ಮಹಾನ್ ಸಾಹಿತಿಯ ಭಾರತೀಯ ಸಾಹಿತ್ಯಕ್ಕೆ ನೀಡಿದ ಕೊಡುಗೆಗಳ ಬಗ್ಗೆಯೂ ಕೆಲವು ಅಪರೂಪದ, ಅಮೂಲ್ಯ ಬರಹಗಳನ್ನು ಅನುವಾದಿಸಿ ಸೇರಿಸಿಕೊಂಡ ಸುರಕೋಡು ಸಾಹೇಬರ 'ಎಚ್ಚರ' ಹೊಸಬರಿಗೆ ಒಂದೊಳ್ಳೆಯ ಪಾಠ.

– ಬೋಳುವಾರು ಮಹಮ್ಮದ್ ಕುಂಞ

(ಪುಸ್ತಕದ ಬ್ಲರ್ಬಿನಿಂದ)

ನಮ್ಮೊಂದಿಗೆ ನಿಮ್ಮ ಮಿಲಿಟರಿ ಒಪ್ಪಂದಕ್ಕೆ ಸಂಬಂಧಿಸಿದಂತೆ ಹೇಳಬೇಕೆಂದರೆ ಇದು ಅಭೂತಪೂರ್ವವಾದದ್ದು ಹಾಗೂ ಅದು ಮುಂದುವರಿಯಬೇಕು. ಭಾರತದೊಂದಿಗೆ ಇಂತಹದೇ ಒಪ್ಪಂದಕ್ಕೆ ನೀವು ಸಹಿ ಹಾಕಬೇಕು. ತಿಪ್ಪೆಗೆಸೆಯಲು ತೆಗೆದಿರಿಸುವ – ಕಳೆದ ಯುದ್ಧದಲ್ಲಿ ನೀವು ಬಳಸಿದ – ನಿಮ್ಮ ಹಳೆಯ ಶಸ್ತ್ರಾಸ್ತ್ರಗಳನ್ನು ನಮ್ಮಿಬ್ಬರಿಗೂ ಮಾರಿಬಿಡಿರಿ. ಈ ಹಳೆಯ ಸರಕುಗಳನ್ನು ಸಾಗಿಸಿ ನೀವು ಕೈ ತೊಳೆದುಕೊಂಡಂತಾಗುವುದು. ಜೊತೆಗೆ ನಿಮ್ಮ ಶಸ್ತ್ರಾಸ್ತ್ರಗಳ ಫ್ಯಾಕ್ಟರಿಗಳು ಸದಾ ನಿಷ್ಕ್ರಿಯವಾಗಿ ಉಳಿಯಲಾರವು.


– ಸ್ಯಾಮ್ ಅಂಕಲ್ ಗೆ ಮಂಟೊ ಪತ್ರದಲ್ಲಿ

JANASHAKTHI KANNADA VARA PATRIKE JUN 23, 2013 Price : Rs. 10/- RNI No. KARKAN /2006/17926 Posted on every
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. W

ದಟ್ಟವಾಗಿ ಕಾಡಿದ 'ಮಂಟೊ ನೂರು ನೆನಪು'

ವಸಂತರಾಜ ಎನ್.ಕೆ.

ಕೋಮು ಸೌಹಾರ್ದ ನೆಲಕಚ್ಚಿರುವ, ಕೋಮು ಗಲಭೆಗಳು ತಾಂಡವವಾಡುತ್ತಿರುವ, ಇನ್ನೂ ಹತ್ತು ಹಲವು 'ವಿಭಜನೆ'ಗಳು ನಮ್ಮನ್ನು ನಿತ್ಯ ಕಾಡುತ್ತಿರುವ ಇವತ್ತಿನ ಸಂದರ್ಭದಲ್ಲಿ ಮಂಟೊ ಮತ್ತೆ ಮತ್ತೆ ನೆನಪಾಗುವ, ಆಗಬೇಕಾದ ಅಪ್ರತಿಮ ಉರ್ದು ಕತೆಗಾರ. ಅಮೃತಸರದಲ್ಲಿ ಹುಟ್ಟಿ ಲಾಹೋರ, ಮುಂಬಯಿಗಳಲ್ಲಿ ಬೆಳೆದ ಮಂಟೊ ದೇಶ ವಿಭಜನೆಯ ನೋವನ್ನು ಸ್ವತಃ ಉಂಡು ಪಾಕಿಸ್ತಾನಕ್ಕೆ ವಲಸೆ ಹೋಗಬೇಕಾಗಿ ಬಂತು. ಸಾಹಿತ್ಯ ಸಮುದಾಯ ಇತ್ತೀಚೆಗೆ (ಜೂನ್ 9 ರಂದು, ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ) 'ಮಂಟೊ ನೂರು ನೆನಪು' ಹಮ್ಮಿಕೊಂಡಿತ್ತು. ಕತೆಗಳ ಸರದಾರನಾದ ಮಂಟೊನ ಶತಮಾನೋತ್ಸವವನ್ನು ಸಮುದಾಯ ಆತನ ಕಥಾರಂಗ ಪ್ರಸ್ತುತಿ, ಸಾಹಿತ್ಯದ ಬಗ್ಗೆ ಸಂವಾದ, ಪುಸ್ತಕ ಬಿಡುಗಡೆಗಳೊಂದಿಗೆ ಆಚರಿಸಿತು.



ಗಮನ ಸೆಳೆದ ಮಂಟೊ ಕಥಾರಂಗ

ಮಂಟೊ ಕಥಾರಂಗ ಪ್ರಸ್ತುತಿ, ಕಾರ್ಯಕ್ರಮದ ಅತ್ಯಂತ ಆಸಕ್ತಿಕಾರಕ ಮತ್ತು ಗಮನ ಸೆಳೆದ ಭಾಗವಾಗಿತ್ತು. 'ಕಥಾರಂಗ' ಡಾ.ಶ್ರೀಪಾದ ಭಟ್ ಹೆಣೆದಿರುವ ಕತೆಯ ವಾಚಿಕಾಭಿನಯದ ಒಂದು ವಿಶಿಷ್ಟ ಪ್ರಯೋಗ. 'ಕಥಾರಂಗ' ಕತೆಗಾರನ ಆಶಯವನ್ನು ಸ್ಫುಟೀಕರಿಸುವ ಒತ್ತು ಇರುವ 'ನಾಟಕೀಯ' ಓದು ಮತ್ತು ಅಭಿನಯದ ಮೂಲಕ ಕತೆಯ ದಟ್ಟ ಅನುಭವವನ್ನು ಕೊಡುತ್ತದೆ. 'ಕಥಾರಂಗ'ವನ್ನು ಕನಿಷ್ಟ ರಂಗ ಪರಿಕರಗಳೊಂದಿಗೆ ಪ್ರಸ್ತುತಪಡಿಸಲಾಗುತ್ತದೆ. ಸಾಮಾನ್ಯ ಓದಿನಲ್ಲಿ ಮತ್ತು ನಾಟಕ ರೂಪದಲ್ಲಿ ಕಳೆದು ಹೋಗಬಹುದಾದ ಹಲವು ಅಂಶಗಳನ್ನು ಕಥಾರಂಗ ರೂಪ ಕಾಪಿಡುತ್ತದೆ. ಹಳ್ಳಿ ಕಟ್ಟೆಯ ಸುತ್ತ ಕೂತು ಕತೆ ಹೇಳುವ ಕೇಳುವ ಸಂಪ್ರದಾಯದ ಉತ್ತಮ ಅಂಶಗಳನ್ನೊಳಗೊಂಡು ಅದನ್ನು ಮುಂದೊಯ್ಯುತ್ತಾ ಹೊಸ ಕಲಾರೂಪದ ಮಟ್ಟಕ್ಕೆ ಏರಿಸುತ್ತದೆ.

ಡಾ.ಶ್ರೀಪಾದ ಭಟ್ ನಿರ್ದೇಶನದಲ್ಲಿ ಬೆಂಗಳೂರು ಸಮುದಾಯ ಕನ್ನಡದಲ್ಲಿ ಪ್ರಸ್ತುತ ಪಡಿಸಿದ ಮಂಟೊರ ಪ್ರಸಿದ್ಧ ಕತೆಗಳ – 'ತೋಬಾ ಟೇಕ್ ಸಿಂಗ್', 'ಖೋಲ್ ದೋ' (ಓಪನ್ ಮಾಡು), "ಠಂಡಾ ಗೋಶ್" (ತಣ್ಣಗಿನ ಮಾಂಸ) ಮತ್ತು ಎರಡು ಲಘು ಕತೆಗಳ– ಕಥಾರಂಗ ಪ್ರಯೋಗ ಅತ್ಯಂತ ಪರಿಣಾಮಕಾರಿಯಾಗಿತ್ತು. ಬೆಂಗಳೂರಿನಲ್ಲಿ ನೆಲೆಸಿರುವ ಉರ್ದು ಬಲ್ಲ ಕಲಾವಿದರ ಸಹಾಯದಿಂದ ಮೂಲ ಉರ್ದುನಲ್ಲಿ ಮಂಟೊರ ಇನ್ನೊಂದು ಪ್ರಸಿದ್ಧ ಕತೆ 'ಖುದಾ ಕಿ ಕಸಂ' (ದೇವರ ಮೇಲಾಣೆ) ಮತ್ತು ಆರು 'ಸ್ಕೆಚ್'ನಂತಹ ಲಘು ಕತೆಗಳ ಕಥಾರಂಗ ಪ್ರಸ್ತುತಿ ಕಾರ್ಯಕ್ರಮದ ಇನ್ನೊಂದು ವಿಶಿಷ್ಟತೆಯಾಗಿತ್ತು. ಮಂಟೊ ಕಥಾರಂಗದಲ್ಲಿ 16ಕ್ಕೂ ಹೆಚ್ಚು ಕಲಾವಿದರು ಭಾಗವಹಿಸಿದ್ದರು. ಪ್ರೊ. ಎಸ್.ಆರ್. ರಮೇಶ್ ನಿರ್ದೇಶನದ ವ್ಯಾಸ್‌ರಿನ್ 'ಪರಿವರ್ತನ'ದ ಮಂಟೊ 'ಸಾಹೆ' ಕತೆ ಆಧಾರಿತ ನಾಟಕ ಪ್ರದರ್ಶನ ಮಂಟೊ ಕತೆಗಳ ಅನುಭವವನ್ನು ಇನ್ನಷ್ಟು ದಟ್ಟವಾಗಿಸಿತು. ಮಂಟೊ ಕಡೆದ ಮರೆಯಲಾಗದ ಪಾತ್ರ 'ತೋಬಾ ಟೆಕ್ ಸಿಂಗ್' ಮೇಲೆ ಪ್ರಸಿದ್ಧ ಉರ್ದು ಕವಿ ಗುಲ್ಜಾರ್ ಬರೆದ ಕವನ ವಾಚನ ಮೂಲಕ, ಇಂದಿಗೂ ಆ ಪಾತ್ರದ ಪ್ರಸ್ತುತತೆಯನ್ನು ಸ್ವತಃ ಉರ್ದು ಕವಿ ಆಗಿರುವ ಮಾಹೆರ್ ಮನ್ಸೂರ್ ಮನದಟ್ಟು ಮಾಡಿದರು. 'ಇನ್ನೂ ಹಲವು ವಿಭಜನೆಗಳಾಗಬೇಕಿವೆ, ಆ ವಿಭಜನೆ ಮೊದಲನೆಯದಷ್ಟೇ... ಇನ್ನೂ ಎಲ್ಲಾ ಹುಚ್ಚರು ತಮ್ಮ ಜಾಗ ಮುಟ್ಟಿಲ್ಲ, ಇನ್ನೂ ಈ ಕಡೆಯೂ ಆ ಕಡೆಯೂ ಇದ್ದಾರೆ' ಮುಂತಾದ ಮಾರ್ಮಿಕ ಲೈನುಗಳಿತ್ತು ಕವಿತೆಯಲ್ಲಿ.



ಎಸ್. ಸತ್ಯು ಪುಸ್ತಕ ಬಿಡುಗಡೆ ಮಾಡುತ್ತಿರುವುದು

ದೇಶ ಭಾಷೆಗಳ ಗಡಿ ಮೀರಿದ ಕತೆಗಾರ

ಇದಕ್ಕಿಂತ ಮೊದಲು ಕಾರ್ಯಕ್ರಮ ಆಶಯ ಗೀತೆಯಾಗಿ ನೆರೂದಾ ಅವರ 'ನೀನೇಕೆ ಹಾಡುವುದಿಲ್ಲ...ಬೀದಿಯಲ್ಲಿ ರಕ್ತವಿದೆ' ಎಂಬ ಪ್ರಸಿದ್ಧ ಹಾಡಿನಿಂದ ಆರಂಭವಾಯಿತು. ಖ್ಯಾತ ರಂಗ ಮತ್ತು ಸಿನೆಮಾ ನಿರ್ದೇಶಕ ಎಂ.ಎಸ್.ಸತ್ಯು ಕಾರ್ಯಕ್ರಮವನ್ನು ವಿಶಿಷ್ಟ ರೀತಿಯಲ್ಲಿ ಊದು ಬತ್ತಿ ಹಚ್ಚಿ ಉದ್ಘಾಟಿಸಿದರು. ಚಿಂತನ ಪುಸ್ತಕ ಪ್ರಕಟಿಸಿರುವ ಹಸನ್ ನಯೀಂ ಸುರಕೋಡ ಅವರ ಮಂಟೊನ 'ಸ್ಯಾಮ್ ಅಂಕಲ್ ಗೆ ಪತ್ರಗಳು ಮತ್ತು ಇತರ ಕಿಡಿಗೇಡಿ ಬರಹಗಳು' ಪುಸ್ತಕವನ್ನು ಬಿಡುಗಡೆ ಮಾಡಿದರು. ವೇದಿಕೆಯಲ್ಲಿ ಆಗಿನ ಭಾಷಣಕಾರ ಅಥವಾ ಕಥಾರಂಗ/ನಾಟಕ ಕಲಾವಿದರು ಬಿಟ್ಟರೆ ಇನ್ಯಾರೂ ಇಲ್ಲದ್ದು, ಮತ್ತು ಎದ್ದು ಕಾಣುತ್ತಿದ್ದ (ಬರವಣಿಗೆಯ ಮಧ್ಯೆ ಯೋಚನೆಯಲ್ಲಿ ಮುಳುಗಿರುವ, ಆತ ತನ್ನ ಗೋರಿಯ ಮೇಲೆ ಬರೆಸಬೇಕೆಂದಿದ್ದ ಪ್ರಸಿದ್ಧ ಚರಮ ವಾಕ್ಯದೊಂದಿಗೆ ಇದ್ದ) ಮಂಟೊ 'ಲೈಫ್ ಸೈಜ್' ಕಟೌಟ್ ಕಾರ್ಯಕ್ರಮದ ಇನ್ನೊಂದು ವಿಶೇಷತೆಯಾಗಿತ್ತು. ದೇಶ ವಿಭಜನೆಯ ಬಗೆಗಿನ ಗಮನಾರ್ಹ ಚಿತ್ರ 'ಗರಂ ಹವಾ' ನಿರ್ದೇಶಿಸಿದ ಖ್ಯಾತಿಯ ಮತ್ತು ಕನ್ನಡ-ಉರ್ದು ಎರಡೂ ಭಾಷೆಗಳಲ್ಲಿ ನಾಟಕ-ಸಿನಿಮಾ ನಿರ್ದೇಶಿಸಿರುವ ಸತ್ಯು ಅವರು ಕಾರ್ಯಕ್ರಮದ ಆಶಯ ಭಾಷಣವನ್ನೂ ಮಾಡಿದರು. ಗಾಳಿ ಬೆಳಕಿನಂತೆ ಸಾಹಿತ್ಯಕ್ಕೆ ದೇಶ ಭಾಷೆಗಳ ಸರಹದ್ದಿಲ್ಲ. ಮಂಟೊ ದೇಶ ಭಾಷೆಗಳ ಗಡಿ ಮೀರಿದ ಕತೆಗಾರ. ದೇಶ ವಿಭಜನೆಯ ಅವಧಿಯಲ್ಲಿ ಮತ್ತು ಮೊದಲು ಹಾಗೂ ನಂತರವೂ ಸಮಾಜ-ವ್ಯಕ್ತಿಗಳನ್ನು ಕಾಡಿದ ಕ್ಲಿಷ್ಟ ಸವಾಲು-ಸನ್ನಿವೇಶಗಳನ್ನು ಮಾನವೀಯ ದೃಷ್ಟಿಯಿಂದ ಶ್ರೇಷ್ಟ ಕತೆಗಳಲ್ಲಿ ಹಿಡಿದಿಟ್ಟ ಮಂಟೊ ಕತೆಗಳು ಅದರಿಂದಾಗಿಯೇ ಅರ್ಧ ಶತಮಾನದ ನಂತರವೂ ಸಾರ್ವತ್ರಿಕತೆಯನ್ನೂ ಸಾರ್ವಕಾಲಿಕತೆಯನ್ನೂ ಪಡೆದಿದೆ. ಎಂಬುದು ಸತ್ಯು ಆಶಯ ಭಾಷಣದ ಸಾರವಾಗಿತ್ತು.

ವಾಸ್ತವ ನೆಲೆಯ ಗಟ್ಟಿ ರೂಪಕಗಳು

ಮಂಟೊ ಸಾಹಿತ್ಯದ ಬಗೆಗಿನ ಸಂವಾದದಲ್ಲಿ ಡಾ.ಶ್ರೀಪಾದ ಭಟ್, ಪ್ರೊ. ಎಸ್.ಆರ್.ರಮೇಶ್, ಡಾ.ಜೆ.ಬಾಲಕೃಷ್ಣ ಮತ್ತು ಹಸನ್ ನಯೀಂ ಸುರಕೋಡ ಭಾಗವಹಿಸಿದ್ದರು. ಡಾ.ಶ್ರೀಪಾ[...] ಕತೆಗಾರ ಮಂಟೊ, ಆತನ [...] ಮತ್ತು ಕಥಾರಂಗ ಕಲಾರೂಪ[...] ಪ್ರಾಸ್ತಾವಿಕವಾಗಿ ಮಾತನಾಡಿದರು. [...] ಕತೆಗಳಲ್ಲಿ ಮನುಷ್ಯತ್ವದ ಹುಡು[...] ತಣ್ಣಗೆ ಸುಡುವ ಆರ್ದ್ರತೆ ಇದ[...] ಕತೆಗಳು ಅತ್ಯಂತ ವಾ[...] ನೆಲೆಯೊಂದಿಗೆ ಪರಿಣಾಮಕಾರಿಯ[...] ರೂಪಕಗಳನ್ನೂ ಕಟ್ಟಿ ಕೊಡುತ್ತದೆ [...] ಮಂಟೊನೇ ಸ್ವತಃ ಬರೆದ [...] ಪ್ರಾರ್ಥನೆ'ಯ ಕವನ ರೂಪವನ್ನೂ, [...] ಮಂಟೊ' ಎಂಬ ಕವನವನ್ನೂ [...] 'ಮಂಟೊ ಕತೆಗಳಲ್ಲಿ ದೇಶ ವಿ[...] ದುರಂತ'ದ ಬಗ್ಗೆ ಮಾತನಾಡುತ[...] ವಿಭಜನೆಯ ದುರಂತದ ಪೂರ್ಣ[...] ಕಟ್ಟಿಕೊಡುವಲ್ಲಿ ಉರ್ದು ಕತೆಗಳ[...] ಚರಿತ್ರೆಯಷ್ಟೇ ಮಹತ್ವದ ಪಾತ್ರ ವ[...] ಎಂದರು. ಅವುಗಳಲ್ಲಿ ಮಂಟೊ ಕ[...] ವಿಶಿಷ್ಟ ಪಾತ್ರ ಎನ್ನುತ್ತಾ ಕಥಾರಂ[...] ಪ್ರಸ್ತುತಿಗೆ ಆಯ್ಕೆ ಮಾಡಿದ್ದ ಮತ[...] ಮಂಟೊ ಕತೆಗಳ ಆಧಾರದಿಂದ [...] ವಿಶದಪಡಿಸಿದರು.

ಪ್ರೊ. ಎಸ್.ಆರ್.ರಮೇಶ್ '[...] ಸಾಹಿತ್ಯದಲ್ಲಿ ರಿಯಲಿಸಂ' ಎಂಬ ವಿ[...] ಮೇಲೆ ಮಾತನಾಡುತ್ತಾ ಆತನ [...] ಶೈಲಿಯ ಮತ್ತು ಕತೆಗಳ ಹೂರಣ[...] ವಿವರವಾಗಿ ಮಾತನಾಡಿದರು. ಸ[...] ಕೆಳಪದರದ ಮತ್ತು ಹೊರಗಣ [...] ಕಥಾವಸ್ತುವಾಗಿ ಆಯ್ಕೆ, 'ಅಶ್ಲೀ[...] ಆಪಾದನೆಗೆ ಎಡೆ ಮಾಡಿಕೊಟ್ಟ ಪ್ರಕ್ರ[...] ಮಹಿಳಾದೇಹವನ್ನು ಒಂದೇ ರೀ[...] ನೋಡುವ ದಿಟ್ಟತನ, ಹಲವು [...] ವಾಸ್ತವ ಮತ್ತು ಫ್ಯಾಂಟಸಿ ನಡುವೆ ಓ[...] ವಿಶಿಷ್ಟ ಶೈಲಿ – ಮತ್ತಿತರ ವಿ[...] ಬಗ್ಗೆ ವಿವರವಾಗಿ ಮಾತನಾಡಿದರು. [...] 'ಪಾಕಿಸ್ತಾನ್ ಟೈಮ್ಸ್' ಸಂಪಾದ[...] ಅವಧಿಯಲ್ಲಿ ನಡೆದ ಘಟನೆಯ[...] ಮೂಲಕ ಸುರಕೋಡ [...] ಸೃಜನೇತರ ಬರಹಗಳ ಪ್ರಾಮು[...] ಒತ್ತು ಕೊಟ್ಟರು. ಆ ಮೂಲಕ [...] ಸೃಜನಶೀಲ ಬರಹಗಾರನಾಗಿ (ಮು[...] ಕತೆಗಾರನಾಗಿ) ಪ್ರಸಿದ್ಧನಾದರೂ [...] ಸೃಜನೇತರ ಬರಹಗಳ ಪ್ರಾಮುಖ್[...] ಗಮನ ಸೆಳೆದರು. ಅಂದು ಬಿಡುಗಡೆ[...] 'ಸ್ಯಾಮ್ ಅಂಕಲ್ ಗೆ ಪತ್ರಗಳು ಮತ್ತು [...] ಕಿಡಿಗೇಡಿ ಬರಹಗಳು' ಪುಸ್ತಕ ಮ[...] ಇಂತಹ ಬರಹಗಳ ಸಂಗ್ರಹ.

ಮಂಟೊ ತನ್ನ ಗೋರಿಯ [...] ಬರೆಸಬೇಕೆಂದಿದ್ದ ಮತ್ತು ಕಾರ್ಯ[...] ಮಂಟೊ ಕಟೌಟ್‌ನಲ್ಲಿ ಸಹ ಕಂಡ [...]

'ಗಾಂಚಾಲಿ' ಚರಮ ಸಂದೇಶ

"ಇಗೋ ಮಂಟೊ ಮಣ್ಣಾಗಿದ್ದಾನೆ[...]
ಅವನೆದೆಯಲ್ಲಿ ಭದ್ರವಾಗಿರುವ [...]
ನೇಯುವ ಕುಸುರಿ ಕಲೆಯೂ ಮಣ[...]
ಮಣ್ಣ ಹೊದ್ದು ಮಲಗಿರುವ ಮಂ[...]
ಯೋಚಿಸುತ್ತಿದ್ದಾನೆ
ಕತೆಗಾರಿಕೆಯ ಸರದಾರನ್ಯಾರು–ತಾ[...]
ದೇವರೋ!"

ಪುಟ[...]

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout,
BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-
560086. Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12,
18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross,
Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout,
BANGALORE-560086 Editor : NITHYANANDASWAMI